# ಈಶಾವಾಸ್ಯೋಪನಿಷತ್ತು

ಅಧ್ಯಾತ್ಮಪ್ರಕಾಶಕಾರ್ಯಾಲಯ
ಹೊಳೆನರಸೀಪುರ-573 211
ಹಾಸನ ಜಿಲ್ಲೆ
1997

ಅಧ್ಯಾತ್ಮಗ್ರಂಥಾವಳಿ

ಶ್ರೀ ಶಾಂಕರಭಾಷ್ಯಸಮೇತ

# ಈಶಾವಾಸ್ಯೋಪನಿಷತ್ತು

ಉಪನಿಷತ್ತಿನ ಮತ್ತು ಭಾಷ್ಯದ ಸಂಸ್ಕೃತಮೂಲ, ಅನುವಾದ, ಟಿಪ್ಪಣಿ, ಸಾರ ಮುಂತಾದವುಗಳೊಡನೆ

ಬರೆದವರು :
ಶ್ರೀ ಶ್ರೀ ಸಚ್ಚಿದಾನಂದೇಂದ್ರಸರಸ್ವತೀಸ್ವಾಮಿಗಳವರು

ಕ್ರಮಾಂಕ ೧

ಪ್ರಕಾಶಕರು :
ಅಧ್ಯಾತ್ಮಪ್ರಕಾಶಕಾರ್ಯಾಲಯ
ಹೊಳೆನರಸೀಪುರ 573 211
ದೂರವಾಣಿ 08175-73820
1997

ಮೊದಲನೆಯ ಸಂಸ್ಕರಣ 1925
ಎರಡನೆಯ ಸಂಸ್ಕರಣ 1945
ಮೂರನೆಯ ಸಂಸ್ಕರಣ 1965
ನಾಲ್ಕನೆಯ ಸಂಸ್ಕರಣ 1982
ಐದನೆಯ ಸಂಸ್ಕರಣ 1997 (2000)

ಇದರ ಹಕ್ಕುಗಳೆಲ್ಲವೂ ಅಧ್ಯಾತ್ಮಪ್ರಕಾಶಕಾರ್ಯಾಲಯದವು
All Rights Reserved

ಮುದ್ರಣಕಾರರು :
**ಲೇಸರ್ ಗ್ರಾಫಿಕ್ಸ್**
280, ಚೆಂಗಯ್ಯ ಲೇಔಟ್, ತ್ಯಾಗರಾಜನಗರ
ಬೆಂಗಳೂರು - 560 028
ದೂರವಾಣಿ : 6675369

# ಬಿ ನ್ನ ಹ

ಅಧ್ಯಾತ್ಮಪ್ರಕಾಶಕಾರ್ಯಾಲಯವು ಬ್ರಹ್ಮೀಭೂತ ಶ್ರೀ ಶ್ರೀ ಸಚ್ಚಿದಾನಂದೇಂದ್ರ ಸರಸ್ವತೀಮಹಾಸ್ವಾಮಿಗಳವರ ಕೃಪಾಶೀರ್ವಾದಗಳಿಂದ ಮುನ್ನಡೆಯುತ್ತಿದ್ದು ಆ ಮಹನೀಯರು ಕನ್ನಡ ಸಾರಸ್ವತಪ್ರಪಂಚಕ್ಕೆ ಅನುಗ್ರಹಿಸಿರುವ ಶಾಂಕರಪ್ರಸ್ಥಾನತ್ರಯ ಭಾಷ್ಯಗಳನ್ನು - ಪ್ರತಿಗಳು ಮುಗಿದಂತೆಲ್ಲ - ಮತ್ತೆ ಮತ್ತೆ ಪುನರ್ಮುದ್ರಿಸಿ ಪ್ರಕಟಿಸುತ್ತಿದೆ. ಈ ಪ್ರಯತ್ನದಲ್ಲಿ ಈಗ ನಾವು ಈಶಾವಾಸ್ಯೋಪನಿಷದ್ಭಾಷ್ಯವನ್ನು ಐದನೆಯ ಬಾರಿಗೆ ಹೊರತಂದಿರುತ್ತೇವೆ.

ಕಳೆದ ೪೮ ವರ್ಷಗಳಿಂದಲೂ ಹೊಳೆನರಸೀಪುರದ ನಮ್ಮ ಸ್ವಂತ ಮುದ್ರಣಾಲಯದಲ್ಲಿಯೇ ಪ್ರಕಟವಾಗುತ್ತಿದ್ದ ಗ್ರಂಥಗಳು ಈಚೆಗೆ 1996 ನೇ ಏಪ್ರಿಲ್‌ನಿಂದ ಮುದ್ರಣಾಲಯವನ್ನು ತಾತ್ಕಾಲಿಕವಾಗಿ ನಿಲ್ಲಿಸಿದ್ದರಿಂದ ಪರಸ್ಥಳದಲ್ಲಿ ಪುಸ್ತಕಗಳು ಮುದ್ರಿತವಾಗುತ್ತಿದ್ದು ಅನಿವಾರ್ಯವಾಗಿ ಕೆಲವು ಲೋಪದೋಷಗಳು ಸಂಭವಿಸ ಬಹುದಾಗಿದೆ. ವಾಚಕರು ದಯಮಾಡಿ ಇಂಥ ದೋಷಗಳನ್ನು ತಿಳಿಸಿಕೊಟ್ಟು ಸಹಕರಿಸಬೇಕಾಗಿ ಪ್ರಾರ್ಥನೆ.

ಈ ಗ್ರಂಥ ಪ್ರಕಟನೆಗೆ ಈ ಕೆಳಗೆ ಕಂಡಂತೆ ಸಹಾಯದ್ರವ್ಯವನ್ನು ಕೃತಜ್ಞತೆಯಿಂದ ಸ್ವೀಕರಿಸಿದೆ :-

| | ರೂ. ಪೈ |
|---|---|
| 1. ಶ್ರೀ ಡಿ. ತಿಮ್ಮಪ್ಪನವರು, ಕಲ್ಕೆರೆ | 500=00 |
| 2. ಹೆಚ್.ಜಿ. ಗಡ್ಲಬಸಪ್ಪ, ಶಿವಮೊಗ್ಗ | 1,000=00 |
| 3. ಸ್ವಾಮಿ ನಿಜಾನಂದಭಾರತಿ, ಹೃಷೀಕೇಶ | 2,500=00 |
| 4. ಡಾ|| ಎನ್. ಕಲಾವತಿ, ತುಮಕೂರು | 1,000=00 |
| 5. ಎ. ವಿ. ಲಕ್ಷ್ಮೀಪತಿ, ಬೆಂಗಳೂರು | 1,000=00 |
| ಒಟ್ಟು ರೂ. | 6,000=00 |

ಈ ಮಹಾಶಯರುಗಳಿಗೆ ನಮ್ಮ ಕೃತಜ್ಞತಾಪೂರ್ವಕವಾದ ಅಭಿನಂದನೆಗಳನ್ನು ಈ ಮೂಲಕ ಅರ್ಪಿಸಿದೆ.

ಎಂದಿನಂತೆ ವಾಚಕರು ಈ ಗ್ರಂಥವನ್ನು ಬರಮಾಡಿಕೊಂಡು ಪ್ರೋತ್ಸಾಹಿಸಬೇಕಾಗಿ ಪ್ರಾರ್ಥನೆ.

ಇತಿ - ಸಜ್ಜನ ವಿಧೇಯ,

**H.S. ಲಕ್ಷ್ಮೀನರಸಿಂಹಮೂರ್ತಿ**

**ಅಧ್ಯಾತ್ಮ ಗ್ರಂಥಾವಳಿಯ ಸಂಪಾದಕ**

ಹೊಳೆನರಸೀಪುರ

ತಾ: 5-1-1997

# ಪೀ ಠಿ ಕೆ

ಶುಕ್ಲಯಜುರ್ವೇದಕ್ಕೆ ಹದಿನೈದು ಶಾಖೆಗಳಿವೆಯೆಂದೂ ಹದಿನೇಳು ಶಾಖೆಗಳಿವೆಯೆಂದೂ ಮತಭೇದವುಂಟು. **ಕಾಣ್ವ, ಮಾಧ್ಯಂದಿನ** - ಎಂಬ ಎರಡು ಶಾಖೆಗಳಮಟ್ಟಿಗೆ ಈಗ ಪ್ರಸಿದ್ಧವಾಗಿವೆ. ಕಣ್ವ, ಮಧ್ಯಂದಿನ - ಎಂಬ ಋಷಿಗಳಿಗೆ ಯಾಜ್ಞವಲ್ಕ್ಯರು ಹೇಳಿಕೊಟ್ಟ ಅಧ್ಯಯನಕ್ರಮದಿಂದ ಈ ಶಾಖೆಗಳಾದವಂತೆ. ಭಗವತ್ಪಾದರವರು ಕಾಣ್ವಶಾಖೆಯ ಕ್ರಮವನ್ನು ಅನುಸರಿಸಿ ತಮ್ಮ ಭಾಷ್ಯವನ್ನು ಮಾಡಿರುತ್ತಾರೆ. ಇದೇ ಉಪನಿಷತ್ತಿಗೆ ಮತ್ತೆ ಕೆಲವರು ತಮ್ಮ ತಮ್ಮ ಮತದ ಅನುಸಾರವಾಗಿ ಮಾಧ್ಯಂದಿನಶಾಖೆಯ ಕ್ರಮದಲ್ಲಿ ವ್ಯಾಖ್ಯಾನಮಾಡಿರುತ್ತಾರೆ.

ಈ ಉಪನಿಷತ್ತು ಶುಕ್ಲಯಜುಸ್ಸಂಹಿತೆಯ ನಲವತ್ತನೆಯ ಅಧ್ಯಾಯವಾಗಿರುತ್ತದೆ. ಮಿಕ್ಕ ಉಪನಿಷತ್ತುಗಳು ಬ್ರಾಹ್ಮಣದ ಭಾಗವಾದ ಅರಣ್ಯಕದಲ್ಲಿದ್ದು ಇದು ಮಟ್ಟಿಗೆ ಸಂಹಿತೆಗೇ ಸೇರಿರುವದರಿಂದ ಇದನ್ನು "**ಸಂಹಿತೋಪನಿಷತ್ತು**" ಎಂದು ಕರೆಯುವರು. ಇದರ ಮೊದಲನೆಯ ಮಂತ್ರವು "ಈಶಾವಾಸ್ಯಮ್" ಎಂದು ಮೊದಲಾಗಿರುವದರಿಂದ ಇದಕ್ಕೆ **ಈಶಾವಾಸ್ಯೋಪನಿಷತ್ತು, ಈಶೋಪನಿಷತ್ತು** - ಎಂಬ ಹೆಸರುಗಳೂ ಪ್ರಸಿದ್ಧವಾಗಿವೆ.

ಈ ಉಪನಿಷತ್ತು ಕರ್ಮಕಾಂಡದ ಕೊನೆಯಲ್ಲಿರುವದರಿಂದ ಕರ್ಮಕ್ಕೆ ಸಂಬಂಧಪಟ್ಟಿರುವ ಜ್ಞಾನವನ್ನು ಹೇಳುತ್ತದೆಯೆಂದೂ ಇದರ ೧೧ನೆಯ ಮಂತ್ರದಲ್ಲಿ ಜ್ಞಾನಕರ್ಮಸಮುಚ್ಚಯವನ್ನು ಹೇಳಿದೆಯೆಂದೂ ಹದಿನಾಲ್ಕನೆಯ ಮಂತ್ರದಲ್ಲಿ ಪರಿಣಾಮವಾದವನ್ನು ಹೇಳಿದೆಯೆಂದೂ ದ್ವೈತಾದ್ವೈತಮತದವರಾದ ಭರ್ತೃ ಪ್ರಪಂಚ, ಭಾಸ್ಕರಾಚಾರ್ಯ - ಮೊದಲಾದವರು ಅಭಿಪ್ರಾಯಪಡುತ್ತಾರೆ. ಭಗವತ್ಪಾದರವರು ಈ ಉಪನಿಷತ್ತಿನಲ್ಲಿ ಪ್ರವೃತ್ತಿ, ನಿವೃತ್ತಿ - ಎಂದು ಎರಡು ಬಗೆಯಾಗಿರುವ ವೇದೋಕ್ತಧರ್ಮಗಳನ್ನು ಹೇಳಿದೆಯೆಂದು ತಿಳಿಸಿ ವಿಭಾಗಮಾಡಿರುವರು. ಪರಮಾತ್ಮಸ್ವರೂಪವನ್ನು ತಿಳಿಸುವದೇ ಈ ಉಪನಿಷತ್ತಿನ ಮುಖ್ಯೋದ್ದೇಶವೆಂದೂ ಇವರು ನಿರ್ಣಯಮಾಡಿರುತ್ತಾರೆ.

ಹನ್ನೊಂದು, ಹದಿನಾಲ್ಕು - ಈ ಎರಡು ಮಂತ್ರಗಳಿಗೆ ಇಲ್ಲಿ ಬರೆದಿರುವ ಭಾಷ್ಯಕ್ಕೂ ಐತರೇಯ, ತೈತ್ತಿರೀಯ, ಗೌಡಪಾದರ ಕಾರಿಕೆ - ಇವುಗಳಲ್ಲಿರುವ ಭಾಷ್ಯಕ್ಕೂ ವ್ಯತ್ಯಾಸವು ಕಂಡುಬರುತ್ತದೆ. ಈ ವಿಷಯದಲ್ಲಿ ಟೀಕಾಕರ್ತರೂ ಏನೂ ಹೇಳಿಲ್ಲ. ಆದ್ದರಿಂದ ಇದ್ದಂತೆ ಭಾಷ್ಯವನ್ನು ಕನ್ನಡಿಸಿ ಪರಿಶಿಷ್ಟದಲ್ಲಿ ಮಿಕ್ಕ ಕಡೆಗಳಲ್ಲಿರುವ ಈ ಮಂತ್ರಗಳ ಭಾಷ್ಯವನ್ನೂ ವಾಚಕರ ಸಲುವಾಗಿ ಕೊಟ್ಟಿರುತ್ತದೆ.

**ಗ್ರಂಥಕರ್ತ.**

# ಸಂಕೇತಾಕ್ಷರಗಳ ವಿವರಣೆ

ಭಾಷ್ಯದಲ್ಲಿ (೭,೮) ಹೀಗೆ ಕೊಟ್ಟಿರುವವುಗಳು ಮಂತ್ರವನ್ನು ಸೂಚಿಸುವವು.

| | |
|---|---|
| (ಆ॥) | ಆನಂದಾಶ್ರಮದಲ್ಲಿ ಪ್ರಕಾಶವಾಗಿರುವ ಪುಸ್ತಕದಲ್ಲಿರುವ ಪಾಠ |
| ಕ. | ಕಠೋಪನಿಷತ್ತು |
| ಗೀ. | ಭಗವದ್ಗೀತೆ |
| ಗೀ. ಭಾ. | ಗೀತಾಭಾಷ್ಯ |
| ಛಾಂ. | ಛಾಂದೋಗ್ಯೋಪನಿಷತ್ತು |
| ಜೈ. ಸೂ. | ಜೈಮಿನಿಯ ಪೂರ್ವಮೀಮಾಂಸಾಸೂತ್ರಗಳು |
| ತೈ. | ತೈತ್ತಿರೀಯೋಪನಿಷತ್ತು |
| ತೈ. ಭಾ. | ತೈತ್ತಿರೀಯೋಪನಿಷತ್ತಿನ ಭಾಷ್ಯ |
| ಪ್ರ. | ಪ್ರಶ್ನೋಪನಿಷತ್ತು |
| ಬೃ. | ಬೃಹದಾರಣ್ಯಕೋಪನಿಷತ್ತು |
| ಬೃ. ಭಾ. | ಬೃಹದಾರಣ್ಯಕೋಪನಿಷತ್ತಿನ ಭಾಷ್ಯ |
| ಮನು. | ಮನುಸ್ಮೃತಿ |
| ಮಹಾ. ನಾ. | ಮಹಾನಾರಾಯಣೋಪನಿಷತ್ತು. ''ಅಂಭಸಿ''; ತೈತ್ತಿರೀಯ ಆರಣ್ಯಕದ ಭಾಗ. |
| ಮುಂ. | ಮುಂಡಕೋಪನಿಷತ್ತು |
| ಮುಂ. ಭಾ. | ಮುಂಡಕೋಪನಿಷತ್ತಿನ ಭಾಷ್ಯ |
| ಮೋ. ಧ. | ಮಹಾಭಾರತದ ಮೋಕ್ಷಧರ್ಮಪರ್ವ |
| (ವಾ॥) | ವಾಣೀವಿಲಾಸ ಮುದ್ರಣಾಲಯದ ಪುಸ್ತಕದಲ್ಲಿರುವ ಪಾಠ |
| ವಿ. ಪು. | ವಿಷ್ಣುಪುರಾಣ |
| ಶತ. ಬ್ರಾ. | ಶತಪಥಬ್ರಾಹ್ಮಣ; ಶುಕ್ಲಯಜುರ್ವೇದದ ಬ್ರಾಹ್ಮಣವು. |
| ಶಾ. ಭಾ. ಜೈ. ಸೂ. | ಶಾಬರಭಾಷ್ಯ, ಜೈಮಿನೀಯ ಸೂತ್ರಗಳ ಮೇಲೆ ಬರೆದದ್ದು |
| ಶ್ವೇ. | ಶ್ವೇತಾಶ್ವತರೋಪನಿಷತ್ತು |
| (ಹಿ॥) | ಶ್ರೀಯುತ ಎಂ. ಹಿರಿಯಣ್ಣ, ಎಂ.ಎ., ರವರು ಇಂಗ್ಲೀಷು ಭಾಷಾಂತರದಲ್ಲಿ ಒಪ್ಪಿರುವ ಪಾಠ. |

# ವಿ ಷ ಯಾ ನು ಕ್ರ ಮ ಣಿ ಕೆ


| | ಪುಟ ಸಂ. |
|---|---|
| ಭಾಷ್ಯಾವತರಣಿಕೆ | ೧ |
| ಉಪನಿಷತ್ತು | ೪ |
| ಜ್ಞಾನನಿಷ್ಠೆ | ೪ |
| ಕರ್ಮನಿಷ್ಠೆ | ೭ |
| ಮೊದಲನೆಯ ಎರಡು ಮಂತ್ರಗಳ ಅರ್ಥದ ವಿಷಯದಲ್ಲಿ ವಿಚಾರ | ೯ |
| ಆತ್ಮನ ಯಾಥಾತ್ಮ್ಯ | ೧೧ |
| ಜ್ಞಾನನಿಷ್ಠೆ, ಕರ್ಮನಿಷ್ಠೆ - ಇವುಗಳ ವಿವೇಕ | ೨೬ |
| ಕರ್ಮೋಪಾಸನೆಗಳ ಸಮುಚ್ಚಯ | ೩೧ |
| ವ್ಯಾಕೃತಾವ್ಯಾಕೃತೋಪಾಸನೆಗಳ ಸಮುಚ್ಚಯ | ೩೫ |
| ಸಮುಚ್ಚಯೋಪಾಸಕನು ಮಾಡುವ ಮರಣಕಾಲದ ಪ್ರಾರ್ಥನೆ | ೪೦ |
| ಸಮುಚ್ಚಯವಿಷಯದಲ್ಲಿ ಚರ್ಚೆ | ೪೯ |
| ಉಪನಿಷತ್ತಿನ ಸಾರ | ೫೪ |
| **ಪರಿಶಿಷ್ಟ** : ಉಪನಿಷತ್ತಿನ ಮಾಧ್ಯಂದಿನ ಪಾಠ | ೫೫ |
| ಮಂತ್ರಗಳ ಅನುಕ್ರಮಣಿಕೆ | ೫೭ |
| ಶಬ್ದಾನುಕ್ರಮಣಿಕೆ | ೫೮ |


* * * *

॥ಓಂ॥

ಶ್ರೀ ಶಾಂಕರಭಾಷ್ಯಸಮೇತವಾದ

# ಈಶಾವಾಸ್ಯೋಪನಿಷತ್ತು

## ಭಾಷ್ಯಾವತರಣಿಕೆ

(ಭಾಷ್ಯ)

೧. 'ಈಶಾವಾಸ್ಯಮ್' ಇತ್ಯಾದಯೋ ಮನ್ತ್ರಾಃ ಕರ್ಮಸ್ವವಿನಿಯುಕ್ತಾಃ, ತೇಷಾಮ್ ಅಕರ್ಮಶೇಷಸ್ಯಾತ್ಮನೋ ಯಾಥಾತ್ಮ್ಯಪ್ರಕಾಶಕತ್ವಾತ್ । ಯಾಥಾತ್ಮ್ಯಂ ಚಾತ್ಮನಃ ಶುದ್ಧತ್ವಾಪಾಪವಿದ್ಧತ್ವೈಕತ್ವನಿತ್ಯತ್ವಾಶರೀರತ್ವಸರ್ವಗತತ್ವಾದಿ ವಕ್ಷ್ಯಮಾಣಮ್ (೭, ೮) । ತಚ್ಚ ಕರ್ಮಣಾ ವಿರುಧ್ಯತ ಇತಿ ಯುಕ್ತ ಏವೈಷಾಂ ಕರ್ಮಸು ಅವಿನಿಯೋಗಃ । ನ ಹ್ಯೇವಂಲಕ್ಷಣಮಾತ್ಮನೋ ಯಾಥಾತ್ಮ್ಯಮ್ ಉತ್ಪಾದ್ಯಂ ವಿಕಾರ್ಯಮ್ ಆಪ್ಯಂ ಸಂಸ್ಕಾರ್ಯಂ ಕರ್ತೃಭೋಕ್ತೃರೂಪಂ ವಾ, ಯೇನ ಕರ್ಮಶೇಷತಾ ಸ್ಯಾತ್ । ಸರ್ವಾಸಾಮುಪನಿಷದಾಮಾತ್ಮಯಾಥಾತ್ಮ್ಯನಿರೂಪಣೇನೈವೋಪಕ್ಷಯಾತ್, **ಗೀತಾನಾಂ ಮೋಕ್ಷಧರ್ಮಾಣಾಂ** ಚೈವಂ ಪರತ್ವಾತ್ । ತಸ್ಮಾತ್, ಆತ್ಮನೋಽನೇಕತ್ವಕರ್ತೃತ್ವ ಭೋಕ್ತೃತ್ವಾದಿ ಚಾಶುದ್ಧತ್ವಪಾಪವಿದ್ಧತ್ವಾದಿ ಚೋಪಾದಾಯ ಲೋಕಬುದ್ಧಿಸಿದ್ಧಂ ಕರ್ಮಾಣಿ ವಿಹಿತಾನಿ । ಯೋ ಹಿ ಕರ್ಮಫಲೇನಾರ್ಥೀ ದೃಷ್ಟೇನ ಬ್ರಹ್ಮವರ್ಚಸಾದಿನಾ ಅದೃಷ್ಟೇನ ಸ್ವರ್ಗಾದಿನಾ ಚ 'ದ್ವಿಜಾತಿರಹಮ್, ನ ಕಾಣತ್ವಕುಬ್ಜತ್ವಾದ್ಯನಧಿಕಾರ ಪ್ರಯೋಜಕಧರ್ಮವಾನ್' ಇತ್ಯಾತ್ಮಾನಂ ಮನ್ಯತೇ ಸೋಽಧಿಕ್ರಿಯತೇ ಕರ್ಮಸ್ವಿತಿ ಹ್ಯಧಿಕಾರವಿದೋ ವದನ್ತಿ ॥

(ಭಾಷ್ಯಾರ್ಥ)

'ಈಶಾವಾಸ್ಯಮ್' ಎಂದು ಮೊದಲಾಗಿರುವ ಮಂತ್ರಗಳು ಕರ್ಮಗಳಲ್ಲಿ ವಿನಿಯೋಗವಾಗಿರುವದಿಲ್ಲ.[1] ; ಏಕೆಂದರೆ ಇವು ಕರ್ಮಕ್ಕೆ ಅಂಗವಾಗದಿರುವ[2]

---

1. ಈ ಸಂಹಿತೆಯಲ್ಲಿ ಮೂವತ್ತೊಂಬತ್ತನೆಯ ಅಧ್ಯಾಯದವರೆಗೂ ಹೇಳಿರುವ ಮಂತ್ರಗಳನ್ನು ಕರ್ಮದಲ್ಲಿ ವಿನಿಯೋಗಿಸಿರುತ್ತದೆ. ಈ ನಲವತ್ತನೆಯ ಅಧ್ಯಾಯದ ಮಂತ್ರಗಳೂ ಹಾಗೆಯೇ ಇರಬಹುದೆಂಬ ಶಂಕೆಯನ್ನು ತೊಲಗಿಸುವದಕ್ಕಾಗಿ ಹೀಗೆಂದು ಹೇಳಿದೆ.

2. ಕರ್ಮದಲ್ಲಿ ವಿನಿಯುಕ್ತವಾಗುವ ಮಂತ್ರಗಳು ಎರಡು ಬಗೆ: (1) ಇಂಥ ಮಂತ್ರವನ್ನು ಇಂಥ ಕರ್ಮಕ್ಕೆ ಉಪಯೋಗಿಸಬೇಕೆಂದು ವೇದದಲ್ಲಿಯೇ ತಿಳಿಸಿರುವ ಮಂತ್ರಗಳು; (2) ಕರ್ಮದಲ್ಲಿ ಉಪಯೋಗಿಸಬೇಕಾಗುವ ದ್ರವ್ಯವನ್ನು ತಿಳಿಸುವ ಮಂತ್ರಗಳು.

ಆತ್ಮನ[1] ನಿಜವಾದ ಸ್ವರೂಪವನ್ನು ತಿಳಿಸಿಕೊಡುತ್ತವೆ. ಆತ್ಮನ ನಿಜವಾದ ಸ್ವರೂಪವು ಯಾವದೆಂದರೆ (ಈ ಉಪನಿಷತ್ತಿನಲ್ಲಿ) ಮುಂದೆ (7, 8ನೆಯ ಮಂತ್ರಗಳಲ್ಲಿ ಹೇಳುವ, ಶುದ್ಧವಾಗಿರುವದು, ಪಾಪದ ಹೊಡೆತವಿಲ್ಲದಿರುವದು, ಒಬ್ಬನಾಗಿರುವದು, ನಿತ್ಯನಾಗಿರುವದು, ಶರೀರವಿಲ್ಲದವನಾಗಿರುವದು, ಎಲ್ಲೆಲ್ಲಿಯೂ ಇರುವದು ಮುಂತಾದದ್ದು. ಅದು ಕರ್ಮಕ್ಕೆ ವಿರುದ್ಧವಾಗಿರುವದರಿಂದ ಈ (ಮಂತ್ರಗಳನ್ನು) ಕರ್ಮಗಳಲ್ಲಿ ವಿನಿಯೋಗಮಾಡದೆ ಇರುವದು ಯುಕ್ತವೇ (ಆಗಿದೆ). ಈ ಬಗೆಯ ಆತ್ಮನ ನಿಜವಾದ ಸ್ವರೂಪವು ಹೊಸದಾಗಿ ಉಂಟುಮಾಡತಕ್ಕದ್ದಾಗಲಿ, ಮಾರ್ಪಡಿಸಿಕೊಳ್ಳತಕ್ಕದ್ದಾಗಲಿ, ಪಡೆಯತಕ್ಕದ್ದಾಗಲಿ, ಶುದ್ಧಿಗೊಳಿಸತಕ್ಕದ್ದಾಗಲಿ, ಕರ್ತೃಭೋಕ್ತೃರೂಪವಾಗಿರುವದಾಗಲಿ ಅಲ್ಲವೇ ಅಲ್ಲ ; ಹಾಗಿದ್ದರೆ (ಮಾತ್ರ ಅದು) ಕರ್ಮಕ್ಕೆ ಅಂಗವಾಗಿರಬಹುದಾಗಿತ್ತು.[2] ಎಲ್ಲಾ ಉಪನಿಷತ್ತುಗಳೂ[3] ಆತ್ಮನ ನಿಜವಾದ ಸ್ವರೂಪವನ್ನು ತಿಳಿಯಪಡಿಸುವದರಲ್ಲಿಯೇ ಕೊನೆಗೊಂಡಿರುವದರಿಂದಲೂ **ಗೀತೆ, ಮೋಕ್ಷಧರ್ಮ** - ಇವುಗಳೂ ಇದೇ ತಾತ್ಪರ್ಯ[4]ವುಳ್ಳವುಗಳಾಗಿರುವುದರಿಂದಲೂ (ಹೀಗೆಂದು ತಿಳಿಯಬೇಕು).

ಆದ್ದರಿಂದ ಆತ್ಮರು ಅನೇಕರು, (ಆತ್ಮನು ಕರ್ಮವನ್ನು) ಮಾಡುವವನು, (ಫಲವನ್ನು) ಅನುಭವಿಸುವವನು-ಎಂದುಮುಂತಾಗಿಯೂ (ಅವನು) ಅಶುದ್ಧನು, ಪಾಪದ ಹೊಡೆತವುಳ್ಳವನು ಎಂದುಮುಂತಾಗಿಯೂ (ಸಾಮಾನ್ಯ) ಜನರು ತಿಳಿದು

---

1. ಕರ್ಮಕಾಂಡದಲ್ಲಿ ತಿಳಿಸಿರುವ ಜನ್ಮಾಂತರಲೋಕಾಂತರಸಂಬಂಧಿಯಾದ ಆತ್ಮನು ಕರ್ಮಶೇಷನು. ಅವನಿಗಿಂತ ವಿಲಕ್ಷಣನಾದ ಬ್ರಹ್ಮಸ್ವರೂಪನಾದ ಆತ್ಮನು ಅಕರ್ಮಶೇಷನು.

2. ಕರ್ಮಕ್ಕೆ ಅಂಗವಾಗಬಹುದಾದ ವಸ್ತುಗಳು ನಾಲ್ಕು ಬಗೆ : ಪುರೋಡಾಶವು ಉಂಟುಮಾಡತಕ್ಕದ್ದು (ಉತ್ಪಾದ್ಯ) ; ಮೊಸರು ಮಾರ್ಪಡಿಸತಕ್ಕದ್ದು (ವಿಕಾರ್ಯ) ; ಸ್ವರ್ಗವು ಪಡೆಯತಕ್ಕದ್ದು (ಆಪ್ಯ) ; ಬತ್ತವು ಕುಟ್ಟಿ ಶುದ್ಧಿಗೊಳಿಸಿಕೊಳ್ಳತಕ್ಕದ್ದು (ಸಂಸ್ಕಾರ್ಯ). ಜೀವನು ಕರ್ಮವನ್ನು ಮಾಡಿ ಫಲವನ್ನನುಭವಿಸುವವನಾದ್ದರಿಂದ ಅವನೂ ಕರ್ಮಾಂಗವಾಗುವನು. ಆದರೆ ವೇದಾಂತದಲ್ಲಿ ಹೇಳಿರುವ ಆತ್ಮಸ್ವರೂಪವು ಇವುಗಳಲ್ಲಿ ಒಂದು ರೂಪದಲ್ಲಿಯೂ ಇರತಕ್ಕದ್ದಲ್ಲವಾದ್ದರಿಂದ ಅದು ಕರ್ಮಕ್ಕೆ ಅಂಗವಾಗಲಾರದು-ಎಂದು ಆಚಾರ್ಯರು ತಮ್ಮ ಭಾಷ್ಯಗಳಲ್ಲೆಲ್ಲ ಮತ್ತೆ ಮತ್ತೆ ಹೇಳಿರುತ್ತಾರೆ. ಉದಾಹರಣೆಗೆ ಸೂ. ಭಾ. 1-1-4 ; ಬೃ. ಭಾ. 3-3-1; ತೈ. ಭಾ. 1-12 ನೋಡಿರಿ.

3. ಉಪನಿಷತ್ತುಗಳು ಆತ್ಮಸ್ವರೂಪವನ್ನು ತಿಳಿಯಪಡಿಸಿ ಆ ತಿಳಿವಳಿಕೆಯಿಂದಲೇ ಮುಕ್ತಿಯಾಗುವದೆಂದು ಹೇಳುತ್ತವೆ ; ಯಾವ ಉಪನಿಷತ್ತಿನಲ್ಲಿಯೂ ಈ ಸ್ವರೂಪವನ್ನು ಕರ್ಮಕ್ಕೆ ಅಂಗವಾಗಿ ಹೇಳಿಲ್ಲ.

4. ಇವುಗಳಲ್ಲಿ ಕರ್ಮವನ್ನೂ ಉಪಾಸನೆಯನ್ನೂ ಹೇಳಿದ್ದರೂ ಆತ್ಮಜ್ಞಾನದಿಂದ ಮುಕ್ತಿಯಾಗುವದೆಂಬುದನ್ನೇ ತಾತ್ಪರ್ಯದಿಂದ ಹೇಳಿರುತ್ತದೆ.

ಕೊಂಡಿರುವುದನ್ನೇ ಇಟ್ಟುಕೊಂಡು[1] ಕರ್ಮಗಳನ್ನು ವಿಧಿಸಿರುತ್ತದೆ. ಯಾವನಿಗೆ (ಇಲ್ಲಿ) ಕಾಣುವ ಬ್ರಹ್ಮವರ್ಚಸ್ಸು ಮುಂತಾದ ಮತ್ತು ಕಾಣದ ಸ್ವರ್ಗವೇ ಮುಂತಾದ ಕರ್ಮಫಲದಲ್ಲಿ ಬಯಕೆಯಿರುವದೋ ಯಾವನು 'ನಾನು ದ್ವಿಜನು, ಕುರುಡು, ಗುಜ್ಜು[2]- ಮುಂತಾದ ಅನಧಿಕಾರಕ್ಕೆ ಬೇಕಾದ ಧರ್ಮಗಳು ನನ್ನಲ್ಲಿಲ್ಲ, ಎಂದು ತನ್ನನ್ನು ತಿಳಿದುಕೊಂಡಿರುವನೋ ಅವನೇ ಕರ್ಮಗಳಿಗೆ ಅಧಿಕಾರಿಯಾಗಿರುತ್ತಾನೆ ಎಂದಲ್ಲವೆ, ಅಧಿಕಾರ (ದ ತತ್ತ್ವ) ವನ್ನು ಬಲ್ಲವರು[3] ಹೇಳುತ್ತಾರೆ ?

(ಭಾಷ್ಯ)

೨. ತಸ್ಮಾದೇತೇ ಮನ್ತ್ರಾ ಆತ್ಮನೋ ಯಾಥಾತ್ಮ್ಯಪ್ರಕಾಶನೇನ ಆತ್ಮವಿಷಯಂ ಸ್ವಾಭಾವಿಕಮಜ್ಞಾನಂ ನಿವರ್ತಯನ್ತಃ, ಶೋಕಮೋಹಾದಿಸಂಸಾರಧರ್ಮವಿಚ್ಛಿತ್ತಿ ಸಾಧನಮಾತ್ಮೈಕತ್ವಾದಿವಿಜ್ಞಾನಮುತ್ಪಾದಯನ್ತೀತ್ಯೇವಮುಕ್ತಾಧಿಕಾರ್ಯಭಿಧೇಯ ಸಮ್ಬನ್ಧಪ್ರಯೋಜನಾನ್ ಮನ್ತ್ರಾನ್ ಸಙ್ಕ್ಷೇಪತೋ ವ್ಯಾಖ್ಯಾಸ್ಯಾಮಃ ॥

(ಭಾಷ್ಯಾರ್ಥ)

ಆದ್ದರಿಂದ[4] ಈ ಮಂತ್ರಗಳು ಆತ್ಮನ ನಿಜವಾದ ಸ್ವರೂಪವನ್ನು ತಿಳಿಸಿಕೊಟ್ಟು ಆತ್ಮವಿಷಯಕವಾದ ಸ್ವಾಭಾವಿಕವಾಗಿರುವ[5] ಅಜ್ಞಾನವನ್ನು ತೆಗೆದುಹಾಕಿ ಶೋಕ, ಮೋಹ - ಮುಂತಾದ ಸಂಸಾರಧರ್ಮಗಳನ್ನು ನಾಶಮಾಡುವದಕ್ಕೆ ಉಪಾಯವಾಗಿರುವ ಆತ್ಮನು ಒಬ್ಬನೇ ಎಂಬುದೇ ಮುಂತಾದ ತಿಳಿವಳಿಕೆಯನ್ನುಂಟುಮಾಡುತ್ತವೆಯಾದ್ದರಿಂದ ಈ ಮಂತ್ರಗಳಿಗೆ ಮೇಲೆ ಹೇಳಿದಂತೆ ಅಧಿಕಾರಿ, ವಿಷಯ, ಸಂಬಂಧ,

---

1. ವೇದದಲ್ಲಿ ಕರ್ಮವನ್ನು ವಿಧಿಸಿದ್ದರೂ ಆತ್ಮರು ಅನೇಕರೆಂದಾಗಲಿ ಕರ್ತೃ ಭೋಕ್ತೃಗಳೆಂದಾಗಲಿ ಸತ್ಯವೆಂದು ಎಲ್ಲಿಯೂ ಹೇಳಿಲ್ಲ ; ಸಾಮಾನ್ಯಜನರ ತಿಳಿವಳಿಕೆಯ ದೃಷ್ಟಿಯಿಂದ ಕರ್ಮವನ್ನು ವಿಧಿಸಿದೆ. ಅಷ್ಟೆ.

2. ''ಕಾಣತ್ವ ಕುಣಿತ್ವಾದ್ಯನಧಿಕಾರ....'' ಎಂಬ (ವಾ॥) ಪಾಠದಲ್ಲಿ ಕುರುಡು, ಮೋಟುಗೈ ಇರುವದು-ಎಂದು ಕನ್ನಡಿಸಬೇಕು.

3. ಜೈ.ಸೂ. 6-1-25 ರಿಂದ 42ನೆಯ ಸೂತ್ರದವರೆಗಿನ **ಶಾಬರಭಾಷ್ಯ**ವನ್ನು ನೋಡಿರಿ. ಕರ್ಮಕ್ಕೆ ಬೇಕಾದ ಯೋಗ್ಯತೆಯನ್ನು ಅಲ್ಲಿ ನಿರ್ಣಯಿಸಿರುತ್ತದೆ.

4. ಮೇಲೆ ವಿವರಿಸಿದ ಕಾರಣಗಳಿಂದ ಈ ಮಂತ್ರಗಳು ಕರ್ಮದಲ್ಲಿ ವಿನಿಯುಕ್ತವಾಗದೆ ಇರುವದರಿಂದ.

5. ಅವಿಚಾರದ ಸ್ಥಿತಿಯಲ್ಲಿ ಸ್ವಭಾವದಿಂದ ಇದ್ದುಕೊಂಡಿರುವ. ''ಸ್ವಾಭಾವಿಕ ಕರ್ಮವಿಜ್ಞಾನಮ್'' ಎಂಬ (ವಾ॥) ಪಾಠಕ್ಕಿಂತ ''ಸ್ವಾಭಾವಿಕಮಜ್ಞಾನಮ್'' ಎಂಬ ಪಾಠವೇ ಮೇಲು.

ಪ್ರಯೋಜನಗಳುಂಟಾದ ಕಾರಣ[1] (ಈ) ಮಂತ್ರಗಳನ್ನು ಸಂಕ್ಷೇಪದಿಂದ ವ್ಯಾಖ್ಯಾನ ಮಾಡುವೆವು.

---

# ಉಪನಿಷತ್ತು

## ಜ್ಞಾನನಿಷ್ಠೆ

**ಈಶಾ ವಾಸ್ಯಮಿದಗ್ಂ ಸರ್ವಂ । ಯತ್ಕಿಂ ಚ ಜಗತ್ಯಾಂ ಜಗತ್ ।**
**ತೇನ ತ್ಯಕ್ತೇನ ಭುಞ್ಜೀಥಾ । ಮಾ ಗೃಧಃ ಕಸ್ಯಸ್ವಿದ್ಧನಮ್ ॥೧॥**

೧. ಜಗತ್ತಿನಲ್ಲಿ (ಸ್ಥಾವರ) ಜಂಗಮಾತ್ಮಕವಾದದ್ದು ಏನೇನಿದೆಯೋ ಅದೆಲ್ಲವೂ ಈಶನಿಂದ ಮುಚ್ಚಲ್ಪಡತಕ್ಕದ್ದು. ಅದ್ದರಿಂದ ತ್ಯಾಗದಿಂದ ಕಾಪಾಡಿಕೊ ; ಯಾರ ಧನವನ್ನೂ ಬಯಸಬೇಡ.

(ಭಾಷ್ಯ)

೩. ಈಶಾ ಈಷ್ಟೇ ಇತಿ ಈಟ್, ತೇನ ಈಶಾ । ಈಶಿತಾ ಪರಮೇಶ್ವರಃ ಪರಮಾತ್ಮಾ ಸರ್ವಸ್ಯ । ಸ ಹಿ ಸರ್ವಮೀಷ್ಟೇ ಸರ್ವಜನ್ತೂನಾಮಾತ್ಮಾ ಸನ್ ಪ್ರತ್ಯಗಾತ್ಮತಯಾ । ತೇನ ಸ್ವೇನ ರೂಪೇಣಾತ್ಮನಾ ಈಶಾ ವಾಸ್ಯಮ್ ಆಚ್ಛಾದನೀಯಮ್ । ಕಿಮ್ ? ಇದಂ ಸರ್ವಂ ಯತ್ಕಿಞ್ಚ ಯತ್ಕಿಞ್ಚಿತ್ ಜಗತ್ಯಾಂ ಪೃಥಿವ್ಯಾಂ ಜಗತ್ ತತ್ ಸರ್ವಮ್ ಸ್ವೇನಾತ್ಮನಾ ಈಶೇನ ಪ್ರತ್ಯಗಾತ್ಮತಯಾ 'ಅಹಮೇವೇದಂ ಸರ್ವಮ್' ಇತಿ ಪರಮಾರ್ಥಸತ್ಯರೂಪೇಣ ಅನೃತಮಿದಂ ಸರ್ವಂ ಚರಾಚರಮ್ ಆಚ್ಛಾದನೀಯಂ ಪರಮಾತ್ಮನಾ । ಯಥಾ ಚನ್ದನಾಗರ್ವಾದೇರುದಕಾದಿಸಮ್ಬನ್ಧಜಕ್ಲೇದಾದಿಜಮ್ ಔಪಾಧಿಕಂ ದೌರ್ಗನ್ಧ್ಯಂ ತತ್ಸ್ವರೂಪನಿಘರ್ಷಣೇನಾಚ್ಛಾದ್ಯತೇ ಸ್ವೇನ ಪಾರಮಾರ್ಥಿಕೇನ ಗನ್ಧೇನ, ತದ್ವದೇವ ಹಿ ಸ್ವಾತ್ಮನ್ಯಧ್ಯಸ್ತಂ ಸ್ವಾಭಾವಿಕಂ ಕರ್ತೃತ್ವಭೋಕ್ತೃತ್ವಾದಿಲಕ್ಷಣಂ ಜಗದ್ ದ್ವೈತರೂಪಂ ಜಗತ್ಯಾಂ ಪೃಥಿವ್ಯಾಮ್ । 'ಜಗತ್ಯಾಮ್' ಇತ್ಯುಪಲಕ್ಷಣಾರ್ಥತ್ವಾತ್ ಸರ್ವಮೇವ ನಾಮರೂಪಕರ್ಮಾಖ್ಯಂ ವಿಕಾರಜಾತಂ ಪರಮಾರ್ಥಸತ್ಯಾತ್ಮಭಾವನಯಾ ತ್ಯಕ್ತಂ ಸ್ಯಾತ್ । ಏವಮೀಶ್ವರಾತ್ಮಭಾವನಯಾ ಯುಕ್ತಸ್ಯ ಪುತ್ರಾದ್ಯೇಷಣಾತ್ರಯಸಂನ್ಯಾಸೇ ಏವಾಧಿಕಾರೋ ನ ಕರ್ಮಸು ॥

---

1. ಅಧ್ಯಾತ್ಮಶಾಸ್ತ್ರವನ್ನು ತಿಳಿದುಕೊಂಡು ಮುಕ್ತನಾಗಬೇಕೆಂದು ಬಯಸುವವನು **ಅಧಿಕಾರಿ** ; ಆತ್ಮೈಕತ್ವವೇ ವಿಷಯ ; ಸಂಸಾರಕ್ಕೆ ಕಾರಣವಾದ ಅಜ್ಞಾನವನ್ನು ತೊಲಗಿಸಿ ಇಲ್ಲಿ ಹೇಳಿರುವ ಜ್ಞಾನವು ಮುಕ್ತಿಯನ್ನು ಕೊಡುವುದೆಂಬುದೇ ಸಂಬಂಧವು ; ಮುಕ್ತಿಯೇ ಪ್ರಯೋಜನವು. ಈ ನಾಲ್ಕನ್ನು ಅನುಬಂಧಚತುಷ್ಟಯವೆನ್ನುವರು.

(ಭಾಷ್ಯಾರ್ಥ)

ಆಳುವದರಿಂದ (ಇವನಿಗೆ) ಈಶ (ಎಂದು ಹೆಸರು) ; ಆ ಈಶನಿಂದ. ಆಳುವವನೆಂದರೆ (ಇಲ್ಲಿ) ಪರಮೇಶ್ವರನು ; ಎಲ್ಲರ ಪರಮಾತ್ಮನು.[1] ಏಕೆಂದರೆ ಆತನೇ **ಪ್ರತ್ಯಗಾತ್ಮರೂಪದಿಂದ**[2] ಎಲ್ಲಾ ಪ್ರಾಣಿಗಳ ಆತ್ಮನಾಗಿದ್ದುಕೊಂಡು ಎಲ್ಲವನ್ನೂ ಆಳುತ್ತಿರುವನು. ಆ ತನ್ನ ಸ್ವರೂಪವಾದ ಆತ್ಮನೆಂಬ ಈಶನಿಂದ ಮುಚ್ಚಬೇಕು, ಹೊದಿಸಬೇಕು. ಏನನ್ನು ? ಇದೆಲ್ಲವನ್ನೂ, ಈ ಜಗತ್ತಿನಲ್ಲಿ ಅಂದರೆ ಪೃಥ್ವಿಯಲ್ಲಿ ಏನೇನು ಯಾವಯಾವದು ಸ್ಥಾವರಜಂಗಮಾತ್ಮಕವಾದದ್ದು (ಇದೆಯೋ) ಅದೆಲ್ಲವನ್ನೂ ಪ್ರತ್ಯಗಾತ್ಮರೂಪದಿಂದ ಈಶನಾಗಿರುವ ತನ್ನ ಆತ್ಮನಿಂದ 'ಇದೆಲ್ಲವೂ ನಾನೇ' ಎಂದು **ಪರಮಾರ್ಥಸತ್ಯವಾಗಿರುವ** ರೂಪದ[3] ಪರಮಾತ್ಮನಿಂದ ಸುಳ್ಳಾಗಿರುವ ಈ ಚರಾಚರವೆಲ್ಲವನ್ನೂ ಹೊದಿಸಬೇಕು. ಹೇಗೆ ಚಂದನ, ಅಗಿಲು ಇವುಗಳಿಗೆ ನೀರೇ ಮುಂತಾದದ್ದರಿಂದಾದ **ಉಪಾಧಿಯಿಂದುಂಟಾದ**[4] ಕೆಟ್ಟ ನಾತವು ಅವುಗಳನ್ನು ತೇಯುವದರಿಂದ (ಹುಟ್ಟುವ) ತಮ್ಮ ನಿಜವಾದ ವಾಸನೆಯಿಂದ ಮುಚ್ಚಿಹೋಗುವದೋ ಅದರಂತೆಯೇ ತನ್ನ ಆತ್ಮನಲ್ಲಿ ಅಧ್ಯಸ್ತವಾಗಿರುವ ಸ್ವಾಭಾವಿಕವಾದ[5] ಕರ್ತೃತ್ವಭೋಕ್ತೃತ್ವ ಮುಂತಾದ ರೂಪದ ದ್ವೈತರೂಪವಾದ ಜಗತ್ತು- ಜಗತ್ತಿನಲ್ಲಿ ಅಂದರೆ ಪೃಥ್ವಿಯಲ್ಲಿ ; ಜಗತ್ತಿನಲ್ಲಿ ಎಂಬುದನ್ನು **ಉಪಲಕ್ಷಣಕ್ಕಾಗಿ** (ಉಪಯೋಗಿಸಿರುವದರಿಂದ[6]) **ನಾಮ,**[7] **ರೂಪ, ಕರ್ಮ** - ಎಂಬ ಹೆಸರಿನ ಕಾರ್ಯ ಸಮೂಹವೆಲ್ಲವೂ ಪರಮಾರ್ಥಸತ್ಯವಾಗಿರುವ ಆತ್ಮಭಾವನೆಯಿಂದ ಬಿಟ್ಟು ಹೋಗುವದು.

---

1. ಯಾವಯಾವದನ್ನು ನಾವು ನಮ್ಮ ಆತ್ಮನೆಂದು ತಪ್ಪುತಿಳಿವಳಿಕೆಯಿಂದ ತಿಳಿಯುತ್ತೇವೆಯೋ ಅವೆಲ್ಲಕ್ಕಿಂತಲೂ ಹೆಚ್ಚಿನ ನಿಜವಾದ ಆತ್ಮನು. ಗೀ.ಭಾ. 13-22 ನೋಡಿರಿ.

2. ಎಲ್ಲಕ್ಕೂ ಒಳಗಿರುವ ನಮ್ಮ ಆತ್ಮನ ರೂಪದಿಂದ. ಪರಮೇಶ್ವರನು ನಮ್ಮ ಆತ್ಮನೇ, ಬೇರೆಯಲ್ಲ. ಈಶ್ವರನು ಆತ್ಮನಿಗಿಂತ ಬೇರೆಯಾದರೆ ಆತ್ಮನು ಅನಾತ್ಮವಾಗಿ ಜಡವಸ್ತುವಾಗಬೇಕಾಗುವದು ; ಆಗ 'ಈಶ್ವರನು' (ಆಳುವವನು) ಎಂಬ ಹೆಸರು ಅವನಿಗೆ ಉಪಚಾರದ ಮಾತಾಗುವದೆಂದು ಭಾವ.

3. ನಿಜವಾಗಿ ಸತ್ಯವಾಗಿರುವದು ನಮ್ಮ ಆತ್ಮನೊಬ್ಬನೇ. ನಾವು ಸತ್ಯವೆಂದು ತಿಳಿದುಕೊಂಡಿರುವ ಮಿಕ್ಕ ವಸ್ತುಗಳು ನಿಜವಾಗಿರುವವಲ್ಲ ; ವ್ಯವಹಾರದಲ್ಲಿ ಎಲ್ಲರೂ ಸತ್ಯವೆನ್ನುವ ವಸ್ತುಗಳು **ವ್ಯಾವಹಾರಿಕಸತ್ಯ**ವಾಗಿರುತ್ತದೆ. ಭ್ರಾಂತಿದೆಶೆಯಲ್ಲಿ ಸತ್ಯವೆಂದು ತೋರುವ ವಸ್ತುಗಳು **ಪ್ರಾತಿಭಾಸಿಕಸತ್ಯ.**

4. ತನ್ನಲ್ಲಿ ಸೇರಿದ ನೀರೇ ಮುಂತಾದ ಮತ್ತೊಂದು ವಸ್ತುವಿನಿಂದಾದ.

5. ಅಜ್ಞಾನ ಸ್ವಭಾವದಿಂದಾಗಿರುವ. ಜನಸಾಮಾನ್ಯಕ್ಕೆ ಅಜ್ಞಾನವೇ ಸ್ವಾಭಾವಿಕವಾಗಿದೆ ಯೆಂಬುದನ್ನು 'ಸ್ವಾಭಾವಿಕ' ಎಂಬ ಮಾತು ಸೂಚಿಸುತ್ತದೆ. ಗೀ.ಭಾ. 5- 14 ನೋಡಿರಿ.

6. 'ಪೃಥ್ವಿಯಲ್ಲಿರುವ ಜಂಗಮಾತ್ಮಕವಾದದ್ದು' ಎಂಬುದು ಉಪಲಕ್ಷಣವು. ಧನುರ್ಧರರು ಎಂಬಲ್ಲಿ ಧನುಶ್ಶಬ್ದದಿಂದ ಬಿಲ್ಲು, ಬಾಣ, ಬತ್ತಳಿಕೆ-ಮುಂತಾದದ್ದೆಲ್ಲವನ್ನೂ ಅರಿಯುವಂತೆ 'ಎಲ್ಲಾ ದ್ವೈತವೂ' ಎಂಬುದೇ ಈ ಮಾತಿಗೆ ಅರ್ಥವೆಂದು ಭಾವ. ಉಪಲಕ್ಷಣವೆಂದರೆ ಹೆಗ್ಗುರುತು.

7. ಬೃ.ಭಾ. 1-6-1, 2, 3 ನೋಡಿ.

ಓೀಗೆ ಈಶ್ವರಾತ್ಮನೇ ನಾನೆಂಬ ಭಾವನೆಯಿಂದ ಕೂಡಿರುವಾತನು ಪುತ್ರನೇ ಮುಂತಾದ **ಏಷಣಾತ್ರಯವನ್ನು**[1] ಬಿಡುವದಕ್ಕೆ ತಕ್ಕವನೇ ಹೊರತು ಕರ್ಮಗಳಿಗೆ (ತಕ್ಕವ)ನಲ್ಲ.

(ಭಾಷ್ಯ)

೪. ತೇನ ತ್ಯಕ್ತೇನ ತ್ಯಾಗೇನೇತ್ಯರ್ಥಃ । ನ ಹಿ ತ್ಯಕ್ತೋ ಮೃತಃ ಪುತ್ರೋ ಭೃತ್ಯೋ ವಾ ಆತ್ಮಸಂಬನ್ಧಿತಾಯಾ ಅಭಾವಾದಾತ್ಮಾನಂ ಪಾಲಯತಿ ಅತಃ ತ್ಯಾಗೇನೇತ್ಯಯಮೇವಾರ್ಥಃ । ಭುಞ್ಜೀಥಾಃ ಪಾಲಯೇಥಾಃ ॥

ಏವಂ ತ್ಯಕ್ತೈಷಣಸ್ತ್ವಂ ಮಾ ಗೃಧಃ । ಗೃಧಿಮ್ ಆಕಾಙ್ಕ್ಷಾಂ ಮಾ ಕಾರ್ಷೀರ್ಧನವಿಷಯಾಮ್ । ಕಸ್ಯಸ್ವಿತ್ ಧನಂ ಕಸ್ಯಸ್ವಿತ್ ಪರಸ್ಯ ಸ್ವಸ್ಯ ವಾ ಧನಂ ಮಾ ಕಾಙ್ಕ್ಷೀರಿತ್ಯರ್ಥಃ । ಸ್ವಿತ್ ಇತ್ಯನರ್ಥಕೋ ನಿಪಾತಃ ॥ ಅಥವಾ ಮಾ ಗೃಧಃ । ಕಸ್ಮಾತ್ ? 'ಕಸ್ಯಸ್ವಿದ್ಧನಮ್' ಇತ್ಯಾಕ್ಷೇಪಾರ್ಥಃ । ನ ಕಸ್ಯಚಿದ್ಧನಮಸ್ತಿ ಯದ್‌ಗೃಧ್ಯೇತ । ''ಆತ್ಮೈವೇದಂ ಸರ್ವಮ್'' (ಛಾಂ. ೭-೨೫-೧) ಇತೀಶ್ವರಭಾವನಯಾ ಸರ್ವಂ ತ್ಯಕ್ತಮ್ । ಅತ ಆತ್ಮನ ಏವೇದಂ ಸರ್ವಮ್, ಆತ್ಮೈವ ಚ ಸರ್ವಮ್ । ಅತೋ ಮಿಥ್ಯಾವಿಷಯಾಂ ಗೃಧಿಂ ಮಾ ಕಾರ್ಷೀರಿತ್ಯರ್ಥಃ ॥

(ಭಾಷ್ಯಾರ್ಥ)

ಆದ್ದರಿಂದ, ತ್ಯಕ್ತದಿಂದ ಎಂದರೆ ತ್ಯಾಗದಿಂದ ಎಂದರ್ಥ ; (ಬಿಡಲ್ಪಟ್ಟ ಎಂದರ್ಥವಲ್ಲ). ಏಕೆಂದರೆ ಬಿಡಲ್ಪಟ್ಟ ಸತ್ತುಹೋದ ಮಗನಾಗಲಿ ಆಳಾಗಲಿ ತನಗೆ ಸಂಬಂಧವಿಲ್ಲದವನಾದ್ದರಿಂದ ತನ್ನನ್ನು ಕಾಪಾಡಲಾರನು.[2] ಆದ್ದರಿಂದ ತ್ಯಾಗದಿಂದ ಎಂಬುದೇ (ಸರಿಯಾದ) ಅರ್ಥವು. (ತ್ಯಾಗದಿಂದ ನಿನ್ನನ್ನು) 'ಭುಞ್ಜೀಥಾಃ' ಕಾಪಾಡಿಕೊ.

---

1. ಪುತ್ರರ ಬಯಕೆ, ವಿತ್ತದ ಬಯಕೆ, ಲೋಕದ ಬಯಕೆ - ಇವಕ್ಕೆ ಏಷಣಾತ್ರಯವೆಂದು ಹೆಸರು. ಬೃ. 3-5-1 ನೋಡಿರಿ.

2. 'ತ್ಯಕ್ತ'ವೆಂಬ ಮಾತಿಗೆ ಬಿಡುವದು, ಬಿಡಲ್ಪಟ್ಟ - ಎಂದು ಎರಡು ಅರ್ಥಗಳನ್ನು ಮಾಡಬಹುದು. ಆದರೆ ಬಿಡಲ್ಪಟ್ಟ ವಸ್ತುಗಳು ತನಗೆ ಸಂಬಂಧಪಟ್ಟಿರುವದಿಲ್ಲವಾದ್ದರಿಂದ ಅವುಗಳಿಂದ ತನ್ನನ್ನು ಕಾಪಾಡಿಕೊಳ್ಳುವದು ಆಗಲಾರದು. 'ತ್ಯಕ್ತದಿಂದ ಕಾಪಾಡಿಕೊ' ಎಂದು ಶ್ರುತಿಯಲ್ಲಿರುವದರಿಂದ 'ಬಿಡುವಿಕೆಯಿಂದ' ಎಂದೇ ಈ ಮಾತಿಗೆ ಅರ್ಥವನ್ನು ಮಾಡಬೇಕು ಎಂದು ಭಾವ.

ಹೀಗೆ ಬಯಕೆಗಳನ್ನು ಬಿಟ್ಟ ನೀನು ಬಯಸಬೇಡ ; ಬಯಕೆಯನ್ನು ಅಂದರೆ ಧನವಿಷಯದ ಆಸೆಯನ್ನು ಮಾಡಬೇಡ. ಯಾರ ಧನವನ್ನೂ-ಮತ್ತೊಬ್ಬನ ಅಥವಾ ನಿನ್ನ ಧನವನ್ನು - ಬಯಸದಿರು ಎಂದರ್ಥ. (ಕಸ್ಯಸ್ವಿತ್) ಎಂಬಲ್ಲಿ ಸ್ವಿತ್ ಎಂಬ ನಿಪಾತಕ್ಕೆ ಯಾವ ಅರ್ಥವೂ ಇಲ್ಲ. ಅಥವಾ (ಈ ವಾಕ್ಯಕ್ಕೆ ಮತ್ತೊಂದು ರೀತಿಯಲ್ಲಿ ಅರ್ಥವನ್ನು ಮಾಡಬಹುದು). ಬಯಸಬೇಡ ; ಏಕೆಂದರೆ ಹಣವು ಯಾರದ್ದು ? ಎಂದು (ಕಸ್ಯಸ್ವಿತ್ ಎಂಬ ಮಾತನ್ನು) ಆಕ್ಷೇಪಾರ್ಥ (ದಲ್ಲಿ ತೆಗೆದುಕೊಳ್ಳಬೇಕು). ಬಯಸುವದಕ್ಕೆ ಯಾರ ಹಣವೂ ಇರುವದಿಲ್ಲ.[1] 'ಇದೆಲ್ಲವೂ ಆತ್ಮನೇ' ಎಂದು ಈಶ್ವರಭಾವನೆಯಿಂದ ಎಲ್ಲವನ್ನೂ ಬಿಟ್ಟದ್ದಾಯಿತು. ಆದ್ದರಿಂದ ಇದೆಲ್ಲವೂ ಆತ್ಮನದೇ. ಇದೆಲ್ಲವೂ ಆತ್ಮನೇ. ಆದ್ದರಿಂದ ಸುಳ್ಳಾದ[2] ವಿಷಯದಲ್ಲಿ ಬಯಕೆಯನ್ನು ಮಾಡಬೇಡ ಎಂದರ್ಥ. ॥೧॥

# ಕರ್ಮನಿಷ್ಠೆ

## (ಭಾಷ್ಯ)

೫. ಏವಮಾತ್ಮವಿದಃ ಪುತ್ರಾದ್ಯೇಷಣಾತ್ರಯಸಂನ್ಯಾಸೇನ ಆತ್ಮಜ್ಞಾನನಿಷ್ಠತಯಾ ಆತ್ಮಾ ರಕ್ಷಿತವ್ಯ ಇತ್ಯೇಷ ವೇದಾರ್ಥಃ । ಅಥೇತರಸ್ಯ ಅನಾತ್ಮಜ್ಞತಯಾ ಆತ್ಮಗ್ರಹಣಾಶಕ್ತಸ್ಯ ಇದಮುಪದಿಶತಿ ಮನ್ತ್ರಃ ———

## (ಭಾಷ್ಯಾರ್ಥ)

ಹೀಗೆ ಆತ್ಮನನ್ನು ಅರಿತಿರುವವನು ಪುತ್ರನೇ ಮುಂತಾದ ಏಷಣಾತ್ರಯವನ್ನು ಬಿಟ್ಟು **ಆತ್ಮಜ್ಞಾನನಿಷ್ಠನಾಗಿ** ತನ್ನನ್ನು ತಾನು ಕಾಪಾಡಿಕೊಳ್ಳಬೇಕೆಂಬುದು[3] (ಮೊದಲನೆಯ) ವೇದವಾಕ್ಯದ ಅರ್ಥವು. ಇನ್ನು ಅನಾತ್ಮಜ್ಞರಾಗಿ[4] ಆತ್ಮನನ್ನು ಅರಿತುಕೊಳ್ಳುವದಕ್ಕೆ ಶಕ್ತಿಯಿಲ್ಲದ ಮಿಕ್ಕವರಿಗೆ (ಈ ಎರಡನೆಯ) ಮಂತ್ರವು ಇದನ್ನು ಉಪದೇಶಮಾಡುತ್ತದೆ.

---

1. ಸರ್ವಾತ್ಮಭಾವವು ಬಂದರೆ ಬಯಕೆಗೆ ವಿಷಯವೇ ಇರುವದಿಲ್ಲ. ಆಪ್ತಕಾಮನಾಗುತ್ತಾನೆ- ಎಂದು ಜ್ಞಾನದಿಂದಾಗುವ ಪ್ರಯೋಜನವನ್ನು ಸೂಚಿಸಿರುತ್ತದೆ.

2. 'ಈಶಾವಾಸ್ಯಮಿದಂ ಸರ್ವಮ್' ಎಂಬ ವಾಕ್ಯಕ್ಕೆ 'ಆತ್ಮೈವೇದಂ ಸರ್ವಮ್' ಎಂಬ (ಛಾಂ. 7-25-2) ಛಾಂದೋಗ್ಯವಾಕ್ಯದ ಅರ್ಥವೇ ಇರುವದು. ಸರ್ವಶಬ್ದವಾಚ್ಯವಾದ ಜಗತ್ತು ತನ್ನ ರೂಪದಿಂದ ಹುಸಿತೋರಿಕೆ, ಆತ್ಮರೂಪದಿಂದಲೇ ಸತ್ಯವು ಎಂಬುದು ಈ ಉಪದೇಶದ ತಿರುಳು.

3. ಆತ್ಮಜ್ಞಾನನಿಷ್ಠೆಯನ್ನು ಪಡೆದರೆ ತನ್ನನ್ನು ತಾನು ಉದ್ಧಾರಮಾಡಿಕೊಂಡಂತೆ ಎಂದರ್ಥ.

4. ಹೊರಗಿನ ವಿಷಯಗಳಲ್ಲಿ ನೆಟ್ಟ ದೃಷ್ಟಿಯುಳ್ಳವರಾಗಿ.

ಕುರ್ವನ್ನೇವೇಹ ಕರ್ಮಾಣಿ
ಜಿಜೀವಿಷೇಚ್ಛತಗ್ಂ ಸಮಾಃ ।
ಏವಂ ತ್ವಯಿ ನಾನ್ಯಥೇತೋಽಸ್ತಿ
ನ ಕರ್ಮ ಲಿಪ್ಯತೇ ನರೇ ॥೨॥

೨. ಕರ್ಮಗಳನ್ನು ಮಾಡುತ್ತಲೇ ಇಲ್ಲಿ ನೂರು ವರ್ಷಗಳು ಬಾಳುವದಕ್ಕೆ ಬಯಸಬೇಕು. ಹೀಗಿರುವ ಮನುಷ್ಯನಾದ ನಿನಗೆ ಇದಕ್ಕಿಂತ ಬೇರೆಯಾಗಿ ಕರ್ಮವು ಲೇಪವಾಗದ (ಯಾವ ಮಾರ್ಗವೂ) ಇರುವದಿಲ್ಲ.

(ಭಾಷ್ಯ)

೬. ಕುರ್ವನ್ನೇವ ನಿರ್ವರ್ತಯನ್ನೇವ ಇಹ ಕರ್ಮಾಣಿ ಅಗ್ನಿಹೋತ್ರಾದೀನಿ ಜಿಜೀವಿಷೇತ್ ಜೀವಿತುಮಿಚ್ಛೇತ್ ಶತಂ ಶತಸಙ್ಖ್ಯಾಕಾಃ ಸಮಾಃ ಸಂವತ್ಸರಾನ್ । ತಾವದ್ಧಿ ಪುರುಷಸ್ಯ ಪರಮಾಯುರ್ನಿರೂಪಿತಮ್ । ತಥಾ ಚ ಪ್ರಾಪ್ತಾನುವಾದೇನ 'ಯಜ್ಜಿಜೀವಿಷೇಚ್ಛತಂ ವರ್ಷಾಣಿ, ತತ್ ಕುರ್ವನ್ನೇವ ಕರ್ಮಾಣಿ' ಇತ್ಯೇತದ್ ವಿಧೀಯತೇ । ಏವಂ ಏವಂಪ್ರಕಾರೇಣ ತ್ವಯಿ ಜಿಜೀವಿಷತಿ ನರೇ ನರಮಾತ್ರಾಭಿಮಾನಿನಿ ಇತಃ ಏತಸ್ಮಾದಗ್ನಿಹೋತ್ರಾದೀನಿ ಕರ್ಮಾಣಿ ಕುರ್ವತೋ ವರ್ತಮಾನಾತ್ ಪ್ರಕಾರಾತ್ ಅನ್ಯಥಾ ಪ್ರಕಾರಾನ್ತರಂ ನಾಸ್ತಿ । ಯೇನ ಪ್ರಕಾರೇಣ ಅಶುಭಂ ಕರ್ಮ ನ ಲಿಪ್ಯತೇ ಕರ್ಮಣಾ ನ ಲಿಪ್ಯಸೇ ಇತ್ಯರ್ಥಃ । ಅತಃ ಶಾಸ್ತ್ರವಿಹಿತಾನಿ ಕರ್ಮಾಣ್ಯಗ್ನಿಹೋತ್ರಾದೀನಿ ಕುರ್ವನ್ನೇವ ಜಿಜೀವಿಷೇತ್ ॥

(ಭಾಷ್ಯಾರ್ಥ)

ಅಗ್ನಿಹೋತ್ರವೇ ಮುಂತಾದ ಕರ್ಮಗಳನ್ನು ಮಾಡುತ್ತಲೇ ಇಲ್ಲಿ ಈ ಲೋಕದಲ್ಲಿ ನೂರು, ನೂರು ಸಂಖ್ಯೆಯ 'ಸಮಾಃ' ಅಂದರೆ ಸಂವತ್ಸರಗಳವರೆಗೆ ಬಾಳುವದಕ್ಕೆ ಬಯಸಬೇಕು[1]. ಅಷ್ಟೇ ಅಲ್ಲವೆ, ಮನುಷ್ಯನಿಗೆ ಪರಮಾವಧಿಯ ಆಯುಸ್ಸೆಂದು ಗೊತ್ತಾಗಿರುವದು ? ಅದ್ದರಿಂದ (ಹೀಗೆ) ತಿಳಿದಿರುವದನ್ನು ಅನುವಾದಮಾಡಿಕೊಂಡು

---

1. ಇಲ್ಲಿ "ನೂರುವರ್ಷ ಬಾಳಬೇಕೆಂದು ಇಚ್ಛಿಸಬೇಕು" ಎಂದು ವಿಧಿಸುವದಕ್ಕೆ ಶಾಸ್ತ್ರವಚನವು ಬಂದಿರುವದಿಲ್ಲ. ಮನುಷ್ಯನ ಆಯುಸ್ಸು ನೂರು ವರ್ಷವಷ್ಟೇ, ಆ ಕಾಲವನ್ನೆಲ್ಲ ಕರ್ಮಗಳನ್ನು ಮಾಡುತ್ತಲೇ ಕಳೆಯಬೇಕು- ಎಂದು ತಿಳಿಸುವದಕ್ಕೆ ಬಂದಿದೆ. 'ನೂರುವರ್ಷ ಬಾಳಬೇಕು' ಎಂಬುದು ಅನುವಾದ, ಎಂದರೆ ಗೊತ್ತಿರುವದನ್ನೇ ಹೇಳಿಕೊಂಡಿರುವ ಮಾತು.

'ನೂರು ವರ್ಷಗಳು ಬಾಳಬೇಕೆಂದಿಚ್ಛಿಸುವದಾದರೆ ಕರ್ಮಗಳನ್ನು ಮಾಡುತ್ತಲೇ ಬಾಳಲಿಚ್ಛಿಸಬೇಕು' ಎಂಬುದನ್ನು ವಿಧಿಸಿರುತ್ತದೆ.[1]

ಹೀಗೆ ಎಂದರೆ ಈ ರೀತಿಯಲ್ಲಿ ಬದುಕಬೇಕೆಂದು ಬಯಸುತ್ತಿರುವ, ಮನುಷ್ಯನಾದ ಎಂದರೆ ನಾನು ಬರಿಯ ಮನುಷ್ಯನೇ ಎಂಬ ತಿಳಿವಳಿಕೆಯಿಂದಿರುವ, ನಿನಗೆ ಇದಕ್ಕಿಂತ ಅಂದರೆ ಅಗ್ನಿಹೋತ್ರವೇ ಮುಂತಾದ ಕರ್ಮಗಳನ್ನು ಮಾಡಿಕೊಂಡಿರುವ ರೀತಿಗಿಂತ ಬೇರೆಯಾಗಿ ಮತ್ತೊಂದು ರೀತಿಯು ಇರುವದಿಲ್ಲ. ಯಾವ ರೀತಿಯಿಂದ ನಿನಗೆ ಕೆಟ್ಟ ಕರ್ಮವು ಅಂಟುವದಿಲ್ಲವೋ, (ಯಾವ ರೀತಿಯಿಂದಿದ್ದರೆ ನೀನು) ಕರ್ಮದ ಅಂಟಿಲ್ಲದೆ ಇರುವೆಯೋ (ಅಂಥ ರೀತಿಯು ಬೇರೆ ಯಾವದೊಂದೂ ಇರುವದಿಲ್ಲ) ಎಂದರ್ಥ. ಆದ್ದರಿಂದ ಶಾಸ್ತ್ರದಲ್ಲಿ ವಿಧಿಸಿರುವ ಅಗ್ನಿಹೋತ್ರವೇ ಮುಂತಾದ (ನಿತ್ಯ) ಕರ್ಮಗಳನ್ನು[2] ಮಾಡುತ್ತಲೇ ಬಾಳಲಿಚ್ಛಿಸಬೇಕು.[3] ॥೨॥

## ಮೊದಲನೆಯ ಎರಡು ಮಂತ್ರಗಳ ಅರ್ಥದ ವಿಷಯದಲ್ಲಿ ವಿಚಾರ

(ಭಾಷ್ಯ)

೭. ಕಥಂ ಪುನರಿದಮವಗಮ್ಯತೇ ಪೂರ್ವೇಣ ಮನ್ತ್ರೇಣ ಸಂನ್ಯಾಸಿನೋ ಜ್ಞಾನನಿಷ್ಠಾ ಉಕ್ತಾ । ದ್ವಿತೀಯೇನ ತದಶಕ್ತಸ್ಯ ಕರ್ಮನಿಷ್ಠಾ ಇತಿ ? ಉಚ್ಯತೇ । ಜ್ಞಾನಕರ್ಮಣೋರ್ವಿರೋಧಂ ಪರ್ವತವದಕಮ್ಪ್ಯಂ ಯಥೋಕ್ತಂ ನ ಸ್ಮರಸಿ ಕಿಮ್ ? ಇಹಾಪ್ಯುಕ್ತಂ "ಯೋ ಹಿ ಜಿಜೀವಿಷೇತ್, ಸ ಕರ್ಮಾಣಿ ಕುರ್ವನ್ನೇವ" ಇತಿ । "ಈಶಾವಾಸ್ಯಮಿದಂ ಸರ್ವಂ, ತೇನ ತ್ಯಕ್ತೇನ ಭುಞ್ಜೀಥಾಃ, ಮಾ ಗೃಧಃ ಕಸ್ಯಸ್ವಿದ್ಧನಂ" ಇತಿ ಚ । "ನ ಜೀವಿತೇ ಮರಣೇ ವಾ ಗೃಧಿಂ ಕುರ್ವೀತಾರಣ್ಯಮಿಯಾದಿತಿ ಚ ಪದಮ್ ; ತತೋ ನ ಪುನರೇಯಾತ್" (?) ಇತಿ ಸಂನ್ಯಾಸಶಾಸನಾತ್ । ಉಭಯೋಃ ಫಲಭೇದಂ ಚ ವಕ್ಷ್ಯತಿ । 'ಇಮೌ ದ್ವಾವೇವ ಪನ್ಥಾನಾವನು ನಿಷ್ಕ್ರಾನ್ತತರೌ ಭವತಃ ; ಕ್ರಿಯಾಪಥಶ್ಚೈವ ಪುರಸ್ತಾತ್ ಸಂನ್ಯಾಸಶ್ಚೋತ್ತರೇಣ ನಿವೃತ್ತಿಮಾರ್ಗೇಣ

---

1. ಯಾವದನ್ನು ವಿಧಿಸಿರುತ್ತದೆಯೋ ಅದರಲ್ಲಿ ಶ್ರುತಿಯ ತಾತ್ಪರ್ಯವಿರುತ್ತದೆ ; ಅನುವಾದವು ತಾನೇ ಪ್ರಾಪ್ತವಾಗಿರುವದರಿಂದ ಅದರಲ್ಲಿ ತಾತ್ಪರ್ಯವಿರುವದಿಲ್ಲ.

2. ಶಾಸ್ತ್ರದಲ್ಲಿ ಹೇಳಿರುವ 'ಕರ್ಮ'ವನ್ನೇ ಇಲ್ಲಿ ಕರ್ಮವೆಂದು ಕರೆದಿರುತ್ತದೆ. ಕರ್ಮವೆಂಬ ಶಬ್ದಕ್ಕೆ ಕ್ರಿಯೆ, ಕೆಲಸ ಎಂಬ ಅರ್ಥವಾದರೂ ಬರಿಯ ಲೌಕಿಕವಾದ ಕೆಲಸವನ್ನು ಹೇಳುವದಕ್ಕೆ ಶಾಸ್ತ್ರವು ಬೇಕಿಲ್ಲ.

3. ಈ ಮಂತ್ರಕ್ಕೆ ಮತ್ತೊಂದು ಬಗೆಯಾಗಿ ಅರ್ಥವನ್ನು ಮಾಡಿರುವದನ್ನು ಸೂ. ಭಾ. 3-4-14 ರಲ್ಲಿ ಕಾಣಬಹುದು.

ಏಷಣಾತ್ರಯಸ್ಯ ತ್ಯಾಗಃ[1] । ತಯೋಃ ಸಂನ್ಯಾಸಪಥ ಏವಾತಿರೇಚಯತಿ' (?) 'ನ್ಯಾಸ ಏವಾತ್ಯರೇಚಯತ್ (ತೈ.ನಾರಾ. 78) ಇತಿ ತೈತ್ತಿರೀಯಕೇ । ''ದ್ವಾವಿಮಾವಥ ಪನ್ಥಾನೌ ಯತ್ರ ವೇದಾಃ ಪ್ರತಿಷ್ಠಿತಾಃ । ಪ್ರವೃತ್ತಿಲಕ್ಷಣೋ ಧರ್ಮೋ ನಿವೃತ್ತಶ್ಚ ವಿಭಾಷಿತಃ ॥'' (ಮೋ.ಧ. 241-6) ಇತ್ಯಾದಿ ಪುತ್ರಾಯ ವಿಚಾರ್ಯ ನಿಶ್ಚಿತಮುಕ್ತಂ ವ್ಯಾಸೇನ ವೇದಾಚಾರ್ಯೇಣ ಭಗವತಾ । ವಿಭಾಗಂ ಚಾನಯೋರ್ದರ್ಶಯಿಷ್ಯಾಮಃ ।

(ಭಾಷ್ಯಾರ್ಥ)

(ಪ್ರಶ್ನೆ) :- ಮೊದಲನೆಯ ಮಂತ್ರದಲ್ಲಿ ಸಂನ್ಯಾಸಿಗೆ ಜ್ಞಾನನಿಷ್ಠೆಯನ್ನು ಹೇಳಿದೆಯೆಂತಲೂ ಎರಡನೆಯ (ಮಂತ್ರದ)ಲ್ಲಿ ಅದಕ್ಕೆ ಶಕ್ತಿಯಿಲ್ಲದವರಿಗೆ ಕರ್ಮನಿಷ್ಠೆಯನ್ನು ಹೇಳಿದೆಯೆಂತಲೂ ಹೇಗೆ ಇದನ್ನು ನಿಶ್ಚಯಿಸಬೇಕು[2] ?

(ಉತ್ತರ) :- ಹೇಳುತ್ತೇವೆ (ಕೇಳು). ಹಿಂದೆ ಹೇಳಿದ ಜ್ಞಾನಕರ್ಮಗಳೆರಡಕ್ಕೂ ಇರುವ ವಿರೋಧವೆಂಬುದು ಬೆಟ್ಟದಂತೆ ಅಲುಗಾಡದೆ ಇರುವದೆಂಬುದು (ನಿನಗೆ) ನೆನಪಿಲ್ಲವೇನು ? ಇಲ್ಲಿಯೂ[3] ''ಯಾವನು ಬಾಳಲಿಚ್ಛಿಸುತ್ತಾನೋ ಅವನು ಕರ್ಮಗಳನ್ನು[4] ಮಾಡುತ್ತಲೇ ಇರಬೇಕು'', ''ಇದೆಲ್ಲವೂ ಈಶ್ವರನಿಂದ ಮುಚ್ಚಲ್ಪಡತಕ್ಕದ್ದು ; ಆದ್ದರಿಂದ ತ್ಯಾಗದಿಂದ ಕಾಪಾಡಿಕೊ, ಯಾರ ಧನವನ್ನೂ ಬಯಸಬೇಡ'' ಎಂದು ಹೇಳಿರುತ್ತದೆ. ''ಬದುಕಿರುವದರಲ್ಲಾಗಲಿ ಸಾಯುವದರಲ್ಲಾಗಲಿ ಆಸೆಯನ್ನು ಮಾಡಬಾರದು ; ಅರಣ್ಯವನ್ನು ಹೊಂದಬೇಕು ಎಂಬುದು ಹಾದಿಯು. ಮತ್ತೆ ಅಲ್ಲಿಂದ ಬರಬಾರದು'' (?)[5] ಎಂದು ಸಂನ್ಯಾಸವನ್ನು ಶಾಸ್ತ್ರದಲ್ಲಿ ವಿಧಿಸಿರುತ್ತದೆ. ಈ ಎರಡಕ್ಕೂ ಬೇರೆ ಬೇರೆಯ ಫಲವನ್ನು (ಈ ಉಪನಿಷತ್ತಿನಲ್ಲಿ) ಮುಂದೆ

1. ಇದು ಅ॥ ಪಾಠ.

2. ಈ ಉಪನಿಷತ್ತಿನ ಭಾಷ್ಯದ ಅವತರಣಿಕೆಯಲ್ಲಿ ಜ್ಞಾನದಿಂದ ತಿಳಿದುಬರುವ ಶುದ್ಧವಾಗಿರುವದು, ಪಾಪದಂಜಿಕೆಯಿಲ್ಲದಿರುವದು - ಮುಂತಾದ ಆತ್ಮಸ್ವಭಾವವು ಕರ್ಮಕ್ಕೆ ವಿರುದ್ಧವಾಗಿರುತ್ತದೆ ಎಂದು ಹೇಳಿರುತ್ತದೆ.

3. ಉಪನಿಷತ್ತಿನಲ್ಲಿಯೂ.

4. ''ಕರ್ಮ ಕುರ್ವನ್'' ಎಂಬ (ವಾ॥) ಪಾಠಕ್ಕಿಂತ ಈ ಪಾಠವೇ ಮೇಲು.

5. ಈ ವಾಕ್ಯವು ಯಾವ ಶ್ರುತಿಯಲ್ಲಿದೆಯೋ ತಿಳಿಯದು. ಸೂತ್ರಭಾಷ್ಯ (3-4-40) ದಲ್ಲಿರುವ ಈ ವಾಕ್ಯದ ಕೊನೆಯಲ್ಲಿ 'ಇತ್ಯುಪನಿಷತ್' ಎಂಬ ಮಾತುಗಳಿವೆ. ಸೂತ್ರಭಾಷ್ಯದಲ್ಲಿರುವ 'ಏಯಾತ್' ಎಂಬ ಪಾಠವನ್ನೇ ಇಲ್ಲಿ ಇಟ್ಟುಕೊಂಡಿದೆ. 'ಇಯಾತ್' ಎಂಬ (ಆ॥) ಪಾಠಕ್ಕಿಂತ ಇದು ಉತ್ತಮ. ಉಪನಿಷತ್ತಿನಲ್ಲಿ ಆಯುಷ್ಕಾಮನಿಗೆ ಕರ್ಮವನ್ನು ಹೇಳಿ ಮುಮುಕ್ಷುಗಳಿಗೆ ತ್ಯಾಗವನ್ನೇ ಹೇಳಿರುವದೂ ಸಂನ್ಯಾಸವನ್ನು ಶಾಸ್ತ್ರದಲ್ಲಿ ವಿಧಿಸಿರುವದೂ ಜ್ಞಾನಕರ್ಮಗಳನ್ನು ಒಬ್ಬನೇ ಮಾಡುವ ಸಮುಚ್ಚಯಸಾಧನೆಗೆ ಶಾಸ್ತ್ರಸಮ್ಮತಿಯಿಲ್ಲವೆಂಬುದಕ್ಕೆ ಪ್ರಮಾಣ ಎಂದು ಭಾವ.

ಹೇಳಿರುತ್ತದೆ.[1] ''ಈ ಎರಡೇ ಹಾದಿಗಳು ಹೊರಟುಬಂದಿವೆ ; ಕರ್ಮದ ಹಾದಿಯೇ ಮೊದಲು, ಬಳಿಕ ಸಂನ್ಯಾಸವು ಎಂದರೆ ನಿವೃತ್ತಿಮಾರ್ಗದಿಂದ ಏಷಣಾತ್ರಯವನ್ನು ಬಿಡುವದು. ಇವೆರಡರಲ್ಲಿ ಸಂನ್ಯಾಸವೇ ಹೆಚ್ಚಿನದಾಗಿರುವದು.'' (?)[2] ''ಸಂನ್ಯಾಸವೇ ಹೆಚ್ಚಿನದು'' (ತೈ.ನಾ. 78) ಎಂದು **ತೈತ್ತಿರೀಯದಲ್ಲಿ** (ಹೇಳಿದೆ). **ವೇದಾಚಾರ್ಯರಾದ ಭಗವಾನ್ ವ್ಯಾಸರು** ವಿಚಾರಮಾಡಿ ''ಇನ್ನು ವೇದಗಳು ಹೊರಟಿರುವದು ಈ ಎರಡು ಹಾದಿಗಳಲ್ಲಿ ; ಪ್ರವೃತ್ತಿರೂಪವಾಗಿರುವ ಧರ್ಮ(ವೊಂದು) ನಿವೃತ್ತಿ ಎಂದೆನಿಸಿಕೊಂಡಿರುವದು (ಇನ್ನೊಂದು)''[3] (ಮೋ.ಧ. 241-6) ಎಂದು' ನಿಶ್ಚಯಿಸಿ ತಮ್ಮ (ಮಕ್ಕಳಾದ) (ಶುಕರಿಗೆ) ಹೇಳಿರುತ್ತಾರೆ. ಇವೆರಡಕ್ಕೂ ಇರುವ ತಾರತಮ್ಯವನ್ನು ನಾವು ಮುಂದೆಯೂ ತಿಳಿಯಪಡಿಸುವೆವು.

## ಆತ್ಮನ ಯಾಥಾತ್ಮ್ಯ

(ಭಾಷ್ಯ)

೮. ಅಥೇದಾನೀಮವಿದ್ವನ್ನಿಂದಾರ್ಥೋಽಯಂ ಮನ್ತ್ರ ಆರಭ್ಯತೇ-

(ಭಾಷ್ಯಾರ್ಥ)

ಇನ್ನು ಈಗ ಅಜ್ಞಾನಿಗಳನ್ನು ನಿಂದಿಸುವದಕ್ಕಾಗಿ ಈ ಮಂತ್ರವನ್ನು ಪ್ರಾರಂಭಿಸಿರುತ್ತಾರೆ :

**ಅಸುರ್ಯಾ ನಾಮ ತೇ ಲೋಕಾ**
**ಅನ್ಧೇನ ತಮಸಾವೃತಾಃ ।**
**ತಾಗ್ಂಸ್ತೇ ಪ್ರೇತ್ಯಾಭಿಗಚ್ಛನ್ತಿ**
**ಯೇ ಕೇ ಚಾತ್ಮಹನೋ ಜನಾಃ** ॥೩॥

1. ಆತ್ಮಜ್ಞಾನದಿಂದ ಶೋಕಮೋಹಗಳು ನಿವೃತ್ತಿಯಾಗುವವೆಂದು ೭ನೆಯ ಮಂತ್ರದಲ್ಲಿ ಹೇಳಿರುತ್ತದೆ. ; ಶಾಸ್ತ್ರೀಯಕರ್ಮದಿಂದ ಸ್ವಾಭಾವಿಕವಾದ ಕರ್ಮವನ್ನೂ ಅರಿವನ್ನೂ ಮೀರುವದೆಂಬ ಫಲವಾಗುವದೆಂದೂ ಉಪಾಸನೆಯಿಂದ ಉಪಾಸ್ಯದೇವತೆಯ ಸ್ವರೂಪವನ್ನು ಪಡೆಯುತ್ತಾನೆಂದೂ ೧೧ನೆಯ ಮಂತ್ರದಲ್ಲಿ ಹೇಳಿದೆ.

2. ಈ ವಾಕ್ಯವು ಯಾವ ಶ್ರುತಿಯದೋ ತಿಳಿಯದು. ಬೃಹದಾರಣ್ಯಕ (4-5-15) ಭಾಷ್ಯದಲ್ಲಿ ಇದರ ಅನುಕ್ರಮವು ಹೀಗಿದೆ : ''ದ್ವಾವೇವ ಪನ್ಥಾನಾವನು ನಿಷ್ಕ್ರಾನ್ತತರೌ ಭವತಃ ಕ್ರಿಯಾಪಥಶ್ಚೈವ ಪುರಸ್ತಾತ್ ಸಂನ್ಯಾಸಶ್ಚ ತಯೋಃ ಸಂನ್ಯಾಸ ಏವಾತ್ಯರೇಚಯತಿ'' ಈ ಎರಡು ಕಡೆಯಲ್ಲಿಯೂ ಕೊಟ್ಟಿರುವದು ಮೂಲದ ಅರ್ಥಮಾತ್ರವೆಂದು ತೋರುತ್ತದೆ. ಟೀಕಾಕಾರರು ''ಅನುನಿಷ್ಕ್ರಾನ್ತತರೌ'' ಎಂಬ ಮಾತಿಗೆ ಒಂದೊಂದು ಉಪನಿಷತ್ತಿನಲ್ಲಿ ಒಂದೊಂದು ಬಗೆಯಾಗಿ ಅರ್ಥಮಾಡಿರುತ್ತಾರೆ.

3. ಮೋಕ್ಷಧರ್ಮದಲ್ಲಿ ಶುಕಾನುಪ್ರಶ್ನದಲ್ಲಿರುವ ವಾಕ್ಯವಿದು. ನಮ್ಮಲ್ಲಿರುವ ಮುದ್ರಿತಪುಸ್ತಕದಲ್ಲಿ ''ನಿವೃತ್ತೌ ಚ ಸುಭಾಷಿತಃ'' ಎಂದಿದೆ. ''ವಿಭಾವಿತಃ'' (ಆ॥) ಎಂದೂ ಪಾಠವುಂಟು.

೩. ಅಸುರ್ಯವೆಂಬ ಆ ಲೋಕಗಳು ಕುರುಡುಗತ್ತಲೆಯಿಂದ ಮುಚ್ಚಿಕೊಂಡಿರುತ್ತವೆ. ಯಾರುಯಾರು ಆತ್ಮನನ್ನು ಕೊಲ್ಲುವರೋ (ಆ) ಜನರು ಸತ್ತ ಬಳಿಕ ಆ ಲೋಕಗಳನ್ನು ಪಡೆಯುತ್ತಾರೆ.

(ಭಾಷ್ಯ)

೯. ಅಸುರ್ಯಾಃ ಪರಮಾತ್ಮಭಾವಮದ್ವಯಮಪೇಕ್ಷ್ಯ ದೇವಾದಯೋಽಪ್ಯಸುರಾಃ; ತೇಷಾಂ ಚ ಸ್ವಭೂತಾ ಲೋಕಾ ಅಸುರ್ಯಾ ನಾಮ । ನಾಮ ಶಬ್ದೋಽನರ್ಥಕೋ ನಿಪಾತಃ । ತೇ ಲೋಕಾಃ ಕರ್ಮಫಲಾನಿ, ಲೋಕ್ಯನ್ತೇ ದೃಶ್ಯನ್ತೇ ಭುಜ್ಯನ್ತೇ ಇತಿ ಜನ್ಮಾನಿ । ಅನ್ಧೇನ ಅದರ್ಶನಾತ್ಮಕೇನ ಅಜ್ಞಾನೇನ ತಮಸಾ ಆವೃತಾಃ ಆಚ್ಛಾದಿತಾಃ । ತಾನ್ ಸ್ಥಾವರಾನ್ತಾನ್ ಪ್ರೇತ್ಯ ತ್ಯಕ್ತ್ವೇಮಂ ದೇಹಂ ಅಭಿಗಚ್ಛನ್ತಿ 'ಯಥಾಕರ್ಮ ಯಥಾಶ್ರುತಮ್' (ಕ. 2-2-7) ಯೇ ಕೇ ಚ ಆತ್ಮಹನಃ ಆತ್ಮಾನಂ ಘ್ನನ್ತೀತ್ಯಾತ್ಮಹನಃ । ಕೇ ತೇ ? ಜನಾಃ ಯೇಽವಿದ್ವಾಂಸಃ । ಕಥಂ ತೇ ಆತ್ಮಾನಂ ನಿತ್ಯಂ ಹಿಂಸನ್ತಿ? ಅವಿದ್ಯಾದೋಷೇಣ ವಿದ್ಯಮಾನಸ್ಯಾತ್ಮನಸ್ತಿರಸ್ಕರಣಾತ್ ವಿದ್ಯಮಾನಸ್ಯ ಆತ್ಮನೋ ಯತ್ಕಾರ್ಯಂ ಫಲಮ್ ಅಜರಾಮರತ್ವಾದಿಸಂವೇದನಲಕ್ಷಣಮ್, ತದ್ ಹತಸ್ಯೇವ ತಿರೋಭೂತಂ ಭವತೀತಿ ಪ್ರಾಕೃತಾಃ ಅವಿದ್ವಾಂಸೋ ಜನಾ ಆತ್ಮಹನ ಇತ್ಯುಚ್ಯನ್ತೇ । ತೇನ ಹ್ಯಾತ್ಮಹನನದೋಷೇಣ ಸಂಸರನ್ತಿ ತೇ ॥

(ಭಾಷ್ಯಾರ್ಥ)

ತನಗೆರಡನೆಯದಿಲ್ಲದ ಪರಮಾತ್ಮಸ್ವರೂಪಕ್ಕೆ ಹೋಲಿಸಿದರೆ ದೇವತೆಗಳು ಮೊದಲಾದವರೂ ಅಸುರರೇ ; ಮತ್ತು ಅವರಿಗೆ ಸೇರಿರುವ ಲೋಕಗಳು ಅಸುರ್ಯವೆನಿಸುವವು. (ಮೂಲದಲ್ಲಿ) 'ನಾಮ' ಎಂಬ ಮಾತು ಅರ್ಥವಿಲ್ಲದ ನಿಪಾತವು. ಆ ಲೋಕಗಳು ಎಂದರೆ ಕರ್ಮಗಳಿಗೆ ಫಲವಾದ ಜನ್ಮಗಳು[1] ; ಅವಲೋಕಿಸಲ್ಪಡುತ್ತವೆ, ಕಾಣಲ್ಪಡುತ್ತವೆ, ಎಂದರೆ ಅನುಭವಿಸಲ್ಪಡುತ್ತವೆ, ಆದ್ದರಿಂದ (ಇವುಗಳಿಗೆ ಲೋಕಗಳೆಂದು[2] ಹೆಸರು). ಕುರುಡುಗತ್ತಲೆಯಿಂದ ಎಂದರೆ (ತತ್ತ್ವವನ್ನು) ಕಾಣದಿರುವ ಅಜ್ಞಾನವೆಂಬ ಕತ್ತಲೆಯಿಂದ (ಇವು) ಮುಚ್ಚಿಕೊಂಡಿರುತ್ತವೆ[3] ; ಹೊದಿಸಲ್ಪಟ್ಟಿರುತ್ತವೆ.

1. ಆತ್ಮಹತ್ಯವನ್ನು ಮಾಡಿದವರು ಒಂದಾನೊಂದು ಲೋಕಕ್ಕೆ ಹೋಗುವರೆಂದು ಅಭಿಪ್ರಾಯವಲ್ಲ ; ಆತ್ಮವನ್ನು ಅರಿಯದ್ದೇ ಆತ್ಮಹತ್ಯ, ಬೇರೆಬೇರೆಯ ಜನ್ಮಗಳೇ ಅವರು ಪಡೆಯುವ ಲೋಕಗಳು.

2. 'ಲೋಕ್ಯನ್ತ ಇತಿ ಲೋಕಾಃ' ಎಂಬ ಕರ್ಮಾರ್ಥಕವ್ಯುತ್ಪತ್ತಿಯಿಂದ ಜನ್ಮಗಳು ಎಂಬರ್ಥವನ್ನು ತೆಗೆದಿದೆಯೆಂದು ಭಾವ.

3. ತತ್ತ್ವವನ್ನು ಕಾಣದಿರುವವರಿಂದ ಹೊರಗಿನ ವಸ್ತುಗಳೇ ಇವರಿಗೆ ಮುಖ್ಯವಾಗಿ ಕಾಣುತ್ತಿರುವವು. ಜ್ಞಾನವು ಅಜ್ಞಾನದಿಂದ ಆವೃತವಾಗಿರುತ್ತದೆ ಎಂಬ (5-15) ಗೀತೋಕ್ತಿಯನ್ನು ಇಲ್ಲಿ ನೆನಪಿಗೆ ತಂದುಕೊಳ್ಳಬೇಕು.

ಈ ಸ್ಥಾವರ(ಜನ್ಮದ)ವರೆಗಿನ[1] ಆ (ಲೋಕಗಳನ್ನು) ಈ ದೇಹವನ್ನು ಬಿಟ್ಟು ಸತ್ತುಹೋದಮೇಲೆ "(ಅವರವರ) ಆ ಕರ್ಮಕ್ಕೆ ತಕ್ಕಂತೆಯೂ ಭಾವನೆಗೆ ತಕ್ಕಂತೆಯೂ" (ಕ. 2-2-7) ಪಡೆಯುತ್ತಾರೆ. ಯಾರುಯಾರು ಆತ್ಮನನ್ನು ಕೊಲ್ಲುತ್ತಾರೆಯೋ (ಅವರೆಲ್ಲರೂ ಆ ಜನ್ಮಗಳನ್ನು ಪಡೆಯುತ್ತಾರೆ).

(ಪ್ರಶ್ನೆ) :- ಅವರು ಯಾರು ?

(ಉತ್ತರ) :- ಯಾರು (ಆತ್ಮನನ್ನು) ಅರಿಯರೋ (ಆ) ಜನರು.[2]

(ಪ್ರಶ್ನೆ) :- ಅವರು ಆತ್ಮನನ್ನು ಯಾವಾಗಲೂ ಕೊಲ್ಲುತ್ತಲೇ ಇರುವರೆಂಬುದು ಹೇಗೆ ?[3]

(ಉತ್ತರ) :- (ಹೇಗೆಂದರೆ : ಅವರು) ಇರುವ ಆತ್ಮನನ್ನು ಅಜ್ಞಾನದ ದೋಷದಿಂದ ಮರೆಮಾಡುತ್ತಿರುವರು. **ಆತ್ಮನು ಇದ್ದರೆ ಆಗಬೇಕಾದ ಮುಪ್ಪಿಲ್ಲದ್ದು, ಸಾವಿಲ್ಲದ್ದು - ಎಂದು ಮುಂತಾದದ್ದನ್ನು ಅರಿತುಕೊಳ್ಳುವ ರೂಪವಾದ ಯಾವ ಫಲವೆಂಬ ಕಾರ್ಯವಾಗಬೇಕೋ ಅದು (ಆತ್ಮನನ್ನು) ಕೊಂದಿದ್ದರೆ ಹೇಗೋ ಹಾಗೆ (ಅವರಿಗೆ) ಮರೆಯಾಗಿರುತ್ತದೆ. ಆದ್ದರಿಂದ ಪ್ರಾಕೃತರಾದ ಅಜ್ಞಾನಿಜನರನ್ನು ಆತ್ಮನನ್ನು ಕೊಲ್ಲುವವರು ಎಂದು ಕರೆದಿರುತ್ತದೆ.**[4] ಆ ಆತ್ಮಹತ್ಯದ ದೋಷದಿಂದಲೇ ಅವರು ಸಂಸಾರವನ್ನು ಅನುಭವಿಸುತ್ತಿರುವರು. ॥೩॥

(ಭಾಷ್ಯ)

೧೦. ಯಸ್ಯಾತ್ಮನೋ ಹನನಾದವಿದ್ವಾಂಸಃ ಸಂಸರನ್ತಿ, ತದ್ವಿಪರ್ಯಯೇಣ ವಿದ್ವಾಂಸೋ ಮುಚ್ಯನ್ತೇಽನಾತ್ಮಹನಃ, ತತ್ಕೀದೃಶಮಾತ್ಮತತ್ತ್ವಮಿತಿ ? ಉಚ್ಯತೇ—

---

1. ಉಪಾಸನಾಮಿಶ್ರಿತಕರ್ಮದ ಫಲವು ಬ್ರಹ್ಮಲೋಕದವರೆಗೂ ಇರುವದು. ಬರಿಯ ಕರ್ಮವು ಪಿತೃಲೋಕಾದಿಗಳನ್ನು ಕೊಡುವದು. ಅಧರ್ಮಮಿಶ್ರಿತವಾದ ಕರ್ಮವು ಮನುಷ್ಯತ್ವದಿಂದ ಹಿಡಿದು ಸ್ಥಾವರಜನ್ಮದವರೆಗೂ ಫಲವನ್ನು ಕೊಡುವದು. (ಸೂ. ಭಾ. 1-1-4) ಆದ್ದರಿಂದ ಬ್ರಹ್ಮಾದಿಸ್ಥಾವರಾಂತವಾದ ಫಲವೆಲ್ಲವೂ ಅಜ್ಞಾನದ ಫಲವೇ.

2. ಜನರೆಂದರೆ, ಜನ್ಮವುಳ್ಳವರೆಂದರ್ಥ. ಆತ್ಮಹನನದೋಷದಿಂದ ಅನೇಕ ಜನ್ಮಗಳುಂಟಾಗುವವೆಂಬುದನ್ನು ಸೂಚಿಸುವದಕ್ಕಾಗಿ ಶ್ರುತಿಯು ಈ ಮಾತನ್ನುಪಯೋಗಿಸಿದೆ ಎಂದು ಭಾವ.

3. ಆತ್ಮನಿಗೆ ಸಾವೇ ಇಲ್ಲದಿರುವಾಗ ಅಜ್ಞಾನಿಗಳು ಆತ್ಮನನ್ನು ಕೊಲ್ಲುವರೆಂದರೇನು ? ಎಂದು ಆಕ್ಷೇಪ.

4. ಗೀ. ಭಾ. 13-28.

(ಭಾಷ್ಯಾರ್ಥ)

ಯಾವ ಆತ್ಮನನ್ನು ಕೊಲ್ಲುವದರಿಂದ ಅಜ್ಞಾನಿಗಳು ಸಂಸಾರದಲ್ಲಿ ತೊಳಲುತ್ತಿರುವರೋ ಅದಕ್ಕೆ ವಿರುದ್ಧವಾಗಿ ಆತ್ಮಹತ್ಯವನ್ನು ಮಾಡದ ಜ್ಞಾನಿಗಳು ಮುಕ್ತಿಯನ್ನು ಪಡೆಯುತ್ತಾರೋ, ಆ ಆತ್ಮತತ್ತ್ವವು ಎಂಥದ್ದು ಎಂಬುದನ್ನು (ಇಲ್ಲಿ, ಹೇಳಲಾಗುವದು :-

**ಅನೇಜದೇಕಂ ಮನಸೋ ಜವೀಯೋ**
**ನೈನದ್ದೇವಾ ಆಪ್ನುವನ್ ಪೂರ್ವಮರ್ಷತ್ ।**
**ತದ್ಧಾವತೋಽನ್ಯಾನತ್ಯೇತಿ ತಿಷ್ಠತ್**
**ತಸ್ಮಿನ್ನಪೋ ಮಾತರಿಶ್ವಾ ದಧಾತಿ** ॥೪॥

೪. ಅದು ಅಲುಗಾಡದಿರುವದು. ಒಂದೇ, ಮನಸ್ಸಿಗಿಂತಲೂ ವೇಗವುಳ್ಳದ್ದು. ಇದನ್ನು ದೇವತೆಗಳೂ ಪಡೆಯಲಾರರು. (ಏಕೆಂದರೆ) ಮೊದಲೇ ಹೋಗಿರುತ್ತದೆ. ನಿಂತುಕೊಂಡಿದ್ದೇ (ಅದು) ಓಡಿಹೋಗುತ್ತಿರುವ ಮಿಕ್ಕವರನ್ನು ದಾಟಿಹೋಗಿರುವದು. ಅದು (ಇರುವಲ್ಲಿ) ಮಾತರಿಶ್ವನು ನೀರುಗಳನ್ನು ವಿಂಗಡಿಸುವನು.

(ಭಾಷ್ಯ)

೧೧. ಅನೇಜತ್ ನ ಏಜತ್ । 'ಏಜೃ ಕಮ್ಪನೇ' ; ಕಮ್ಪನಂ ಚಲನಂ ಸ್ವಾವಸ್ಥಾಪ್ರಚ್ಯುತಿಃ, ತದ್ವರ್ಜಿತಮ್ । ಸರ್ವದಾ ಏಕರೂಪಮಿತ್ಯರ್ಥಃ । ತಚ್ಚ ಏಕಂ ಸರ್ವಭೂತೇಷು । ಮನಸಃ ಸಙ್ಕಲ್ಪಾದಿಲಕ್ಷಣಾತ್ ಜವೀಯಃ ಜವವತ್ತರಮ್ । ಕಥಂ ವಿರುದ್ಧಮುಚ್ಯತೇ ''ಧ್ರುವಂ ನಿಶ್ಚಲಮಿದಮ್, ಮನಸೋ ಜವೀಯಃ'' ಇತಿ ಚ ? ನೈಷ ದೋಷಃ । ನಿರುಪಾಧ್ಯುಪಾಧಿಮತ್ತ್ವೇನೋಪಪತ್ತೇಃ । ತತ್ರ ನಿರುಪಾಧಿಕೇನ ರೂಪೇಣೋಚ್ಯತೇ ಅನೇಜದೇಕಮಿತಿ । ಮನಸೋಽನ್ತಃಕರಣಸ್ಯ ಸಙ್ಕಲ್ಪವಿಕಲ್ಪಲಕ್ಷಣಸ್ಯ ಉಪಾಧೇರನುವರ್ತನಾತ್ ಇಹ ದೇಹಸ್ಥಸ್ಯ ಮನಸೋ ಬ್ರಹ್ಮಲೋಕಾದಿದೂರಗಮನಂ ಸಙ್ಕಲ್ಪೇನ ಕ್ಷಣಮಾತ್ರಾದ್ಭವತೀತ್ಯತೋ ಮನಸೋ ಜವಿಷ್ಠತ್ವಂ ಲೋಕೇ ಪ್ರಸಿದ್ಧಮ್ । ತಸ್ಮಿನ್ ಮನಸಿ ಬ್ರಹ್ಮಲೋಕಾದೀನ್ ದ್ರುತಂ ಗಚ್ಛತಿ ಸತಿ ಪ್ರಥಮಪ್ರಾಪ್ತ ಇವಾತ್ಮಚೈತನ್ಯಾಭಾಸೋ ಗೃಹ್ಯತೇ । ಅತೋ ''ಮನಸೋ ಜವೀಯ'' ಇತ್ಯಾಹ ॥

ನೈನದ್ದೇವಾಃ । ದ್ಯೋತನಾದ್ದೇವಾಃ ಚಕ್ಷುರಾದೀನ್ದ್ರಿಯಾಣಿ ಏನತ್ ಪ್ರಕೃತಮಾತ್ಮತತ್ತ್ವಂ ನಾಪ್ನುವನ್ ನ ಪ್ರಾಪ್ತವನ್ತಃ । ತೇಭ್ಯೋ ಮನೋ ಜವೀಯಃ । ಮನೋವ್ಯಾಪಾರವ್ಯವಹಿತತ್ವಾದಾಭಾಸಮಾತ್ರಮಪ್ಯಾತ್ಮನೋ ನೈವ ದೇವಾನಾಂ ವಿಷಯೀಭವತಿ । ಯಸ್ಮಾಜ್ಜವನಾನ್ಮನಸೋಽಪಿ ಪೂರ್ವಮರ್ಷತ್ ಪೂರ್ವಮೇವ ಗತಮ್ । ವ್ಯೋಮವದ್ವ್ಯಾಪಿತ್ವಾತ್ ॥

ಸರ್ವವ್ಯಾಪಿ ತದಾತ್ಮತತ್ತ್ವಂ ಸರ್ವಸಂಸಾರಧರ್ಮವರ್ಜಿತಂ ಸ್ವೇನ ನಿರುಪಾಧಿಕೇನ ಸ್ವರೂಪೇಣ ಅವಿಕ್ರಿಯಮೇವ ಸತ್, ಉಪಾಧಿಕೃತಾಃ ಸರ್ವಾಃ ಸಂಸಾರವಿಕ್ರಿಯಾ ಅನುಭವತೀವಾವಿವೇಕಿನಾಂ ಮೂಢಾನಾಮ್, ಅನೇಕಮಿವ ಚ ಪ್ರತಿ ದೇಹಂ ಪ್ರತ್ಯವಭಾಸತ ಇತ್ಯೇತದಾಹ - ತತ್ ಧಾವತಃ ದ್ರುತಂ ಗಚ್ಛತಃ, ಅನ್ಯಾನ್ ಆತ್ಮವಿಲಕ್ಷಣಾನ್ ಮನೋವಾಗಿನ್ದ್ರಿಯಪ್ರಭೃತೀನ್ ಅತ್ಯೇತಿ ಅತೀತ್ಯ ಗಚ್ಛತೀವ । ಇಮಮರ್ಥಂ ಸ್ವಯಮೇವ ದರ್ಶಯತಿ - ತಿಷ್ಠದಿತಿ । ಸ್ವಯಮ್ ಅವಿಕ್ರಿಯಮೇವ ಸದಿತ್ಯರ್ಥಃ ॥

(ಭಾಷ್ಯಾರ್ಥ)

ಅನೇಜತ್ ಎಂದರೆ ಅಲುಗಾಡದಿರುವದು. ಅಲುಗಾಡು ಎಂಬರ್ಥದ ಏಜೃ ಧಾತುವಿನಿಂದ (ಈ ಶಬ್ದ ರೂಪ)ವಾಗಿರುತ್ತದೆ. ಅಲುಗಾಡುವದು ಎಂದರೆ ಚಲಿಸುವದು, ತನ್ನ ಸ್ಥಿತಿಯನ್ನು ಬಿಟ್ಟು ಜಾರುವದು ; ಅದಿಲ್ಲದ್ದು (ಅನೇಜತ್), ಯಾವಾಗಲೂ ಒಂದೇ ರೂಪವಾಗಿರುವದು ಎಂದರ್ಥ. ಮತ್ತು ಅದು ಎಲ್ಲಾಪ್ರಾಣಿಗಳಲ್ಲಿಯೂ ಒಂದೇ[1]. ಸಂಕಲ್ಪವೇ ಮುಂತಾದ ರೂಪದ ಮನಸ್ಸಿಗಿಂತಲೂ ಜವೀಯ, ಎಂದರೆ ಹೆಚ್ಚು ವೇಗವುಳ್ಳದ್ದು.

(ಆಕ್ಷೇಪ) :- ''ಇದು ಇದ್ದಂತೆಯೇ ಇರುವದು, ಅಲುಗಾಡುವದಿಲ್ಲ'' ಎಂದೂ ಮನಸ್ಸಿಗಿಂತಲೂ ವೇಗವಾದದ್ದೆಂದೂ (ಒಂದಕ್ಕೊಂದು) ವಿರೋಧವಾಗಿ ಹೇಳಿದೆಯಲ್ಲ! ಇದು ಹೇಗೆ (ಸರಿ) ?

(ಪರಿಹಾರ) :- ಇದೇನೂ ತಪ್ಪಲ್ಲ. **ನಿರುಪಾಧಿಕಸೋಪಾಧಿಕರೂಪದಿಂದ**[2] ಇದು ಹೊಂದುತ್ತದೆ. ಇವೆರಡರೊಳಗೆ ಯಾವ ಉಪಾಧಿಯೂ ಇಲ್ಲದ ತನ್ನ ರೂಪದಿಂದ ''ಅಲುಗಾಡುವದಿಲ್ಲ, ಒಂದೇ'' ಎಂದು ಹೇಳಿರುತ್ತದೆ. ಅಂತಃಕರಣದ

1. ಆರನೆಯ ಮಂತ್ರವನ್ನು ನೋಡಿರಿ. ಒಂದೊಂದು ಶರೀರಕ್ಕೆ ಒಂದೊಂದರಂತೆ ಅನೇಕ ಆತ್ಮರು ಇಲ್ಲವೆಂದರ್ಥ.

2. ಉಪಾಧಿಯೆಂದರೆ ಯಾವದಾದರೊಂದು ವಸ್ತುವಿನ ಭಾಗವಾಗಿರದೆ ಆ ವಸ್ತುವನ್ನು ವಿಂಗಡಿಸಿ ತೋರಿಸುವ ಮತ್ತೊಂದು ವಸ್ತು. ಬಯಲಿನಲ್ಲಿ ಒಂದು, ಎರಡು - ಎಂಬ ಸಂಖ್ಯೆ ನಿಜವಾಗಿ ಇಲ್ಲ. ಆದರೂ ಗಡಿಗೆಯ ಬಯಲು, ಮಡಕೆಯ ಬಯಲು-ಎಂದು ಬಯಲು ಬೇರೆಬೇರೆಯಾಗಿರುವಂತೆ ತೋರುವದು ಗಡಿಗೆಮಡಕೆಗಳೆಂಬ ಉಪಾಧಿಗಳ ಸಂಬಂಧದಿಂದ. ಗಡಿಗೆಮಡಕೆಗಳು ಬಯಲಿನ ಭಾಗವಲ್ಲದೆ ಇದ್ದು ಬಯಲಿನಲ್ಲಿಲ್ಲದ ಭೇದವನ್ನು ತೋರಿಸುತ್ತವೆಯಾದ್ದರಿಂದ ಆ ಭೇದವು ಸೋಪಾಧಿಕವಾಯಿತು. ಯಾವ ಉಪಾಧಿಯನ್ನೂ ಲೆಕ್ಕಕ್ಕೆ ತೆಗೆದುಕೊಳ್ಳದೆ ನೋಡಿದ ವಸ್ತುಸ್ವರೂಪವು ನಿರುಪಾಧಿಕರೂಪವೆನಿಸುವದು.

ಸಂಕಲ್ಪವಿಕಲ್ಪ[1] ರೂಪವಾದ ಮನಸ್ಸೆಂಬ ಉಪಾಧಿಯನ್ನನುಸರಿಸಿ (ದ ದೃಷ್ಟಿಯಿಂದ ಇಲ್ಲಿ[2] ದೇಹದಲ್ಲಿಯೇ ಮನಸ್ಸು ಇದ್ದುಕೊಂಡೇ **ಬ್ರಹ್ಮಲೋಕವೇ** ಮುಂತಾದ ದೂರದೇಶಕ್ಕೆ ಹೋಗುವದು (ಒಂದು) ಕ್ಷಣದಲ್ಲಿಯೇ ಆಗುವದರಿಂದ ಮನಸ್ಸು ಅತ್ಯಂತವೇಗವುಳ್ಳದ್ದೆಂದು ಲೋಕದಲ್ಲಿ ಪ್ರಸಿದ್ಧವಾಗಿರುತ್ತದೆಯಷ್ಟೆ ? ಹಾಗೆ ಮನಸ್ಸು ಬ್ರಹ್ಮಲೋಕವೇ ಮುಂತಾದ (ದೇಶಗಳಿಗೆ) ಬೇಗನೆ ಹೋಗುವಾಗ ಮೊದಲೇ (ತಾನು, ಅಲ್ಲಿಗೆ ತಲುಪಿದ್ದಂತೆ **ಆತ್ಮಚೈತನ್ಯಾಭಾಸವು**[3] ತೋರಿಕೊಳ್ಳುತ್ತದೆ. ಆದ್ದರಿಂದ (ಆತ್ಮತತ್ತ್ವವು) ಮನಸ್ಸಿಗಿಂತಲೂ ಹೆಚ್ಚು ವೇಗವುಳ್ಳದ್ದು ಎಂದು (ಮಂತ್ರದಲ್ಲಿ) ಹೇಳಿರುತ್ತದೆ.

ಹೊಳೆಯುವದರಿಂದ ಚಕ್ಷುಸ್ಸೇ ಮುಂತಾದ ಇಂದ್ರಿಯಗಳಿಗೆ ದೇವತೆಗಳೆಂದು (ಹೆಸರು. ಆ ದೇವತೆಗಳು) ಈ ಪ್ರಕೃತವಾಗಿರುವ ಆತ್ಮತತ್ತ್ವವನ್ನು ಪಡೆಯಲಾರವು. ಅವುಗಳಿಗಿಂತಲೂ ಮನಸ್ಸು ವೇಗವಾಗಿರುತ್ತದೆ. (ಈ ಇಂದ್ರಿಯಗಳಿಗೆ) ಮನಸ್ಸಿನ ವ್ಯಾಪಾರವು ನಡುವೆ ಆಗಬೇಕಾಗಿರುವದರಿಂದ[4] (ಈ) ದೇವತೆಗಳಿಗೆ **ಆತ್ಮನ ಆಭಾಸವು ಕೂಡ** ವಿಷಯವಾಗುವಹಾಗಿಲ್ಲ.[5] ಏಕೆಂದರೆ ಆಕಾಶದಂತೆ (ಎಲ್ಲವನ್ನೂ) ವ್ಯಾಪಿಸಿಕೊಂಡಿರುವದರಿಂದ (ಈ ಆತ್ಮತತ್ತ್ವವು) ವೇಗವಾದ ಮನಸ್ಸಿಗಿಂತಲೂ ಮೊದಲೇ ಹೋಗಿರುತ್ತದೆ.

---

1. ಸಂಕಲ್ಪವೆಂದರೆ ಹೀಗೆ ಮಾಡುವೆನೆಂದು ಮನಸ್ಸುಮಾಡುವದು, ವಿಕಲ್ಪವೆಂದರೆ ವಸ್ತುವನ್ನು ಅರಿಯುವಾಗ ಅದರ ಸ್ವಭಾವದ ವಿಷಯವಾಗಿ ವಿವಿಧವಾಗಿ ಕಲ್ಪಿಸಿಕೊಳ್ಳುವದು.

2. ಈ ಲೋಕದಲ್ಲಿ.

3. ಸೂರ್ಯಪ್ರತಿಬಿಂಬದಂತೆ ಕಲ್ಪಿತವಾದ ರೂಪವುಳ್ಳ ಕರ್ತೃಭೋಕ್ತೃರೂಪನಾದ ಜೀವನು. ಜೀವಾತ್ಮನಿಗೇ ಮನಸ್ಸು ಇಂಥ ಕಡೆಗೆ ಹೋಯಿತೆಂದು ತಿಳಿಯುವದು. ಆದ್ದರಿಂದ ಮನಸ್ಸು ಎಲ್ಲಿಗೆ ಹೋದರೂ ಅದು ಅಲ್ಲಿಗೆ ಹೋಯಿತೆಂದು ಅರಿಯುವ ಆತ್ಮನು ಮೊದಲೇ ಅಲ್ಲಿದ್ದಂತೆ ಆಗಿರುತ್ತದೆ, ನಿಜವಾಗಿ ಆತ್ಮನು ಎಲ್ಲಿಗೂ ಹೋಗಿರುವದಿಲ್ಲ. ಚಿದಾಭಾಸದ ವಿಷಯಕ್ಕೆ ಛಾಂ. 6-3-2, ಪ್ರ. 4-9-ಈ ಭಾಷ್ಯವನ್ನು ನೋಡಿರಿ.

4. ಮನಸ್ಸಿನ ವ್ಯಾಪಾರವಿಲ್ಲದೆ ಇಂದ್ರಿಯವ್ಯಾಪಾರವಿಲ್ಲ ; ಮನಸ್ಸಿಗೂ ಆಚೆ ಇರುವ ಆತ್ಮತತ್ತ್ವವು ಇಂದ್ರಿಯಗಳಿಗಿಂತ ಆಚೆ ಎಂದು ಹೇಳುವದೇನಿದೆ ?-ಎಂದು ಭಾವ.

5. ಮನಸ್ಸಿನಲ್ಲಿ ತೋರುವ ಆತ್ಮನ ಆಭಾಸವೇ ಇಂದ್ರಿಯಗಳಿಗೆ ವಿಷಯವಲ್ಲವಷ್ಟೆ ? ಇನ್ನು ಬಿಂಬದಂತಿರುವ ಆತ್ಮತತ್ತ್ವವು ಹೇಗೆ ವಿಷಯವಾದೀತು ?

ಎಲ್ಲವನ್ನೂ ವ್ಯಾಪಿಸಿರುವ[1] ಈ ಆತ್ಮತತ್ತ್ವವು ಯಾವ ಸಂಸಾರಧರ್ಮವೂ[2] ಇಲ್ಲದೆ ತನ್ನ ಯಾವ ಉಪಾಧಿಯೂ ಇಲ್ಲದ ಸ್ವರೂಪದಲ್ಲಿ ಯಾವ ಮಾರ್ಪಾಡುಗಳೂ ಇಲ್ಲದೆ ಇದ್ದುಕೊಂಡೇ ಉಪಾಧಿಯಿಂದಾಗಿರುವ ಸಂಸಾರದ ಮಾರ್ಪಾಡುಗಳನ್ನೆಲ್ಲ ಅನುಭವಿಸುತ್ತಿರುವಂತೆಯೂ ಒಂದೊಂದು ದೇಹಕ್ಕೂ (ಒಂದೊಂದರಂತೆ) ಅನೇಕವಾಗಿರುವಂತೆಯೂ ವಿವೇಕವಿಲ್ಲದ ಮೂಢರಿಗೆ ತೋರುತ್ತದೆ[3] ಎಂಬೀ (ಅರ್ಥವನ್ನು ಈಗ ಮಂತ್ರವು) ಹೇಳುತ್ತದೆ :

ಅದು ಓಡಿಹೋಗುತ್ತಿರುವ ಬೇಗಬೇಗನೆ ಹೋಗುತ್ತಿರುವ ಮಿಕ್ಕವರನ್ನು ತನಗಿಂತ ಬೇರೆಯ ಸ್ವಭಾವದವರಾಗಿರುವ ಉಳಿದ ಮನಸ್ಸು, ವಾಕ್ಕು, ಇಂದ್ರಿಯ-ಮುಂತಾದವುಗಳನ್ನು ದಾಟಿಹೋಗಿರುವದು, ಅವುಗಳನ್ನು ಮೀರಿಹೋಗಿರುವಂತೆ, ಇರುತ್ತದೆ. (ಹೋಗಿರುವಂತೆ, ನಿಜವಾಗಿ ಹೋಗಿರುವದಿಲ್ಲ ಎಂಬ) 'ಅಂತೆ' ಎಂಬ ಮಾತಿನರ್ಥವನ್ನು (ಮಂತ್ರವು) ತಾನೇ 'ನಿಂತುಕೊಂಡಿದ್ದೇ' ಎಂಬ (ಮಾತಿನಿಂದ) ತಿಳಿಸಿಕೊಟ್ಟಿರುತ್ತದೆ. (ನಿಂತುಕೊಂಡಿದ್ದೇ ಎಂದರೆ) ತಾನು ಯಾವ ಮಾರ್ಪಾಡುಗಳೂ ಇಲ್ಲದ್ದಾಗಿಯೇ ಇದ್ದುಕೊಂಡು ಎಂದರ್ಥ.

(ಭಾಷ್ಯ)

೧೨. ತಸ್ಮಿನ್ ಆತ್ಮತತ್ತ್ವೇ ಸತಿ ನಿತ್ಯಚೈತನ್ಯಸ್ವಭಾವೇ ಮಾತರಿಶ್ವಾ ಮಾತರಿ ಅನ್ತರಿಕ್ಷೇ ಶ್ವಯತಿ ಗಚ್ಛತೀತಿ ಮಾತರಿಶ್ವಾ ವಾಯುಃ, ಸರ್ವಪ್ರಾಣಭೃತ್ಕ್ರಿಯಾತ್ಮಕೋ ಯದಾಶ್ರಯಾಣಿ ಕಾರ್ಯಕರಣಜಾತಾನಿ, ಯಸ್ಮಿನ್ನೋತಾನಿ ಪ್ರೋತಾನಿ ಚ, ಯತ್ **ಸೂತ್ರಸಂಜ್ಞಕಂ** ಸರ್ವಸ್ಯ ಜಗತೋ ವಿಧಾರಯಿತೃ । ಸ ಮಾತರಿಶ್ವಾ ಅಪಃ ಕರ್ಮಾಣಿ ಪ್ರಾಣಿನಾಂ ಚೇಷ್ಟಾ ಲಕ್ಷಣಾನಿ ಅಗ್ನ್ಯಾದಿತ್ಯಪರ್ಜನ್ಯಾದೀನಾಂ ಜ್ವಲನದಹನಪ್ರಕಾಶಾಭಿವರ್ಷಣಾದಿಲಕ್ಷಣಾನಿ ದಧಾತಿ ವಿಭಜತೀತ್ಯರ್ಥಃ । ಧಾರಯತೀತಿ ವಾ । ''ಭೀಷಾಽಸ್ಮಾದ್ವಾತಃ ಪವತೇ'' (ತೈ. ೨-೮) ಇತ್ಯಾದಿಶ್ರುತಿಭ್ಯಃ । ಸರ್ವಾ ಹಿ ಕಾರ್ಯಕರಣವಿಕ್ರಿಯಾ ನಿತ್ಯಚೈತನ್ಯಾತ್ಮಸ್ವರೂಪೇ ಸರ್ವಾಸ್ಪದಭೂತೇ ಸತ್ಯೇವ ಭವನ್ತೀತ್ಯರ್ಥಃ ॥

---

1. ''ಸರ್ವವ್ಯಾಪಿ'' ಎಂಬ ಮೂಲಕ್ಕೆ ಬದಲು ''ಸರ್ವದಾ...'' (ಹಿ॥) ಎಂಬ ಪಾಠವೂ ಉಂಟು. ಆಗ ಯಾವಾಗಲೂ ಸಂಸಾರಧರ್ಮವಿಲ್ಲದ್ದು-ಎಂಬ ಅರ್ಥಸ್ವಾರಸ್ಯವು ಬರುತ್ತದೆ. ನಿಜವಾಗಿ ಸಂಸಾರಿಯಲ್ಲದ ಆತ್ಮನಲ್ಲಿ ಕಲ್ಪಿತವಾದ ಸಂಸಾರಿತ್ವವು ತೋರುವದು ವಿರುದ್ಧವಲ್ಲ-ಎಂದು ಭಾವ.

2. ಕರ್ಮವನ್ನು ಮಾಡುವದು, ಲೋಕಾಂತರಜನ್ಮಾಂತರಗಳನ್ನು ಪಡೆಯುವದು, ಸುಖದುಃಖಗಳನ್ನು ಹೊಂದುವದು-ಮುಂತಾದವು ಸಂಸಾರಧರ್ಮಗಳು.

3. ನಿಜವಾಗಿ ಎಲ್ಲರ ಆತ್ಮನೂ ಅಸಂಸಾರಿಯೇ, ಒಬ್ಬನೇ. ಗೀ.ಭಾ. 13-14, 16.

(ಭಾಷ್ಯಾರ್ಥ)

ನಿತ್ಯವಾದ ಅರಿವಿನ ರೂಪವಾಗಿರುವ ಆ ಆತ್ಮತತ್ತ್ವವು ಇರುವದರಿಂದಲೇ ಮಾತರಿಶ್ವನು ಎಂದರೆ ಮಾತೃವಾದ ಅಂತರಿಕ್ಷದಲ್ಲಿ[1] ನಡೆಯುವ (ಶ್ವಯತಿ) ವಾಯುವು, ಎಲ್ಲಾ ಪ್ರಾಣಧಾರಿಗಳ[2] ಕ್ರಿಯಾರೂಪನಾಗಿರುವ[3] (ಪ್ರಾಣನು) ; ಈತನನ್ನು ಆಶ್ರಯಿಸಿಕೊಂಡೇ ಎಲ್ಲಾ ದೇಹೇಂದ್ರಿಯಸಮೂಹಗಳೂ (ಇರುವವು), (ಅವು) ಈತನಲ್ಲಿಯೇ ಹಾಸುಹೊಕ್ಕಾಗಿ ಹೆಣೆದುಕೊಂಡಿರುವವು, ಈತನೇ **ಸೂತ್ರವೆಂಬ** ಹೆಸರಿನಿಂದ[4] ಜಗತ್ತೆಲ್ಲವನ್ನೂ ಹಿಡಿದೆತ್ತಿಕೊಂಡಿರುವವನು. ಆ ಮಾತರಿಶ್ವನು ನೀರುಗಳನ್ನು ಎಂದರೆ ಪ್ರಾಣಿಗಳ ವ್ಯಾಪಾರರೂಪವಾದ ಕರ್ಮಗಳನ್ನು[5], ಬೆಂಕಿ, ಸೂರ್ಯ, ಮೋಡ - ಮುಂತಾದವುಗಳು ಉರಿಯುವದು, ಸುಡುವದು, ಬೆಳಗುವದು, ಮಳೆಗರೆಯುವದು- ಮುಂತಾದ - (ಆಯಾ ಕರ್ಮಗಳನ್ನು)[6] 'ದಧಾತಿ' ಎಂದರೆ ವಿಂಗಡಿಸಿಕೊಡುವನು -ಎಂದರ್ಥ. ಅಥವಾ ನಿಲ್ಲಿಸಿಕೊಂಡಿರುತ್ತಾನೆ ಎಂದರ್ಥ ; ''ಇವನ ಹೆದರಿಕೆಯಿಂದ ವಾಯು ಬೀಸುತ್ತದೆ'' (ತೈ.2-8) ಎಂದು ಮುಂತಾಗಿರುವ ಶ್ರುತಿಗಳು (ಇದಕ್ಕೆ ಆಧಾರವು). ಶರೀರೇಂದ್ರಿಯಗಳ ಮಾರ್ಪಾಡುಗಳೆಲ್ಲವೂ ಎಲ್ಲಕ್ಕೂ ಆಧಾರವಾಗಿರುವ ನಿತ್ಯಚೈತನ್ಯವಾದ ಆತ್ಮಸ್ವರೂಪವು ಇದ್ದರೇ ಆಗುವವು ಎಂದರ್ಥ. ॥೪॥

---

1. 'ಮಾತೃ' ಎಂದರೆ ಅಳೆಯುವವನು ; ಇಲ್ಲಿ ವಾಯುವನ್ನು ಅಳೆಯುವ ಅಂತರಿಕ್ಷವು ಎಂದಿದೆ.

2. ಜೀವರುಗಳ ; ಜೀವ ಎಂಬ ಮಾತೇ ಪ್ರಾಣವನ್ನು ಧರಿಸಿರುವವನು ಎಂಬರ್ಥವುಳ್ಳದ್ದು.

3. ಶರೀರದಲ್ಲಿ ನಡೆಯುವ ಕ್ರಿಯೆಯೆಲ್ಲವೂ ಪ್ರಾಣರೂಪವಾಗಿರುವ ವಾಯುವಿನ ವ್ಯಾಪಾರವು.

4. ಅಪರಬ್ರಹ್ಮವೆನಿಸಿದ ಪ್ರಾಣವನ್ನು ಕ್ರಿಯಾಪ್ರಧಾನವಾಗಿ **'ವಾಯು' ಅಥವಾ ಸೂತ್ರಾತ್ಮನೆಂದೂ** ಜ್ಞಾನಪ್ರಧಾನವಾಗಿ **ಹಿರಣ್ಯಗರ್ಭನೆಂದೂ** ಕರೆಯುತ್ತಾರೆ. **'ಸೂತ್ರ'**ನ ವಿಷಯಕ್ಕೆ ಬೃ. 3-7-2ನ್ನು ನೋಡಿರಿ.

5. ವೈದಿಕಕರ್ಮಗಳನ್ನು ಸೋಮ, ತುಪ್ಪ, ಹಾಲು - ಮುಂತಾದ ನೀರಾದ ವಸ್ತುಗಳಿಂದಲೇ ಮುಖ್ಯವಾಗಿ ಮಾಡುವರು ; ಆದ್ದರಿಂದ ಇಲ್ಲಿ 'ಅಪಃ' (ನೀರುಗಳನ್ನು) ಎಂದರೆ ಕರ್ಮಗಳನ್ನು ಎಂದರ್ಥ. ಈ ಅರ್ಥದಲ್ಲಿ 'ಅಪ್' ಎಂಬ ಮಾತನ್ನು ವೇದದಲ್ಲಿ ಅಲ್ಲಲ್ಲಿ ಉಪಯೋಗಿಸಿದೆ.

6. ಬೆಂಕಿ ಮುಂತಾದವುಗಳ ವ್ಯಾಪಾರಗಳೂ ಅಗ್ನಿ ಮುಂತಾದ ದೇವತೆಗಳ ವ್ಯಾಪಾರವೇ, ಆದ್ದರಿಂದ ಪ್ರಾಣಿಗಳ ಕೆಲಸವೆಲ್ಲವೂ ವಾಯುವಿನ ಸಹಾಯದಿಂದಲೇ ನಡೆಯುವವು ; ಆ ವಾಯುವಿಗೆ ಆಧಾರವಾಗಿ ಪರಮಾತ್ಮಚೈತನ್ಯವಿರುವದರಿಂದಲೇ ಅವು ನಡೆಯುವವು. ಗೀ. 9-19 ನೋಡಿ.

(ಭಾಷ್ಯ)

೧೩. ನ ಮನ್ತ್ರಾಣಾಂ ಜಾಮಿತಾಽಸ್ತೀತಿ ಪೂರ್ವಮನ್ತ್ರೋಕ್ತಮಪ್ಯರ್ಥಂ ಪುನರಾಹ-

(ಭಾಷ್ಯಾರ್ಥ)

ಮಂತ್ರಗಳಲ್ಲಿ ಪುನರುಕ್ತಿ[1] ದೋಷವಿಲ್ಲ ; ಆದ್ದರಿಂದ ಹಿಂದೆ ಹೇಳಿದರ್ಥವನ್ನೇ ಮತ್ತೊಮ್ಮೆ (ಈ ಮಂತ್ರವೂ) ಹೇಳುತ್ತದೆ :

**ತದೇಜತಿ ತನ್ನೈಜತಿ**
**ತದ್ದೂರೇ ತದ್ವನ್ತಿಕೇ ।**
**ತದನ್ತರಸ್ಯ ಸರ್ವಸ್ಯ**
**ತದು ಸರ್ವಸ್ಯಾಸ್ಯ ಬಾಹ್ಯತಃ** ॥೫॥

೫. ಅದು ಅಲುಗಾಡುವದು, ಅದು ಅಲುಗಾಡುವದಿಲ್ಲ ; ಅದು ದೂರದಲ್ಲಿ (ರುವದು), ಅದೇ ಹತ್ತಿರದಲ್ಲಿರುವದು. ಅದು ಇದೆಲ್ಲದರ ಒಳಗೂ ಇರುವದು, ಅದೇ ಈ ಎಲ್ಲಕ್ಕೂ ಹೊರಗೆ ಇರುವದು.

(ಭಾಷ್ಯ)

೧೪. ತತ್ ಆತ್ಮತತ್ತ್ವಂ ಯತ್ ಪ್ರಕೃತಮ್ ಏಜತಿ ಚಲತಿ ; ತದೇವ ಚ ನೈಜತಿ ಸ್ವತೋ ನೈವ ಚಲತಿ । ಸ್ವತೋಽಚಲಮೇವ ಸತ್ ಚಲತೀವೇತ್ಯರ್ಥಃ ॥

ಕಿಂ ಚ ತದ್ದೂರೇ ವರ್ಷಕೋಟಿಶತೈರಪ್ಯವಿದುಷಾಮಪ್ರಾಪ್ಯತ್ವಾದ್ದೂರೇ ಇವ । ತತ್ ಉ ಅನ್ತಿಕೇ ಇತಿ ಚ್ಛೇದಃ । ತದ್ವನ್ತಿಕೇ ಸಮೀಪೇ ಅತ್ಯನ್ತಮೇವ ವಿದುಷಾಮ್, ಆತ್ಮತ್ವಾತ್ । ನ ಕೇವಲಂ ದೂರೇ ಅನ್ತಿಕೇ ಚ, ತತ್ ಅನ್ತಃ ಅಭ್ಯನ್ತರೇ ಅಸ್ಯ ಸರ್ವಸ್ಯ । ''ಯ ಆತ್ಮಾ ಸರ್ವಾನ್ತರಃ'' (ಬೃ.3-4-1) ಇತಿಶ್ರುತೇಃ । ಅಸ್ಯ ಸರ್ವಸ್ಯ ಜಗತೋ ನಾಮರೂಪಕ್ರಿಯಾತ್ಮಕಸ್ಯ । ತತ್ ಉ ಅಪಿ ಸರ್ವಸ್ಯಾಸ್ಯ ಬಾಹ್ಯತಃ, ವ್ಯಾಪಕತ್ವಾತ್ ಆಕಾಶವತ್ । ನಿರತಿಶಯಸೂಕ್ಷ್ಮತ್ವಾತ್ ಅನ್ತಃ । ''ಪ್ರಜ್ಞಾನಘನ ಏವ'' (ಬೃ. 4-5-13) ಇತಿ ಶಾಸನಾತ್ ನಿರನ್ತರಂ ಚ ॥

(ಭಾಷ್ಯಾರ್ಥ)

ಆ ಪ್ರಕೃತವಾಗಿರುವ[2] ಆತ್ಮತತ್ತ್ವವು ಅಲುಗಾಡುತ್ತದೆ ; ಅದೇ ತನ್ನ ರೂಪದಿಂದ ಅಲುಗಾಡುವದಿಲ್ಲ. ತನ್ನ ರೂಪದಿಂದ ಅಲುಗಾಡದೆ ಇದ್ದುಕೊಂಡೇ ಅಲುಗಾಡುವಂತೆ[3] ತೋರುತ್ತದೆ ಎಂದರ್ಥ.

---

1. ಭಾಷ್ಯದಲ್ಲಿರುವ 'ಜಾಮಿತಾ' ಎಂಬ ಮಾತಿಗೆ ಹೋಲಿಕೆ, ಒಂದೇ ರೂಪವಾಗಿ ಎರಡು ಸಲ ಹೇಳುವದು ಎಂದರ್ಥ. ಶಾ. ಭಾ. ಜೈ. ಸೂ. 10-8-63.

2. 'ತತ್' ಎಂಬ ಸರ್ವನಾಮವು ಪ್ರಕೃತವಾದ ಆತ್ಮನನ್ನು ತಿಳಿಸುವದಕ್ಕೆ ಬಂದಿದೆ.

3. ಉಪಾಧಿಯಿಂದ ಹಾಗೆ ತೋರುತ್ತದೆ.

(ಭಾಷ್ಯಾರ್ಥ)

ಮತ್ತು ಅದು ದೂರದಲ್ಲಿರುತ್ತದೆ ; ನೂರು ಕೋಟಿ ವರ್ಷಗಳಾದರೂ ಅಜ್ಞಾನಿಗಳಿಗೆ ಸಿಕ್ಕದೆ ಇರುವದರಿಂದ ದೂರದಲ್ಲಿರುವಂತೆ ಇರುವದು. ಅದೇ ಹತ್ತಿರದಲ್ಲಿರುವದು, ಜ್ಞಾನಿಗಳಿಗೆ ತೀರ ಸಮೀಪದಲ್ಲಿರುವದು ; ಏಕೆಂದರೆ (ಅದು ಅವರ) ಆತ್ಮನೇ ಆಗಿರುತ್ತದೆ. ದೂರದಲ್ಲಿಯೂ ಹತ್ತಿರದಲ್ಲಿಯೂ[1] ಇರುವದು ಮಾತ್ರವೇ ಅಲ್ಲ, ಅದು ಎಲ್ಲದರ ಒಳಗೂ ಇರುವದು ; ''ಯಾವ ಆತ್ಮನು ಎಲ್ಲಕ್ಕೂ ಒಳಗಿರುವನೋ'' (ಬೃ. 3-4-1) ಎಂಬ ಶ್ರುತಿ ಇದಕ್ಕೆ ಆಧಾರವು, ''ಈ ಎಲ್ಲಕ್ಕೂ'' ಎಂದರೆ ನಾಮ, ರೂಪ, ಕ್ರಿಯೆ-ಇವುಗಳ ರೂಪದಲ್ಲಿರುವ ಜಗತ್ತಿಗೆ.[2] ಅದೇ ಈ ಎಲ್ಲಕ್ಕೂ ಹೊರಗೆ ಇರುವದು ; ಏಕೆಂದರೆ ಆಕಾಶದಂತೆ (ಎಲ್ಲವನ್ನೂ) ವ್ಯಾಪಿಸಿಕೊಂಡಿರುವದು, ಮಿಗಿಲಿಲ್ಲದಷ್ಟು ಸೂಕ್ಷ್ಮವಾಗಿರುವದರಿಂದ[3] ಒಳಗೆ ಇರುವದು ; ''ಪ್ರಜ್ಞಾನದ ಗಟ್ಟಿಯೇ'' (ಬೃ. 4-5-13) ಎಂದು ಶಾಸ್ತ್ರವಿರುವದರಿಂದ ತನ್ನೊಳಗೆ ಬಿಡುವಿಲ್ಲದೆಯೂ[4] ಇರುವದು. ॥೫॥

ಯಸ್ತು ಸರ್ವಾಣಿ ಭೂತಾನಿ
ಆತ್ಮನ್ಯೇವಾನುಪಶ್ಯತಿ ।
ಸರ್ವಭೂತೇಷು ಚಾತ್ಮಾನಂ
ತತೋ ನ ವಿಜುಗುಪ್ಸತೇ ॥೬॥

೬. ಯಾವನಾದರೆ ಎಲ್ಲಾ ಭೂತಗಳನ್ನೂ (ತನ್ನ) ಆತ್ಮನಲ್ಲಿಯೇ ಕಾಣುವನೋ ಮತ್ತು ಎಲ್ಲಾ ಭೂತಗಳಲ್ಲಿಯೂ (ತನ್ನ) ಆತ್ಮನನ್ನು (ಕಾಣುವನೋ ಆತನು) ಅದರಿಂದ ಜುಗುಪ್ಸೆಯನ್ನು ಮಾಡದೆ ಇರುವನು.

(ಭಾಷ್ಯ)

೧೫. ಯಸ್ತು ಪರಿವ್ರಾಟ್ ಮುಮುಕ್ಷುಃ ಸರ್ವಾಣಿ ಭೂತಾನಿ ಅವ್ಯಕ್ತಾದೀನಿ ಸ್ಥಾವರಾನ್ತಾನಿ ಆತ್ಮನ್ಯೇವ ಅನುಪಶ್ಯತಿ, ಆತ್ಮವ್ಯತಿರಿಕ್ತಾನಿ ನ ಪಶ್ಯತೀತ್ಯರ್ಥಃ ।

---

1. ಮುಂ. ಭಾ. 3-1-7.

2. ಅನಾತ್ಮವಾದ ಜಗತ್ತೆಲ್ಲವೂ ನಾಮರೂಪಕರ್ಮಗಳಿಂದಾಗಿರುವವೆಂದು ಮುಂದೆ ಬೃಹದಾರಣ್ಯಕದ 1-6-1 ರಲ್ಲಿ ವಿವರಿಸಿ ಹೇಳಿರುತ್ತದೆ.

3. ಅತೀಂದ್ರಿಯವಾಗಿರುವದರಿಂದ. ಇಂದ್ರಿಯಗಳಿಗೆ ಗೋಚರವಾದದ್ದು ಸ್ಥೂಲ, ಅಲ್ಲದ್ದು ಸೂಕ್ಷ್ಮ - ಎಂದು ವ್ಯವಹಾರ.

4. ಆತ್ಮನಲ್ಲಿ ಚೈತನ್ಯವನ್ನು ಬಿಟ್ಟರೆ ಮತ್ತೆ ಯಾವ ಬಗೆಯ ವಸ್ತುವೂ ಇರುವದಿಲ್ಲ. ಆದ್ದರಿಂದ ಅದರಲ್ಲಿ ನಡುನಡುವೆ ಮತ್ತೇನಾದರೂ ಇದ್ದೀತೆಂದು ಶಂಕಿಸುವದಕ್ಕೆ ಬರುವ ಹಾಗಿಲ್ಲ. ಒಳಗೆ, ಹೊರಗೆ, ನಡುವೆ - ಎಂಬುದೆಲ್ಲವೂ ಆಕಾಶದಿಂದ ತೋರುವ ಭಾವನೆಯಾದ್ದರಿಂದ ಆತ್ಮನಿಗೆ ಒಳಗೂ ಹೊರಗೂ ನಡುವೆಗಳು ಇಲ್ಲವೆಂಬುದೇ ಇಲ್ಲಿ ವಿವಕ್ಷಿತವಾಗಿರುತ್ತದೆ.

ಸರ್ವಭೂತೇಷು ತೇಷ್ವೇವ ಚ ಆತ್ಮಾನಂ ತೇಷಾಮಪಿ ಭೂತಾನಾಂ ಸ್ವಮಾತ್ಮಾನ ಮಾತ್ಮತ್ವೇನ । "ಯಥಾ ಅಸ್ಯ ದೇಹಸ್ಯ ಕಾರ್ಯಕರಣಸಙ್ಘಾತಸ್ಯ ಆತ್ಮಾ ಅಹಂ ಸರ್ವಪ್ರತ್ಯಯಸಾಕ್ಷಿಭೂತಶ್ಚೇತಯಿತಾ ಕೇವಲೋ ನಿರ್ಗುಣಃ, ಅನೇನೈವ ಸ್ವರೂಪೇಣ **ಅವ್ಯಕ್ತಾದೀನಾಂ ಸ್ಥಾವರಾನ್ತಾನಾಮ್** ಅಹಮೇವ ಆತ್ಮಾ" ಇತಿ ಸರ್ವಭೂತೇಷು ಚಾತ್ಮಾನಂ ನಿರ್ವಿಶೇಷಂ ಯಸ್ತ್ವನುಪಶ್ಯತಿ ಸಃ ತತಃ ತಸ್ಮಾದೇವ ದರ್ಶನಾತ್ ನ ವಿಜುಗುಪ್ಸತೇ ವಿಜುಗುಪ್ಸಾಂ ಘೃಣಾಂ ನ ಕರೋತಿ ॥

ಪ್ರಾಪ್ತಸ್ಯೈವಾನುವಾದೋಽಯಮ್ । ಸರ್ವಾ ಹಿ ಘೃಣಾ ಆತ್ಮನೋಽನ್ಯದ್ದುಷ್ಟಂ ಪಶ್ಯತೋ ಭವತಿ । ಆತ್ಮಾನಮೇವ ಅತ್ಯನ್ತವಿಶುದ್ಧಂ ನಿರನ್ತರಂ ಪಶ್ಯತೋ ನ ಘೃಣಾನಿಮಿತ್ತಮರ್ಥಾನ್ತರಮಸ್ತೀತಿ ಪ್ರಾಪ್ತಮೇವ 'ತತೋ ನ ವಿಜುಗುಪ್ಸತೇ ಇತಿ' ॥

(ಭಾಷ್ಯಾರ್ಥ)

ಯಾವ **ಪರಿವ್ರಾಜಕನಾದ**[1] ಮುಮುಕ್ಷುವು ಸಮಸ್ತಭೂತಗಳನ್ನೂ ಅಂದರೆ ಅವ್ಯಕ್ತವೇ ಮುಂತಾಗಿ ಸ್ಥಾವರದವರೆಗೆ ಇರುವ (ಭೂತಗಳನ್ನು)[2] ಆತ್ಮನಲ್ಲಿಯೇ ಕಾಣುವನೋ, ಎಂದರೆ ಆತ್ಮನಿಗಿಂತ ಬೇರೆಯಾಗಿ ಕಾಣುವದಿಲ್ಲವೋ ಎಂದರ್ಥ. ಎಲ್ಲಾ ಭೂತಗಳಲ್ಲಿ ಎಂದರೆ ಅದೇ (ಅವ್ಯಕ್ತಾದಿಗಳಲ್ಲಿ) ಆತ್ಮನನ್ನು ಆ ಭೂತಗಳಿಗೂ ತನ್ನ ಆತ್ಮನೇ ಆತ್ಮನಾಗಿರುವನೆಂದು- "ಹೇಗೆ **ಕಾರ್ಯಕರಣಗಳ ಸಂಘಾತವಾಗಿರುವ** ಈ ದೇಹಕ್ಕೆ ಎಲ್ಲಾ ಪ್ರತ್ಯಯಗಳಿಗೂ ಸಾಕ್ಷಿಯಾಗಿ ಚೇತನರೂಪನಾಗಿ, ಕೇವಲನಾಗಿ ನಿರ್ಗುಣನಾಗಿರುವ[3] ನಾನು ಆತ್ಮನೋ (ಇದರಂತೆ) ಇದೇ **ಸ್ವರೂಪದಿಂದಲೇ ಅವ್ಯಕ್ತವೇ ಮುಂತಾಗಿ ಸ್ಥಾವರದವರೆಗಿನ (ಭೂತಗಳಿಗೆ) ನಾನೇ ಆತ್ಮನು**" ಎಂದು-ಎಲ್ಲಾ ಭೂತಗಳಲ್ಲಿಯೂ ಯಾವ **ವಿಶೇಷವೂ**[4] ಇಲ್ಲದ ಆತ್ಮನನ್ನು ಯಾವನಾದರೆ ಕಾಣುವನೋ, ಅವನು ಅದರಿಂದ ಎಂದರೆ ಹಾಗೆ ಕಾಣುವದರಿಂದಲೇ[5] ಜುಗುಪ್ಸೆಯನ್ನು ಮಾಡದೆ ಇರುವನು.

---

1. ಏಷಣಾತ್ರಯವನ್ನು ಬಿಟ್ಟ ನಿರಭಿಮಾನಿಗೇ ತತ್ತ್ವಜ್ಞಾನವುಂಟಾಗುವದೆಂದು ಸೂಚಿಸುವದಕ್ಕೆ ಈ ವಿಶೇಷಣವನ್ನು ಕೊಟ್ಟಿದೆ.

2. ಎಲ್ಲಾ ಪ್ರಾಣಿಗಳನ್ನೂ, ಶರೀರವನ್ನೂ ಸೇರಿಸಿಕೊಂಡೇ ಎಲ್ಲಾ ಜೀವರುಗಳನ್ನೂ ಭೂತಗಳೆಂದು ಕರೆದಿದೆ. ಅವ್ಯಕ್ತವೆಂದರೆ ಜಗತ್ತಿನ ಕಾರಣವಾದ (ಬೀಜ) ಸ್ಥಿತಿ.

3. ಶ್ವೇ. ೬-೧೧ರ ಅಭಿಪ್ರಾಯ. ಪರಮಾತ್ಮರೂಪದಿಂದಲೇ ನಾನು ಎಲ್ಲರ ಆತ್ಮನು ಎಂದಭಿಪ್ರಾಯ.

4. ಜಾತಿದ್ರವ್ಯಗುಣಕ್ರಿಯಾದಿಗಳಿಗೆ ವಿಶೇಷಗಳೆಂದು ಹೆಸರು.

5. ಸರಿಯಾದ ಜ್ಞಾನದ ಫಲವಿದು ಎಂದರ್ಥ. ಈ ಜ್ಞಾನವನ್ನು ಧ್ಯಾನಯೋಗದ ಫಲವೆಂದು ಗೀತೆಯ ೬-೨೯ರಲ್ಲಿಯೂ ತಿಳಿಸಿದೆ.

ಇದು (ತಾನೇ) ಸಿದ್ಧವಾಗಿರುವದನ್ನೇ ಅನುವಾದಮಾಡಿದ್ದು.[1] ಏಕೆಂದರೆ ತನಗಿಂತ ಬೇರೆಯಾಗಿರುವ ಕೆಟ್ಟ (ವಸ್ತು) ವನ್ನು ಕಂಡವನಿಗೇ ಅಲ್ಲವೆ, ಯಾವದರ ನಿಂದೆಯಾದರೂ ಸಂಭವಿಸಬೇಕು ? ಅತ್ಯಂತಪರಿಶುದ್ಧವಾಗಿರುವ, ತನ್ನೊಳಗೆ ಯಾವ ಬಿಡುವೂ ಇಲ್ಲದ, ಆತ್ಮನೊಬ್ಬನನ್ನೇ ಕಂಡುಕೊಂಡವನಿಗೆ ನಿಂದಿಸುವದಕ್ಕೆ ಕಾರಣವಾದ ಬೇರೆಯ ಪದಾರ್ಥವೇ ಇರುವದಿಲ್ಲವಾದ್ದರಿಂದ ಆ ಜ್ಞಾನವಾಗಿರುವದರಿಂದ ಯಾವ ನಿಂದೆಯನ್ನೂ (ಜ್ಞಾನಿಯು) ಮಾಡುವದಿಲ್ಲವೆಂಬುದು ಸಿದ್ಧವಾಗಿಯೇ ಇರುತ್ತದೆ.॥೬॥

(ಭಾಷ್ಯ)

೧೬. ಇಮಮೇವಾರ್ಥಮ್ ಅನ್ಯೋಽಪಿ ಮನ್ತ್ರ ಆಹ-

(ಭಾಷ್ಯಾರ್ಥ)

ಇದೇ ಅಭಿಪ್ರಾಯವನ್ನು ಮತ್ತೊಂದು ಮಂತ್ರವೂ ಹೇಳುತ್ತಿದೆ :-

ಯಸ್ಮಿನ್ ಸರ್ವಾಣಿ ಭೂತಾನಿ
ಆತ್ಮೈವಾಭೂದ್ವಿಜಾನತಃ ।
ತತ್ರ ಕೋ ಮೋಹಃ ಕಃ ಶೋಕ
ಏಕತ್ವಮನುಪಶ್ಯತಃ ॥೭॥

೭. ಎಲ್ಲಿ ಎಲ್ಲಾ ಭೂತಗಳೂ ತಿಳಿದವನಿಗೆ ಆತ್ಮನೇ ಆಯಿತೋ ಅಲ್ಲಿ (ಎಲ್ಲವೂ) ಒಂದೆಂಬುದನ್ನು ಕಂಡುಕೊಂಡವನಿಗೆ ಯಾವ ಮೋಹವು ? ಯಾವ ಶೋಕವು ?

(ಭಾಷ್ಯ)

೧೭. ಯಸ್ಮಿನ್ ಕಾಲೇ, ಯಥೋಕ್ತಾತ್ಮನಿ ವಾ, ತಾನ್ಯೇವ ಭೂತಾನಿ ಸರ್ವಾಣಿ ಪರಮಾರ್ಥಾತ್ಮದರ್ಶನಾತ್ ಆತ್ಮೈವಾಭೂತ್ ಆತ್ಮೈವ ಸಂವೃತ್ತಃ ಪರಮಾರ್ಥವಸ್ತು ವಿಜಾನತಃ, ತತ್ರ ತಸ್ಮಿನ್ ಕಾಲೇ, ತತ್ರಾತ್ಮನಿ ವಾ, ಕೋ ಮೋಹಃ, ಕಃ ಶೋಕಃ ? ಶೋಕಶ್ಚ ಮೋಹಶ್ಚ ಕಾಮಕರ್ಮಬೀಜಮ್ ಅಜಾನತೋ ಭವತಿ, ನ ತ್ವಾತ್ಮೈಕತ್ವಂ ವಿಶುದ್ಧಂ ಗಗನೋಪಮಂ ಪಶ್ಯತಃ ॥

---

1. ತನ್ನ ಆತ್ಮನೊಬ್ಬನೇ ಎಲ್ಲರಿಗೂ ಆತ್ಮನು. ಈ ಆತ್ಮನನ್ನು ಬಿಟ್ಟರೆ ಮತ್ತೆ ಯಾವದೊಂದೂ ಇರುವದೇ ಇಲ್ಲ- ಎಂಬ ಜ್ಞಾನವುಂಟಾದಾಗ ಕೆಟ್ಟ ವಸ್ತುವೆಂದು ಯಾವದೂ ತೋರುವದಕ್ಕೆ ಅವಕಾಶವಿರುವದಿಲ್ಲವೆಂಬುದು ತಾನೇ ಸಿದ್ಧವಾಗಿರುತ್ತದೆ. ಆದ್ದರಿಂದ ಹೀಗೆ ಸಿದ್ಧವಾದ ಮಾತನ್ನೇ ಇಲ್ಲಿ ಶ್ರುತಿಯು ಬಿಡಿಸಿ ಹೇಳಿದೆ. ಹೊಸ ವಿಷಯವನ್ನೇನೂ ಪ್ರತಿಪಾದನೆ ಮಾಡಿಲ್ಲ - ಎಂದರ್ಥ.

"ಕೋ ಮೋಹಃ ಕಃ ಶೋಕಃ ?" ಇತಿ ಶೋಕಮೋಹಯೋರವಿದ್ಯಾಕಾರ್ಯಯೋರಾಕ್ಷೇಪೇಣ ಅಸಮ್ಭವ ಪ್ರದರ್ಶನಾತ್ ಸಕಾರಣಸ್ಯ ಸಂಸಾರಸ್ಯ ಅತ್ಯನ್ತಮೇವೋಚ್ಛೇದಃ ಪ್ರದರ್ಶಿತೋ ಭವತಿ ॥

(ಭಾಷ್ಯಾರ್ಥ)

ಎಲ್ಲಿ ಅಂದರೆ ಯಾವ ಕಾಲದಲ್ಲಿ, ಅಥವಾ ಹಿಂದೆ ಹೇಳಿದ (ಯಾವ) ಆತ್ಮನಲ್ಲಿ, ಅದೇ ಭೂತಗಳೆಲ್ಲವೂ ನಿಜವಾದ ಆತ್ಮನನ್ನು[1] ಕಂಡುಕೊಂಡದ್ದರಿಂದ ಪರಮಾರ್ಥವಸ್ತುವನ್ನು ತಿಳಿದವನಿಗೆ ಆತ್ಮನೇ ಆಯಿತೋ, (ಎಲ್ಲವೂ) ಆತ್ಮನೇ ಆಗಿಬಿಟ್ಟಿತೋ[2], ಅಲ್ಲಿ ಅಂದರೆ ಆ ಕಾಲದಲ್ಲಿ ಅಥವಾ ಆ ಆತ್ಮನಲ್ಲಿ[3] ಯಾಪ ಮೋಹವು ? ಯಾವ ಶೋಕವು, **ಶೋಕವೂ ಮೋಹವೂ ಕಾಮಕರ್ಮಗಳಿಗೆ ಬೀಜವು,** (ಇದು) ಅಜ್ಞಾನಿಗೆ ಆಗುವದೇ ಹೊರತು ಆಕಾಶದಂತೆ ಪರಿಶುದ್ಧವಾಗಿರುವ ಆತ್ಮೈಕತ್ವವನ್ನು ಕಂಡುಕೊಂಡವನಿಗೆ ಆಗಲಾರದು.

"ಯಾವ ಮೋಹವು ? ಯಾವ ಶೋಕವು ?" ಎಂದು **ಅವಿದ್ಯಾಕಾರ್ಯವಾದ**[4] ಶೋಕಮೋಹಗಳನ್ನು ಆಕ್ಷೇಪಿಸಿ (ಅವುಗಳಿಗೆ) ಅಸಂಭವವನ್ನು ತೋರಿಸಿರುವದರಿಂದ ಕಾರಣಸಹಿತವಾದ ಸಂಸಾರವು[5] (ಜ್ಞಾನಿಗೆ) ಅತ್ಯಂತವಾಗಿ[6] ನಾಶವಾಗುವದೆಂದು ತೋರಿಸಿಕೊಟ್ಟಂತಾಯಿತು. ॥೭॥

(ಭಾಷ್ಯ)

೧೮. ಯೋಽಯಮತೀತೈರ್ಮನ್ತ್ರೈರುಕ್ತ ಆತ್ಮಾ, ಸ ಸ್ವೇನ ರೂಪೇಣ ಕಿಂಲಕ್ಷಣ ಇತ್ಯಾಹಾಯಂ ಮನ್ತ್ರಃ -

(ಭಾಷ್ಯಾರ್ಥ)

ಹಿಂದಿನ ಮಂತ್ರಗಳಲ್ಲಿ ಹೇಳಿದ ಆತ್ಮನು ತನ್ನ ರೂಪದಲ್ಲಿ ಹೇಗಿರುವನೆಂಬುದನ್ನು ಈ ಮಂತ್ರವು ಹೇಳುತ್ತದೆ :

---

1. ದೇಹಾದಿಗಳು ನಾವು ಕಲ್ಪಿಸಿಕೊಂಡಿರುವ ಹುಸಿಯಾದ ಆತ್ಮಗಳು. ಪರಮಾತ್ಮನೇ ನಿಜವಾಗಿ ನಮ್ಮ ಆತ್ಮನು.

2. ಮೊದಲು ಎಲ್ಲವೂ ಆತ್ಮನೇ ಆಗಿತ್ತಾದರೂ ಅದು ತಿಳಿದಿರುವದಿಲ್ಲ ; ಹಗ್ಗವೆಂದು ತಿಳಿದ ಕೂಡಲೇ ಭ್ರಾಂತಿಯ ಹಾವು ಹಗ್ಗವೇ ಆಗಿಬಿಡುವಂತೆ ಆತ್ಮಜ್ಞಾನವು ಬಂದ ಕೂಡಲೇ ಎಲ್ಲವೂ ಆತ್ಮನೇ ಆಗಿಬಿಡುವದು.

3. 'ಆ ಕಾಲದಲ್ಲಿ' ಎಂದದ್ದರಿಂದ ಜ್ಞಾನಸಮಕಾಲದಲ್ಲಿ ಶೋಕಮೋಹಗಳು ತೊಲಗುವವು ಎಂದು ಹೇಳಿದಂತೆ ಆಯಿತು. 'ಆತ್ಮನಲ್ಲಿ' ಎಂದದ್ದರಿಂದ ಆತ್ಮದೃಷ್ಟಿಯಿಂದ ಯಾವಾಗಲೂ ಶೋಕಮೋಹಗಳು ಇರಲೇಇಲ್ಲ ಎಂದು ಹೇಳಿದಂತೆ ಆಯಿತು.

4. ಆತ್ಮನನ್ನು ಅರಿಯದೆ ತಪ್ಪುತಿಳಿವಳಿಕೆಯಿಂದಾಗಿದ್ದ.

5. ಅವಿದ್ಯೆಯೇ ಕಾರಣವು, ಸಂಸಾರವು ಅದರಿಂದಲೇ ತೋರುತ್ತಿರುವ ಕಾರ್ಯವು ; ಇಲ್ಲಿ ಕಾರಣವೆಂದರೆ ನಿಮಿತ್ತವು, ಮಡಕೆಗೆ ಮಣ್ಣಿನಂತೆ ಉಪಾದಾನಕಾರಣವಲ್ಲ.

6. ಮತ್ತೆ ಬಾರದಂತೆ.

ಸ ಪರ್ಯಗಾಚ್ಛುಕ್ರಮಕಾಯಮವ್ರಣಮ್
ಅಸ್ನಾವಿರಗ್ಂ ಶುದ್ಧಮಪಾಪವಿದ್ಧಮ್ ।
ಕವಿರ್ಮನೀಷೀ ಪರಿಭೂಃ ಸ್ವಯಮ್ಭೂ-
ರ್ಯಾಥಾತಥ್ಯತೋಽರ್ಥಾನ್ ವ್ಯದಧಾಚ್ಛಾಶ್ವತೀಭ್ಯಃ ಸಮಾಭ್ಯಃ ॥೮॥

೮. ಅವನು ಹಬ್ಬಿಕೊಂಡಿರುವವನು, ಬೆಳ್ಳಗಿರುವವನು, ಕಾಯವಿಲ್ಲದವನು, ವ್ರಣವಿಲ್ಲದವನು, ನರಗಳಿಲ್ಲದವನು, ಶುದ್ಧನಾಗಿರುವವನು ; ಪಾಪದ ಹೊಡೆತವಿಲ್ಲದವನು, ಕವಿಯು, ಮನೀಷಿಯು, ಎಲ್ಲರ ಮೇಲೂ ಇರುವಾತನು, ಸ್ವಯಂಭು, (ಆತನೇ) ಶಾಶ್ವತರಾಗಿರುವ ವರ್ಷಗಳಿಗೆ ಸತ್ಯವಾಗಿ ಅರ್ಥಗಳನ್ನು ವಿಂಗಡಿಸಿಕೊಟ್ಟಿರುತ್ತಾನೆ.

(ಭಾಷ್ಯ)

೧೯. ಸಃ ಯಥೋಕ್ತ ಆತ್ಮಾ ಪರ್ಯಗಾತ್ ಪರಿ ಸಮನ್ತಾತ್ ಅಗಾತ್ ಗತವಾನ್ । ಆಕಾಶವದ್ ವ್ಯಾಪೀತ್ಯರ್ಥಃ । ಶುಕ್ರಂ ಶುಭ್ರಮ್, ಜ್ಯೋತಿಷ್ಮತ್ । ದೀಪ್ತಿಮಾನ್ ಇತ್ಯರ್ಥಃ । ಅಕಾಯಮ್ ಅಶರೀರಮ್ । ಲಿಙ್ಗ ಶರೀರವರ್ಜಿತ ಇತ್ಯರ್ಥಃ । ಅವ್ರಣಮ್ ಅಕ್ಷತಮ್ । ಅಸ್ನಾವಿರಮ್ ಸ್ನಾವಾಃ ಸಿರಾಃ ಯಸ್ಮಿನ್ ನ ವಿದ್ಯನ್ತ ಇತ್ಯಸ್ನಾವಿರಮ್ । ಅವ್ರಣಮ್ ಅಸ್ನಾವಿರಮ್ - ಇತ್ಯೇತಾಭ್ಯಾಂ ಸ್ಥೂಲಶರೀರಪ್ರತಿಷೇಧಃ ಶುದ್ಧಂ ನಿರ್ಮಲಮ್, ಅವಿದ್ಯಾಮಲರಹಿತಮ್-ಇತಿ ಕಾರಣಶರೀರಪ್ರತಿಷೇಧಃ । ಅಪಾಪವಿದ್ಧಂ ಧರ್ಮಾಧರ್ಮಾದಿಪಾಪವರ್ಜಿತಮ್ । 'ಶುಕ್ರಮ್' ಇತ್ಯಾದೀನಿ ವಚಾಂಸಿ ಪುಲ್ಲಿಙ್ಗತ್ವೇನ ಪರಿಣೇಯಾನಿ । 'ಸ ಪರ್ಯಗಾತ್' ಇತ್ಯುಪಕ್ರಮ್ಯ 'ಕವಿರ್ಮನೀಷೀ' ಇತ್ಯಾದಿನಾ ಪುಲ್ಲಿಙ್ಗತ್ವೇನೋಪಸಂಹಾರಾತ್ । ಕವಿಃ ಕ್ರಾನ್ತದರ್ಶೀ ; ಸರ್ವದೃಕ್ । "ನಾನ್ಯೋಽತೋಽಸ್ತಿ ದ್ರಷ್ಟಾ" (ಬೃ.3-7-23) ಇತ್ಯಾದಿಶ್ರುತೇಃ । ಮನೀಷೀ ಮನಸ ಈಶಿತಾ ; ಸರ್ವಜ್ಞ ಈಶ್ವರ ಇತ್ಯರ್ಥಃ । ಪರಿಭೂಃ ಸರ್ವೇಷಾಂ ಪರಿ ಉಪರಿ ಭವತೀತಿ ಪರಿಭೂಃ । ಸ್ವಯಮ್ಭೂಃ ಸ್ವಯಮೇವ ಭವತೀತಿ । ಯೇಷಾಮ್ ಉಪರಿ ಭವತಿ, ಯಶ್ಚೋಪರಿ ಭವತಿ ಸ ಸರ್ವಃ ಸ್ವಯಮೇವ ಭವತೀತಿ ಸ್ವಯಮ್ಭೂಃ । ಸ ನಿತ್ಯಮುಕ್ತ ಈಶ್ವರೋ ಯಾಥಾತಥ್ಯತಃ ಸರ್ವಜ್ಞತ್ವಾತ್ ಯಥಾತಥಾಬಾವೋ ಯಾಥಾತಥ್ಯಮ್ । ತಸ್ಮಾತ್ ಯಥಾಭೂತಕರ್ಮಫಲಸಾಧನತಃ । ಅರ್ಥಾನ್ ಕರ್ತವ್ಯಪದಾರ್ಥಾನ್ ವ್ಯದಧಾತ್ ವಿಹಿತವಾನ್, ಯಥಾನುರೂಪಂ ವ್ಯಭಜತ್ ಇತ್ಯರ್ಥಃ । ಶಾಶ್ವತೀಭ್ಯಃ ನಿತ್ಯಾಭ್ಯಃ ಸಮಾಭ್ಯಃ ಸಂವತ್ಸರಾಖ್ಯೇಭ್ಯಃ ಪ್ರಜಾಪತಿಭ್ಯ ಇತ್ಯರ್ಥಃ ॥

(ಭಾಷ್ಯಾರ್ಥ)

ಅವನು ಎಂದರೆ ಹಿಂದೆ ಹೇಳಿರುವ ಆತ್ಮನು ಹಬ್ಬಿಕೊಂಡಿರುವನು ; (ಪರ್ಯಗಾತ್ ಎಂಬ ಮೂಲದಲ್ಲಿ) ಪರಿ ಎಂದರೆ ಎಲ್ಲಾ ಕಡೆಯಲ್ಲಿಯೂ ಅಗಾತ್ ಎಂದರೆ ಹೋಗಿರುವನು. ಆಕಾಶದಂತೆ (ಎಲ್ಲವನ್ನೂ) ವ್ಯಾಪಿಸಿಕೊಂಡಿರುವವನು. ಪ್ರಕಾಶವುಳ್ಳವನು[1], ಹೊಳಪುಳ್ಳವನು ಎಂದರ್ಥ. ಕಾಯವಿಲ್ಲದವನು ಎಂದರೆ ಶರೀರವಿಲ್ಲದವನು ; **ಲಿಂಗಶರೀರವಿಲ್ಲದವನು**[2] ಎಂದರ್ಥ. ವ್ರಣವಿಲ್ಲದವನು ಎಂದರೆ ಗಾಯವಿಲ್ಲದವನು. ಅಸ್ನಾವಿರಮ್ (ಎಂಬಲ್ಲಿ) ಸ್ನಾವಗಳೆಂದರೆ ನರಗಳು; ಅವಿಲ್ಲದವನು ಅಸ್ನಾವಿರನು. 'ವ್ರಣವಿಲ್ಲದವನು', 'ನರಗಳಿಲ್ಲದವನು' ಎಂಬ ಈ ಎರಡು (ವಿಶೇಷಣ) ಗಳಿಂದ **ಸ್ಥೂಲಶರೀರವು**[3] ಇಲ್ಲವೆಂದಿದೆ. ಶುದ್ಧನಾಗಿರುವವನು, **ಅವಿದ್ಯೆ**ಯೆಂಬ ಕಶ್ಮಲವಿಲ್ಲದವನು ; ಇದರಿಂದ **ಕಾರಣಶರೀರವು**[4] ಇಲ್ಲವೆಂದಿವೆ. ಪಾಪದ ಹೊಡೆತವಿಲ್ಲದವನು ಎಂದರೆ ಧರ್ಮ, ಅಧರ್ಮ - ಮುಂತಾದ ಪಾಪಗಳಿಲ್ಲದವನು. (ಮಂತ್ರದಲ್ಲಿರುವ) 'ಶುಕ್ರಮ್' ಮುಂತಾದ (ನಪುಂಸಕಲಿಂಗದ) ಮಾತುಗಳನ್ನು ಪುಲ್ಲಿಂಗಕ್ಕೆ ತಿರುಗಿಸಿಕೊಳ್ಳಬೇಕು. ಏಕೆಂದರೆ, 'ಅವನು ಹಬ್ಬಿಕೊಂಡಿರುವನು' ಎಂದು (ಪುಲ್ಲಿಂಗದಲ್ಲಿ) **ಉಪಕ್ರಮ** ಮಾಡಿ 'ಕವಿಯು', 'ಮನೀಷಿಯು' - ಎಂದು ಮುಂತಾಗಿ ಪುಲ್ಲಿಂಗದಲ್ಲಿಯೇ **ಉಪಸಂಹಾರ**[5] ಮಾಡಿರುತ್ತದೆ. ಕವಿಯು ಎಂದರೆ ಆಚೆ ಇರುವದನ್ನು ನೋಡಬಲ್ಲವನು, ಎಲ್ಲವನ್ನೂ[6] ನೋಡಬಲ್ಲವನು ; ''ಇವನಿಗಿಂತ ಬೇರೊಬ್ಬ ನೋಡುವಾತನಿಲ್ಲ'' (ಬೃ. 3-7-23) ಎಂದು ಮುಂತಾಗಿರುವ ಶ್ರುತಿ ಇದಕ್ಕೆ ಪ್ರಮಾಣವು.

---

1. ಚೈತನ್ಯಸ್ವರೂಪನು, ಮತ್ತೊಂದರ ಹಂಗಿನಿಂದ ತೋರದೆ ತಾನೇ ತೋರಿಕೊಳ್ಳುವವನು.

2. ಲಿಂಗಶರೀರವೆಂದರೆ ಮನಸ್ಸು, ಪ್ರಾಣ ಮುಂತಾದ ನಮ್ಮ ಒಳಗಿನ ಭಾಗವು. ಲಿಂಗವೆಂದರೆ ಗುರುತು. ಲಿಂಗಶರೀರವು ಆತ್ಮನನ್ನು ಅರಿಯುವದಕ್ಕೆ ಸಾಮಾನ್ಯಜನರಿಗೆ ಗುರುತಾಗಿರುವದು.

3. ಸ್ಥೂಲಶರೀರವೆಂದರೆ ರಕ್ತಮಾಂಸಾದಿಗಳಿಂದ ಕೂಡಿರುವ ಪ್ರಸಿದ್ಧವಾದ ದೇಹವು. ಲಿಂಗಶರೀರದಂತೆ ಇದು ಅತೀಂದ್ರಿಯವಲ್ಲ.

4. ಶರೀರವೆಂದರೆ ನಾಶವಾಗತಕ್ಕದ್ದು. ಆತ್ಮಜ್ಞಾನದಿಂದ ನಾಶವಾಗುವದರಿಂದಲೂ ನಮಗೆ ಶರೀರಾದಿಗಳಿವೆಯೆಂಬ ಅರಿವಿಗೆ ಕಾರಣವಾಗಿರುವದರಿಂದಲೂ ಅವಿದ್ಯೆಯನ್ನು ಕಾರಣಶರೀರವೆಂದಿದೆ ಎಂದು - ಅಭಿಪ್ರಾಯವನ್ನು ಕಲ್ಪಿಸಿಕೊಳ್ಳಬೇಕು. 'ಕಾರಣಶರೀರ' ವೆಂಬ ಮಾತು ಪ್ರಸ್ಥಾನತ್ರಯಭಾಷ್ಯದಲ್ಲಿ ಮತ್ತೆಲ್ಲಿಯೂ ಇರುವಂತಿಲ್ಲ ; ಇದೇಕೆಂಬುದನ್ನು ಬಲ್ಲವರು ವಿಚಾರಮಾಡಬೇಕು.

5. ಉಪಕ್ರಮ (ಮೊದಲು), ಉಪಸಂಹಾರ (ಕೊನೆ) - ಇವುಗಳಲ್ಲಿ ಒಂದೇ ಬಗೆಯಾಗಿ ಪುಲ್ಲಿಂಗವನ್ನು ಹೇಳಿರುವುದರಿಂದ ಪುಲ್ಲಿಂಗವೇ ವಿವಕ್ಷಿತವೆಂದು ಏರ್ಪಡುತ್ತದೆ.

6. ಇಂದ್ರಿಯಗಳನ್ನು ಮೀರಿರುವ ಭೂತಭವಿಷ್ಯತ್ಕಾಲಗಳಲ್ಲಿರುವದನ್ನು ಕೂಡ ಎಂದರ್ಥ. ಏಕೆಂದರೆ ಕಾಲವೂ ದೃಶ್ಯವಾಗಿರುತ್ತದೆ.

'ಮನೀಷೀ' ಎಂದರೆ ಮನಸ್ಸನ್ನು ಆಳುವವನು; **ಸರ್ವಜ್ಞನಾದ**[1] ಈಶ್ವರನೆಂದರ್ಥ. (ಮಂತ್ರದಲ್ಲಿರುವ) 'ಪರಿಭೂಃ' ಎಂಬಲ್ಲಿ ಪರಿ (ಎಂದರೆ) ಎಲ್ಲರ ಮೇಲೂ (ಭೂಃ) ಇರುವವನು (ಎಂದರ್ಥ). 'ಸ್ವಯಂಭು' ಎಂದರೆ ತಾನೇ ಆಗಿರುವವನು; ಯಾವವುಗಳ[2] ಮೇಲಿರುವನೋ, ಯಾವನು ಮೇಲೆ ಇರುವನೋ ಅದೆಲ್ಲವೂ ತಾನೇ ಆಗಿರುವದರಿಂದ 'ಸ್ವಯಂಭು'. ಆ ನಿತ್ಯಮುಕ್ತನಾಗಿರುವ[3] (ಈಶ್ವರನು) ಎಲ್ಲವನ್ನೂ ಬಲ್ಲವನಾಗಿರುವದರಿಂದ[4] ಯಾಥಾತಥ್ಯವಾಗಿ - ಹೇಗೆ ಇರಬೇಕೋ ಹಾಗಿರುವದೇ[5]. ಯಾಥಾತಥ್ಯವು. ಅದರಿಂದ ; ಎಂದರೆ ಕರ್ಮಫಲಗಳನ್ನು ಸತ್ಯವಾಗಿ ಸಾಧಿಸುವಂತೆ (ಎಂದರ್ಥ) - ಅರ್ಥಗಳನ್ನು, ಮಾಡಬೇಕಾದ ಕೆಲಸಗಳೆಂಬ ಪದಾರ್ಥಗಳನ್ನು, 'ವ್ಯದಧಾತ್' ಎಂದರೆ ವಿಧಿಸಿರುತ್ತಾನೆ, ಅವರವರಿಗೆ ತಕ್ಕಂತೆ ಹಂಚಿಕೊಟ್ಟಿರುತ್ತಾನೆ. ಶಾಶ್ವತವಾಗಿರುವ ಎಂದರೆ ಎಂದೆಂದಿಗೂ ಇರುವ[6] ವರ್ಷಗಳಿಗೆ ಎಂದರೆ **ಸಂವತ್ಸರರೆಂಬ**[7] ಹೆಸರಿನ ಪ್ರಜಾಪತಿಗಳಿಗೆ (ಹಂಚಿಕೊಟ್ಟಿರುತ್ತಾನೆ) ಎಂದರ್ಥ. ॥೮॥

## ಜ್ಞಾನನಿಷ್ಠೆ, ಕರ್ಮನಿಷ್ಠೆ - ಇವುಗಳ ವಿವೇಕ

(ಭಾಷ್ಯ)

೨೦. ಅತ್ರಾದ್ಯೇನ ಮನ್ತ್ರೇಣ ಸರ್ವೈಷಣಾಪರಿತ್ಯಾಗೇನ ಜ್ಞಾನನಿಷ್ಠೋಕ್ತಾ ಪ್ರಥಮೋ ವೇದಾರ್ಥಃ - ''ಈಶಾವಾಸ್ಯಮಿದಂ ಸರ್ವಮ್............ ಮಾ ಗೃಧಃ ಕಸ್ಯ

---

1. ಮಿಕ್ಕದ್ದೆಲ್ಲವೂ ಮನಸ್ಸಿಗೆ ಅಧೀನವಾಗಿರುತ್ತದೆಯಾದರೂ ಮನಸ್ಸೂ ಆತ್ಮನಿಗೆ ಅಧೀನವಾಗಿರುತ್ತದೆ. ಮನಸ್ಸನ್ನೂ ಆತ್ಮನೇ ತನ್ನ ಚೈತನ್ಯರೂಪನಿಂದ ಬೆಳಗಬೇಕಾಗುತ್ತದೆ.

2. ಹಗ್ಗವು ಹಾವಿಗಿಂತ ಬೇರೆಯಾದರೂ ಹಾವು ಹಗ್ಗಕ್ಕಿಂತ ಬೇರೆಯಾಗಿರಲಾರದು. ಇದರಿಂದ ಅನಾತ್ಮಕ್ಕಿಂತ ಆತ್ಮನು ಬೇರೆಯಾಗಿ ಅದಕ್ಕಿಂತ ಮೇಲು (ಉತ್ಕೃಷ್ಟ) ಎನಿಸಿ ಕೊಂಡಿರುತ್ತಾನಾದರೂ ಅನಾತ್ಮವು ಆತ್ಮನಿಗಿಂತ ಬೇರೆಯಿಲ್ಲ. ಆತ್ಮನೇ ಆ ರೂಪದಿಂದ ಕಲ್ಪಿತನಾಗಿರುತ್ತಾನೆ.

3. ಸಾಧನವನ್ನು ಮಾಡಿ ಮುಕ್ತನಾಗಬೇಕಾಗಿಲ್ಲದ, ಮುಕ್ತಿಸ್ವರೂಪವೇ ಆಗಿರುವ.

4. ಇಂಥ ಕರ್ಮಕ್ಕೆ ಇಂಥ ಫಲವೆಂಬುದನ್ನೂ ಇಂಥವನು ಇಂಥ ಕರ್ಮವನ್ನು ಮಾಡಿರುವನೆಂಬುದನ್ನೂ ಬಲ್ಲವನು ಇದ್ದ ಹೊರತು ಕರ್ಮಗಳಿಗೆ ನಿಯತವಾದ ಫಲಗಳಾಗಲಾರವು ಎಂದು ಭಾವ.

5. ಕರ್ಮಗಳು ಸತ್ಯವಾಗಿರುವವು ಎಂದರೆ ಅವುಗಳ ಫಲವು ಅವಶ್ಯವಾಗಿ ಆಗಿಯೇ ತೀರುತ್ತದೆ ಎಂದರ್ಥ. ಮುಂ. 1-2-1 ಭಾಷ್ಯವನ್ನು ನೋಡಿರಿ.

6. ಪ್ರಜಾಪತಿಗಳು ಆಯಾ ಕಲ್ಪವಾಗುವವರೆಗೂ ಇರುವರು; ನಡುವೆ ಅವರಿಗೆ ನಾಶವಿಲ್ಲ.

7. ಪ್ರಜಾಪತಿಗೆ ಸಂವತ್ಸರನೆಂಬ ಹೆಸರುಂಟಾಗಿರುವದಕ್ಕೆ ಕಾರಣವನ್ನು ತಿಳಿಯುವದಕ್ಕೆ ಪ್ರ. 1-9, ಬೃ. 1-5-14 ಇವುಗಳನ್ನು ನೋಡಬೇಕು.

ಸ್ವಿದ್ಧನಮ್'' (೧) ಇತಿ । ಅಜ್ಞಾನಾಂ ಜಿಜೀವಿಷೂಣಾಂ ಜ್ಞಾನನಿಷ್ಠಾಽಸಮ್ಭವೇ ''ಕುರ್ವನ್ನೇವೇಹ ಕರ್ಮಾಣಿ ಜಿಜೀವಿಷೇತ್'' (೨) ಇತಿ ಕರ್ಮನಿಷ್ಠೋಕ್ತಾ ದ್ವಿತೀಯೋ ವೇದಾರ್ಥಃ । ಅನಯೋಶ್ಚ ನಿಷ್ಠಯೋರ್ವಿಭಾಗೋ ಮನ್ತ್ರದ್ವಯ ಪ್ರದರ್ಶಿತಯೋರ್ಬೃಹದಾರಣ್ಯಕೇಽಪಿ ಪ್ರದರ್ಶಿತಃ । 'ಸೋಽಕಾಮಯತ ಜಾಯಾ ಮೇ ಸ್ಯಾತ್' (ಬೃ. 1-4-17) ಇತ್ಯಾದಿನಾ ಅಜ್ಞಸ್ಯ ಕಾಮಿನಃ ಕರ್ಮಾಣೀತಿ । ''ಮನ ಏವಾಸ್ಯಾತ್ಮಾ ವಾಗ್ಜಾಯಾ'' (ಬೃ. 1-4-17) ಇತ್ಯಾದಿವಚನಾತ್ ಅಜ್ಞತ್ವಂ ಕಾಮಿತ್ವಂ ಚ ಕರ್ಮನಿಷ್ಠಸ್ಯ ನಿಶ್ಚಿತಮವಗಮ್ಯತೇ । ತಥಾ ಚ ತತ್ಫಲಂ ಸಪ್ತಾನ್ನಸರ್ಗಃ (ಬೃ. 1-5-7), ತೇಷ್ವಾತ್ಮಭಾವೇನಾತ್ಮಸ್ವರೂಪಾವಸ್ಥಾನಮ್ । ಜಾಯಾದ್ಯೇಷಣಾತ್ರಯಸಂನ್ಯಾಸೇನ ಚಾತ್ಮವಿದಾಂ ಕರ್ಮನಿಷ್ಠಾಪ್ರಾತಿಕೂಲ್ಯೇನ ಆತ್ಮಸ್ವರೂಪನಿಷ್ಠೈವ ದರ್ಶಿತಾ ''ಕಿಂ ಪ್ರಜಯಾ ಕರಿಷ್ಯಾಮೋ ಯೇಷಾಂ ನೋಽಯಮಾತ್ಮಾಽಯಂ ಲೋಕಃ'' (ಬೃ. 4-4-22) ಇತ್ಯಾದಿನಾ ॥

ಯೇ ತು ಜ್ಞಾನನಿಷ್ಠಾಃ ಸಂನ್ಯಾಸಿನಃ ತೇಭ್ಯಃ ''ಅಸುರ್ಯಾ ನಾಮ ತೇ'' (೩) ಇತ್ಯಾದಿನಾ ಅವಿದ್ವನ್ನಿನ್ದಾದ್ವಾರೇಣ ಆತ್ಮನೋ ಯಾಥಾತ್ಮ್ಯಮ್ ''ಸಪರ್ಯಗಾತ್'' (೮) ಇತ್ಯೇತದನ್ತೈರ್ಮನ್ತ್ರೈರುಪದಿಷ್ಟಮ್; ತೇ ಹ್ಯತ್ರಾಧಿಕೃತಾ ನ ಕಾಮಿನ ಇತಿ । ತಥಾ ಚ **ಶ್ವೇತಾಶ್ವತರಾಣಾಂ** ಮನ್ತ್ರೋಪನಿಷದಿ ''ಅತ್ಯಾಶ್ರಮಿಭ್ಯಃ ಪರಮಂ ಪವಿತ್ರಂ ಪ್ರೋವಾಚ ಸಮ್ಯಗೃಷಿಸಙ್ಘಜುಷ್ಟಮ್'' (ಶ್ವೇ. 6-21) ಇತ್ಯಾದಿ ವಿಭಜ್ಯೋಕ್ತಮ್ । ಯೇ ತು ಕಾಮಿನಃ ಕರ್ಮನಿಷ್ಠಾಃ ಕರ್ಮ ಕುರ್ವನ್ತ ಏವ ಜಿಜೀವಿಷವಃ, ತೇಭ್ಯ ಇದಮುಚ್ಯತೇ ''ಅನ್ಧಂ ತಮಃ'' (೯) ಇತ್ಯಾದಿ ॥

## (ಭಾಷ್ಯಾರ್ಥ)

ಇಲ್ಲಿ ''ಈಶಾವಾಸ್ಯಮಿದಂ ಸರ್ವಮ್.......ಮಾ ಗೃಧಃ ಕಸ್ಯಸ್ವಿದ್ಧನಮ್'' (ಇದೆಲ್ಲವೂ ಈಶನಿಂದ ಮುಚ್ಚಲ್ಪಡತಕ್ಕದ್ದು.......ಯಾರ ಧನವನ್ನೂ ಬಯಸಬೇಡ) ಎಂಬ ಮೊದಲನೆಯ ಮಂತ್ರದಲ್ಲಿ ಎಲ್ಲಾ ಬಯಕೆಗಳನ್ನೂ ಬಿಟ್ಟು ಜ್ಞಾನನಿಷ್ಠನಾಗಿರಬೇಕೆಂದು ಹೇಳಿರುವದು **ಮೊದಲನೆಯ ವೇದಾರ್ಥವು.** ಬದುಕಿಕೊಂಡಿರಬೇಕೆಂದು ಬಯಸುವ ಅಜ್ಞರಿಗೆ ಈ ಜ್ಞಾನನಿಷ್ಠೆಯು ಸಂಭವಿಸುವದಿಲ್ಲವಾಗಿ ''ಕುರ್ವನ್ನೇವೇಹ ಕರ್ಮಾಣಿ ಜಿಜೀವಿಷೇತ್'' (ಇಲ್ಲಿ ಕರ್ಮಗಳನ್ನೇ ಮಾಡುತ್ತಾ ಬದುಕಲೆಳಸಬೇಕು, ಎಂಬ ಎರಡನೆಯ ಮಂತ್ರದಲ್ಲಿ) ಹೇಳಿರುವ ಕರ್ಮನಿಷ್ಠೆಯು **ಎರಡನೆಯ ವೇದಾರ್ಥವು.** ಈ ಎರಡು ನಿಷ್ಠೆಗಳೂ ಬೇರೆಬೇರೆಯೆಂದು ಎರಡು ಮಂತ್ರಗಳಲ್ಲಿ ಹೇಳಿರುವಂತೆಯೇ

**ಬೃಹದಾರಣ್ಯಕ ದಲ್ಲಿಯೂ**[1] ''ಅವನು ನನಗೆ ಹೆಂಡತಿಯಾಗಲಿ ಎಂದು ಬಯಸಿದನು'' (ಬೃ 1-4-17) ಎಂದು ಕರ್ಮಗಳು ಅಜ್ಞನಾದ ಕಾಮಿಗೆ ಎಂದು ತಿಳಿಸಿರುತ್ತದೆ. ''ಇವನಿಗೆ ಮನಸ್ಸೇ ಆತ್ಮನು, ವಾಕ್ಕೇ ಹೆಂಡತಿಯು''[2] (ಬೃ 1-4-17) ಎಂದು ಮುಂತಾಗಿ ಹೇಳಿರುವದರಿಂದ ಕರ್ಮನಿಷ್ಠನಾದವನು ಅಜ್ಞನೂ ಕಾಮಿಯೂ ಆಗಿರುವನೆಂದು ನಿಶ್ಚಯವಾಗಿ ಗೊತ್ತಾಗುತ್ತದೆ. ಆದ್ದರಿಂದಲೇ ಅದಕ್ಕೆ ಫಲವಾಗಿ **ಸಪ್ತಾನ್ನಸೃಷ್ಟಿ**[3] ಯಾಗುವದು; ಎಂದರೆ ಅವುಗಳೇ ತಾನೆಂದು ತನ್ನ ಸ್ವರೂಪವನ್ನಿಟ್ಟುಕೊಂಡಿರುವದು.[4] ಆತ್ಮಜ್ಞಾನಿಗಳಾದವರಿಗೆ **ಹೆಂಡತಿಯೇ ಮೊದಲಾದ** ಏಷಣಾತ್ರಯ[5]ವನ್ನು ಬಿಟ್ಟು ಕರ್ಮನಿಷ್ಠೆಗೆ ಪ್ರತಿಕೂಲವಾದ ಆತ್ಮಸ್ವರೂಪನಿಷ್ಠೆಯ(ಲ್ಲಿರಬೇಕೆಂಬು)ದನ್ನೇ ''ಯಾವ ನಮಗೆ ಈತನೇ ಆತ್ಮನೋ, ಈತನೇ ಲೋಕವೋ, ಆ ನಾವು ಪ್ರಜೆಯಿಂದೇನು ಮಾಡೋಣ[6] ?'' (ಬೃ 4-4-22) ಎಂದು ಮುಂತಾದ (ವಾಕ್ಯದಿಂದ) ಹೇಳಿರುತ್ತದೆ.

ಯಾರಾದರೆ ಜ್ಞಾನನಿಷ್ಠರಾದ ಸಂನ್ಯಾಸಿಗಳೋ ಅವರಿಗೆ ''ಅಸುರ್ಯಾ ನಾಮ ತೇ'' (೩) (ಅಸುರ್ಯವೆಂಬ ಆ......) ಎಂದು ಮುಂತಾಗಿ ಅಜ್ಞಾನಿಗಳನ್ನು ನಿಂದಿಸುವವರ ಮೂಲಕ ''ಸ ಪರ್ಯಗಾತ್'' (೮) (ಅವನು ಹಬ್ಬಿಕೊಂಡಿರುವನು)

---

1. ಇದೇ ವೇದಕ್ಕೆ ಸೇರಿದ ಬ್ರಾಹ್ಮಣಭಾಗವಾದ ಬೃಹದಾರಣ್ಯಕದಲ್ಲಿ ಇದೇ ಅಭಿಪ್ರಾಯವನ್ನು ವಿಸ್ತರಿಸಿರುವದರಿಂದ ಜ್ಞಾನಕರ್ಮಗಳು ಬೇರೆಬೇರೆಯ ಅಧಿಕಾರಿಗಳಿಗೆ ಹೇಳಿದ್ದೆಂದು ನಿರ್ಣಯವಾಗುತ್ತದೆ. ಏಕೆಂದರೆ ವೇದವಲ್ಲೆಲ್ಲ ಮಂತ್ರದಲ್ಲಿ ಹೇಳಿರುವದನ್ನೇ ಬ್ರಾಹ್ಮಣದಲ್ಲಿ ವಿವರಿಸಿರುತ್ತದೆ.

2. ಹೊರಗಿನ ವಿಷಯಗಳಾದ ಹೆಂಡತಿಯೇ ಮುಂತಾದವಿಲ್ಲದ ಅಪೂರ್ಣತೆಯನ್ನು ತೊಲಗಿಸುವದಕ್ಕಾಗಿ 'ಮನಸ್ಸೇ ಆತ್ಮನು, ವಾಕ್ಕೇ ಹೆಂಡತಿಯು, ಪ್ರಾಣವೇ ಪ್ರಜಾಸಂತಾನವು' ಎಂದು ಮುಂತಾಗಿ ಅಧ್ಯಾತ್ಮವಾಗಿರುವ ಮನಆದಿಗಳನ್ನೇ ಕರ್ಮಕ್ಕೆ ಬೇಕಾಗಿರುವ ಉಪಕರಣಗಳನ್ನಾಗಿ ಭಾವನೆಯಿಂದ ಸಂಪತ್ತಿಮಾಡಿಕೊಂಡು ಪೂರ್ಣನಾಗಬೇಕು - ಎಂದು ಈ ವಚನದಲ್ಲಿ ಹೇಳಿದೆ. ಕರ್ಮಕ್ಕೆ ಹೆಂಡತಿಯೇ ಮುಂತಾದವುಗಳಿಲ್ಲದೆ ಆಗುವದೇ ಇಲ್ಲವೆಂಬುದು ಇದರಿಂದ ಸ್ಪಷ್ಟ.

3. ಎಲ್ಲರೂ ತಿನ್ನುವ ಅನ್ನವೊಂದು, ದೇವತೆಗಳಿಗೆ ಕೊಡುವ ಹುತಪ್ರಹುತ ಅಥವಾ ದರ್ಶಪೂರ್ಣಮಾಸಗಳು ಎರಡು ; ಮನಸ್ಸು ವಾಕ್ಕು, ಪ್ರಾಣ - ಎಂಬ ಭೋಗಸ್ಥಾನಗಳು ಮೂರು; ಹಾಲು ಒಂದು - ಹೀಗೆ ಏಳು ಅನ್ನಗಳು. ಬೃ. 1-5-2ರಲ್ಲಿ ಇದನ್ನು ಹೇಳಿದೆ.

4. ಇಲ್ಲಿ 'ಆತ್ಮಸ್ವರೂಪಾವಸ್ಥಾನಮ್' ಎಂಬುದು 'ಅನಾತ್ಮಸ್ವರೂಪಾವಸ್ಥಾನಮ್' ಎಂದಿದ್ದರೆ 'ಅನಾತ್ಮಸ್ವರೂಪದಲ್ಲಿದ್ದು ಕೊಂಡಿರುವದು' ಎಂದು ಸ್ಪಷ್ಟವಾದ ಅರ್ಥವಾಗುತ್ತಿತ್ತು.

5. 'ಪುತ್ರಾದ್ಯೇಷಣಾತ್ರಯ' ಎಂದರ್ಥ.

6. ಮಗನಿಂದ ಹೊರಗಿನ ಲೋಕವನ್ನು ಪಡೆಯಬಹುದೇ ಹೊರತು ಆತ್ಮಲೋಕವನ್ನು ಪಡೆಯವದಾಗಲಾರದು ಎಂದು ಭಾವ.

ಎಂಬವರೆಗಿನ ಮಂತ್ರಗಳಲ್ಲಿ ಆತ್ಮನ ನಿಜವಾದ ಸ್ವರೂಪವನ್ನು ಹೇಳಿದ್ದಾಯಿತು; ಏಕೆಂದರೆ ಇದಕ್ಕೆ ಅವರೇ ಅಧಿಕಾರಿಗಳೇ ಹೊರತು ಕಾಮಿಗಳಲ್ಲ. ಆದ್ದರಿಂದಲೇ **ಶ್ವೇತಾಶ್ವತರಶಾಖೆಯವರ ಮಂತ್ರೋಪನಿಷತ್ತಿನಲ್ಲಿ** "ಋಷಿಸಮೂಹವು ಚೆನ್ನಾಗಿ ಸೇವಿಸುತ್ತಿರುವ (ಈ) ಪರಮ ಪವಿತ್ರವಾದ (ಜ್ಞಾನವನ್ನು) ಪೂಜ್ಯವಾದ ಆಶ್ರಮದಲ್ಲಿರುವವರಿಗೆ ಹೇಳಿದನು" (ಶ್ವೇ 6-21) ಎಂದು ಮುಂತಾಗಿ ವಿಂಗಡಿಸಿ[1] ಹೇಳಿರುತ್ತದೆ. ಇನ್ನು ಯಾರು ಕಾಮಿಗಳಾಗಿ ಕರ್ಮನಿಷ್ಠರಾಗಿರುವರೋ, ಕರ್ಮವನ್ನು ಮಾಡುತ್ತಲೇ ಬಾಳಬೇಕೆಂದು ಬಯಸುತ್ತಿರುವರೋ ಅವರಿಗೆ "ಅನ್ಧಂ ತಮಃ" ಎಂದು ಮುಂತಾಗಿರುವ ಈ (ಮುಂದಿನ ಕರ್ಮಜ್ಞಾನಸಮುಚ್ಚಯ)ವನ್ನು ಹೇಳಿರುತ್ತದೆ.

(ಭಾಷ್ಯ)

೨೧. ಕಥಂ ಪುನರೇವಮವಗಮ್ಯತೇ, ನ ತು ಸರ್ವೇಷಾಮಿತಿ ? ಉಚ್ಯತೇ । ಅಕಾಮಿನಃ ಸಾಧ್ಯಸಾಧನಭೇದೋಪಮರ್ದೇನ "ಯಸ್ಮಿನ್ ಸರ್ವಾಣಿ ಭೂತಾನಿ ಆತ್ಮೈವಾಭೂದ್ವಿಜಾನತಃ। ತತ್ರ ಕೋ ಮೋಹಃ ಕಃ ಶೋಕ ಏಕತ್ವಮನುಪಶ್ಯತಃ" ಇತಿ (೮) ಯದಾತ್ಮೈಕತ್ವವಿಜ್ಞಾನಮ್ (ಉಕ್ತಮ್) ತನ್ನ ಕೇನಚಿತ್ ಕರ್ಮಣಾ ಜ್ಞಾನಾನ್ತರೇಣ ವಾ ಹ್ಯಮೂಢಃ ಸಮುಚ್ಚಿಚೀಷತಿ । ಇಹ ತು ಸಮುಚ್ಚಿಚೀಷಯಾ ಅವಿದ್ವದಾದಿನಿನ್ದಾ ಕ್ರಿಯತೇ । ತತ್ರ ಚ ಯಸ್ಯ ಯೇನ ಸಮುಚ್ಚಯಃ ಸಮ್ಭವತಿ ನ್ಯಾಯತಃ ಶಾಸ್ತ್ರತೋ ವಾ ತದಿಹೋಚ್ಯತೇ । ತದ್ದೈವಂ ವಿತ್ತಂ ದೇವತಾವಿಷಯಂ ಜ್ಞಾನಂ ಕರ್ಮಸಮ್ಬನ್ಧಿತ್ವೇನೋಪನ್ಯಸ್ತಮ್, ನ ಪರಮಾತ್ಮಜ್ಞಾನಮ್ । "ವಿದ್ಯಯಾ ದೇವಲೋಕಃ" (ಬೃ. 1-5-16) ಇತಿ ಪೃಥಕ್ಫಲಶ್ರವಣಾತ್ । ತಯೋರ್ಜ್ಞಾನಕರ್ಮಣೋರಿಹೈಕೈಕಾನುಷ್ಠಾನನಿನ್ದಾ ಸಮುಚ್ಚಿಚೀಷಯಾ ನ ನಿನ್ದಾಪರೈವ । ಏಕೈಕಸ್ಯ ಪೃಥಕ್ಫಲಶ್ರವಣಾತ್ "ವಿದ್ಯಯಾ ತದಾರೋಹನ್ತಿ" (ಶತ. 10-5-4-16), "ವಿದ್ಯಯಾ ದೇವಲೋಕಃ" (ಬೃ. 1-5-16) "ನ ತತ್ರ ದಕ್ಷಿಣಾ ಯನ್ತಿ" (ಶತ. 10-5-4-16), "ಕರ್ಮಣಾ ಪಿತೃಲೋಕಃ" (ಬೃ. 1-5-16) ಇತಿ । ನ ಹಿ ಶಾಸ್ತ್ರವಿಹಿತಂ ಕಿಞ್ಚಿದಕರ್ತವ್ಯತಾಮಿಯಾತ್ ॥

(ಭಾಷ್ಯಾರ್ಥ)

(ಪ್ರಶ್ನೆ) :- (ಇದು) ಹೀಗೆಯೇ, ಎಲ್ಲರಿಗೂ (ಹೇಳಿದ್ದಲ್ಲ) ಎಂದು ಹೇಗ ಗೊತ್ತು ?[2]

(ಉತ್ತರ) :- ಹೇಳುತ್ತೇವೆ (ಕೇಳಿ). "ಎಲ್ಲಿ ಎಲ್ಲಾ ಭೂತಗಳೂ ತಿಳಿದವನಿಗೆ ಆತ್ಮನೇ ಆಯಿತೋ ಅಲ್ಲಿ (ಎಲ್ಲವೂ) ಒಂದೆಂಬುದನ್ನು ಕಂಡುಕೊಂಡವನಿಗೆ ಯಾವ

1. ಕರ್ಮಾಧಿಕಾರಿಗಳಿಂದ ಬೇರ್ಪಡಿಸಿ ಸಂನ್ಯಾಸಿಗಳಿಗೇ ಜ್ಞಾನವನ್ನು ಹೇಳಿರುತ್ತದೆ.

2. ಕರ್ಮಿಗಳಂತೆ ಜ್ಞಾನಿಗಳಿಗೂ ಹೇಳಿದ್ದಲ್ಲವೆಂದು ಹೇಗೆ ಗೊತ್ತು ? ಎಂದು ಪ್ರಶ್ನೆ.

ಮೋಹವು ? ಯಾವ ಶೋಕವು ?'' (೭) ಎಂದು ಕಾಮಿಯಲ್ಲದವನಿಗೆ ಸಾಧ್ಯ, ಸಾಧನ - ಎಂಬ ಭೇದವನ್ನು ಅರೆದುಹಾಕಿ ಆತ್ಮನು ಒಬ್ಬನೇ ಎಂಬ ಯಾವ ಜ್ಞಾನವನ್ನು (ಹೇಳಿದೆಯೋ) ಅದನ್ನು ಯಾವ ಕರ್ಮದೊಡನೆಯಾಗಲಿ ಮತ್ತೊಂದು ಜ್ಞಾನದೊಡನೆಯಾಗಲಿ[1] ಕೂಡಿಸಿಕೊಂಡು (ಅನುಷ್ಠಾನಮಾಡ) ಬೇಕೆಂದು ಮೂಢನಲ್ಲದವನು (ಯಾವನೂ) ಬಯಸಲಾರನಷ್ಟೆ ? ಆದರೆ ಇಲ್ಲಿ (ಎರಡನ್ನೂ) ಕೂಡಿಸಿಕೊಂಡು (ಅನುಷ್ಠಾನ ಮಾಡಬೇಕೆಂಬ) ಅಭಿಪ್ರಾಯದಿಂದ ಅಜ್ಞಾನಿಯೇ ಮುಂತಾದವರನ್ನು ನಿಂದೆ ಮಾಡುತ್ತದೆ. ಹೀಗಿರುವದರಿಂದ ಯಾವದನ್ನು ಯಾವದರೊಡನೆ ಕೂಡಿಸಿ (ಅನುಷ್ಠಾನಮಾಡುವದು) ಯುಕ್ತಿಯಿಂದಾಗಲಿ ಶಾಸ್ತ್ರದಿಂದಾಗಲಿ ಹೊಂದುಗಡೆಯಾಗುವದೋ ಅದನ್ನು ಇಲ್ಲಿ ಹೇಳಿರುತ್ತದೆ (ಎನ್ನಬೇಕು). ಅದು (ಯಾವದೆಂದರೆ) ದೈವವಿತ್ತವೆನಿಸುವ[2] ದೇವತಾವಿಷಯವಾದ ಜ್ಞಾನವು; ಕರ್ಮಕ್ಕೆ ಸಂಬಂಧಪಟ್ಟಂತೆ (ಅದನ್ನೇ) ಹೇಳಿರುತ್ತದೆ (ಯೇ ಹೊರತು) ಪರಮಾತ್ಮಜ್ಞಾನವನ್ನಲ್ಲ. ಏಕೆಂದರೆ ''ವಿದ್ಯೆಯಿಂದ ದೇವಲೋಕವನ್ನು (ಗೆಲ್ಲಬೇಕು)'' (ಬೃ 1-5-16) ಎಂದು (ಅದಕ್ಕೆ) ಬೇರೆಯ[3] ಫಲವನ್ನು ಹೇಳಿರುತ್ತದೆ. ಆ ಜ್ಞಾನಕರ್ಮಗಳನ್ನು ಒಂದೊಂದನ್ನೇ ಅನುಷ್ಠಾನ ಮಾಡುವದನ್ನು ಇಲ್ಲಿ ನಿಂದಿಸಿರುವದು (ಎರಡನ್ನೂ) ಕೂಡಿಸಿ (ಅನುಷ್ಠಾನ ಮಾಡಬೇಕೆಂದು ತಿಳಿಸು)ವದಕ್ಕೇ[4] ಹೊರತು (ಅದಕ್ಕೆ) ಬರಿಯ ನಿಂದೆಯಲ್ಲಿಯೇ ತಾತ್ಪರ್ಯವಿರುವದಿಲ್ಲ; ಏಕೆಂದರೆ ''ವಿದ್ಯೆಯಿಂದ ಅದನ್ನು ಏರುವರು''(ಶತ- 10-5-4-16), ''ವಿದ್ಯೆಯಿಂದ ದೇವಲೋಕವನ್ನು (ಗೆಲ್ಲಬೇಕು)'' (ಬೃ 1-5-16), ''ಅಲ್ಲಿಗೆ ದಕ್ಷಿಣಮಾರ್ಗದವರು ಹೋಗುವದಿಲ್ಲ''[5], (ಶತ- 10-5-4-16) ''ಕರ್ಮದಿಂದ ಪಿತೃಲೋಕವನ್ನು (ಗೆಲ್ಲಬೇಕು)''(ಬೃ 1-5-16)

---

1. ಕರ್ಮವಾಗಲಿ, ಉಪಾಸನೆಯಾಗಲಿ ಒಂದೊಂದು ಫಲಕ್ಕೆ ಸಾಧನವು. ಆದರೆ ಆತ್ಮಜ್ಞಾನವು ಸಾಧ್ಯಸಾಧನಭೇದವನ್ನು ಸುಳ್ಳೆಂದು ತೋರಿಸಿಕೊಡುವದು. ಆದ್ದರಿಂದ ಜ್ಞಾನದೊಡನೆ ಕರ್ಮವನ್ನಾಗಲಿ ಉಪಾಸನೆಯನ್ನಾಗಲಿ ಸೇರಿಸುವ ಪ್ರಯತ್ನವು ಕತ್ತಲೆ ಬೆಳಕುಗಳೆರಡನ್ನೂ ಒತ್ತಟ್ಟಿಗೆ ಸೇರಿಸುವದಕ್ಕಿಚ್ಛಿಸುವಂಥ ಮೂಢರ ಯತ್ನವು.

2. ಗವಾದಿಗಳು ಕರ್ಮಕ್ಕೆ ಬೇಕಾಗಿರುವ ಮಾನುಷವಿತ್ತವು ; ಉಪಾಸನೆಯು ದೈವವಿತ್ತವು. ಬೃ 1-4-17 ನ್ನೂ ಅದರ ಭಾಷ್ಯವನ್ನೂ ನೋಡಿ.

3. ಜ್ಞಾನದ ಫಲವಾದ ಮೋಕ್ಷಕ್ಕಿಂತ ಬೇರೆಯಾದ.

4. ಕೂಡಿಸಿ ಅನುಷ್ಠಾನಮಾಡಬೇಕೆಂದು ಶ್ರುತಿಯಲ್ಲಿ ಹೇಳಿರುವದರಿಂದ ಅದೇ ಶ್ರುತಿಯ ಅಭಿಪ್ರಾಯ.

5. ಈ ವಚನವು ಪೂರ್ಣರೂಪದಲ್ಲಿ ಹೀಗಿದೆ : 'ವಿದ್ಯಯಾ ತದಾರೋಹನ್ತಿ ಯತ್ರ ಕಾಮಾಃ ಪರಾಗತಾಃ। ನ ತತ್ರ ದಕ್ಷಿಣಾ ಯನ್ತಿ ನಾವಿದ್ವಾಂಸಸ್ತಪಸ್ವಿನಃ॥' (ಎಲ್ಲಿ ಕಾಮಗಳು ತೊಲಗಿರುವವೋ ಆ ಸ್ಥಳವನ್ನು ವಿದ್ಯೆಯಿಂದ ಏರುವರು ; ಅಲ್ಲಿಗೆ ದಕ್ಷಿಣಮಾರ್ಗದವರು ಹೋಗುವದಿಲ್ಲ, ಅಜ್ಞಾನಿಗಳಾದ ತಪಸ್ವಿಗಳೂ ಹೋಗುವದಿಲ್ಲ.

ಎಂದು ಒಂದೊಂದಕ್ಕೂ ಬೇರೆ ಫಲವನ್ನು ಹೇಳಿರುತ್ತದೆ.[1] ಶಾಸ್ತ್ರದಲ್ಲಿ (ಯಾವದನ್ನು) ವಿಧಿಸಿರುತ್ತದೆಯೋ (ಅದು) ಯಾವದೂ ಮಾಡತಕ್ಕದ್ದಲ್ಲವೆಂದು (ಎಂದಿಗೂ) ಆಗಲಾರದು. ॥೮॥

## ಕರ್ಮೋಪಾಸನೆಗಳ ಸಮುಚ್ಚಯ

**ಅನ್ಧಂ ತಮಃ ಪ್ರವಿಶನ್ತಿ**
**ಯೇಽವಿದ್ಯಾಮುಪಾಸತೇ ।**
**ತತೋ ಭೂಯ ಇವ ತೇ**
**ತಮೋ ಯ ಉ ವಿದ್ಯಾಯಾಗ್ಂ ರತಾಃ ॥ ೯॥**

೯. ಯಾರು ಅವಿದ್ಯೆಯನ್ನು ಉಪಾಸನೆಮಾಡುತ್ತಾರೋ ಅವರು ಕುರುಡುಗತ್ತಲೆಯನ್ನು ಪ್ರವೇಶಿಸುವರು. ಮತ್ತು ಯಾರು ವಿದ್ಯೆಯಲ್ಲಿ ನಿರತ-ರಾಗಿರುವರೋ ಅವರು ಅದಕ್ಕಿಂತ ಹೆಚ್ಚಿನ ಕತ್ತಲೆಯನ್ನು ಪ್ರವೇಶಿಸುವರು.

(ಭಾಷ್ಯ)

೨೨. ತತ್ರ - ಅನ್ಧಂ ತಮಃ ಅದರ್ಶನಾತ್ಮಕಂ ತಮಃ ಪ್ರವಿಶನ್ತಿ । ಕೇ ? ಯೇ ಅವಿದ್ಯಾಮ್ - ವಿದ್ಯಾಯಾ ಅನ್ಯಾ ಅವಿದ್ಯಾ, ಕರ್ಮೇತ್ಯರ್ಥಃ; ಕರ್ಮಣೋ ವಿದ್ಯಾವಿರೋಧಿತ್ವಾತ್। ತಾಮ್ ಅವಿದ್ಯಾಮ್ - ಅಗ್ನಿಹೋತ್ರಾದಿಲಕ್ಷಣಾಮೇವ ಕೇವಲಾಮ್ ಉಪಾಸತೇ ತತ್ಪರಾಃ ಸನ್ತಃ ಅನುತಿಷ್ಠನ್ತೀತ್ಯಭಿಪ್ರಾಯಃ । ತತಃ ತಸ್ಮಾದನ್ಧಾ-ತ್ಮಕಾತ್ತಮಸಃ ಭೂಯ ಇವ ಬಹುತರಮೇವ ತೇ ತಮಃ ಪ್ರವಿಶನ್ತಿ । ಕೇ? ಕರ್ಮ ಹಿತ್ವಾ ಯೇ ಉ ಯೇ ತು ವಿದ್ಯಾಯಾಮೇವ ದೇವತಾಜ್ಞಾನೇ ಏವ ರತಾಃ ಅಭಿರತಾಃ ॥

(ಭಾಷ್ಯಾರ್ಥ)

ಇಲ್ಲಿ[2] ಕುರುಡುಗತ್ತಲೆಯನ್ನು ಅಂದರೆ (ತತ್ತ್ವವನ್ನು) ತಿಳಿಯದೆ ಇರುವದೆಂಬ ಕತ್ತಲೆಯನ್ನು ಪ್ರವೇಶಿಸುವರು. ಯಾರು ? ಯಾರು ಅವಿದ್ಯೆಯನ್ನು - ವಿದ್ಯೆಗಿಂತ ಬೇರೆಯಾದದ್ದು ಅವಿದ್ಯೆ ; ಆ ಅವಿದ್ಯೆ (ಎಂದರೆ) - ಕರ್ಮವನ್ನು ಎಂದರ್ಥ ; ಏಕೆಂದರೆ ಕರ್ಮವು ವಿದ್ಯೆಗೆ ವಿರುದ್ಧವಾಗಿರುತ್ತದೆ.[3] ಅಂಥ ಅಗ್ನಿಹೋತ್ರವೇ ಮುಂತಾದ

1. ಫಲವುಳ್ಳದ್ದನ್ನು ವಿಧಿಸಿ ಅದನ್ನೇ ಶ್ರುತಿಯು ನಿಂದಿಸುತ್ತದೆ ಎಂಬುದು ಯುಕ್ತವಾಗಲಾರದು.

2. 'ತತ್ರ' ಎಂಬ ಮೂಲಶಬ್ದದ ಅರ್ಥವಿದು. ಕರ್ಮೋಪಾಸನೆಗಳನ್ನು ಮಾಡುವವರಲ್ಲಿ ಎಂದರ್ಥ. 'ಹೀಗಿರುವದರಿಂದ' ಎಂದರ್ಥವನ್ನು ಮಾಡಿದರೆ ಇದುವರೆಗಿನ ಚರ್ಚೆಯಿಂದ ಜ್ಞಾನಿಗಳಿಗೆ ಕರ್ಮನಿಷ್ಠೆಯು ಹೊಂದುವದಿಲ್ಲವಾದ್ದರಿಂದ ಎಂದಭಿಪ್ರಾಯ.

3. ಅವಿದ್ಯೆಯೆಂಬಲ್ಲಿ ಅಕಾರಕ್ಕೆ ವಿರೋಧವೆಂಬರ್ಥವೆಂದು ಸೂಚಿಸಿದೆ.

ರೂಪದ ಬರಿಯ (ಅವಿದ್ಯೆ)ಯನ್ನೇ ಉಪಾಸನೆಮಾಡುತ್ತಾರೋ, ಅಂದರೆ ಅದನ್ನೇ ಹೆಚ್ಚೆಂದು ತಿಳಿದುಕೊಂಡು ಅನುಷ್ಠಾನಮಾಡುತ್ತಿರುವರೋ, (ಅವರು) ಎಂದಭಿಪ್ರಾಯ.[1] ಅದಕ್ಕಿಂತ ಅಂದರೆ ಆ ಕುರುಡನ್ನುಂಟುಮಾಡುವ ಕತ್ತಲೆಗಿಂತ ಹೆಚ್ಚಿನದೇ ಆಗಿರುವ ಬಲವಾಗಿರುವ ಕತ್ತಲೆಯನ್ನೇ[2] ಪ್ರವೇಶಿಸುವರು. ಯಾರು ? ಕರ್ಮವನ್ನು ಬಿಟ್ಟು ಯಾರು ಯಾದಾದರೆ ವಿದ್ಯೆಯಲ್ಲಿಯೇ ದೇವತಾಜ್ಞಾನದಲ್ಲಿಯೇ ನಿರತರಾಗಿರುತ್ತಾರೋ ಎಂದರೆ ಆಸಕ್ತರಾಗಿರುತ್ತಾರೋ (ಅವರು). ॥೯॥

(ಭಾಷ್ಯ)

೨೩. ತತ್ರಾವಾನ್ತರಫಲಭೇದಂ ವಿದ್ಯಾಕರ್ಮಣೋಃ ಸಮುಚ್ಚಯಕಾರಣಮಾಹ । ಅನ್ಯಥಾ ಫಲವದಫಲವತೋಃ ಸನ್ನಿಹಿತಯೋರಙ್ಗಾಙ್ಗಿತಯಾ ಜಾಮಿತೈವ ಸ್ಯಾದಿತಿ ॥

(ಭಾಷ್ಯಾರ್ಥ)

ಈಗ ವಿದ್ಯೆ, ಕರ್ಮ - ಇವೆರಡಕ್ಕೂ ಒಳಫಲಗಳು ಬೇರೆಬೇರೆಯೆಂಬುದೇ ಇವುಗಳೆರಡನ್ನೂ ಕೂಡಿಸಿ (ಅನುಷ್ಠಾನ) ಮಾಡಬೇಕೆಂಬುದಕ್ಕೆ ಕಾರಣವೆಂದು (ಮುಂದಿನ ಮಂತ್ರವು) ಹೇಳುತ್ತದೆ. ಹಾಗಿಲ್ಲದಿದ್ದರೆ ಫಲವುಳ್ಳದ್ದು (ಒಂದು), ಫಲವಿಲ್ಲದ್ದು (ಮತ್ತೊಂದು) - ಹೀಗೆ ( ಒಂದಕ್ಕೊಂದು) ಹತ್ತಿರವಾಗಿದ್ದರೆ ಅಂಗಾಂಗಿ ಭಾವವಾಗಿ ಪುನರುಕ್ತಿಯೇ[3] ಆದೀತು ಎಂಬುದೇ ಇದಕ್ಕೆ ಕಾರಣ.

---

1. ಅವರು ತಮಸ್ಸನ್ನು ಎಂದರೆ ತತ್ತ್ವವನ್ನು ತಿಳಿಯದೆ ನಾನು ನನ್ನದೆಂದು ವ್ಯವಹರಿಸುವ ತಪ್ಪು ತಿಳಿವಿನ ವ್ಯವಹಾರವನ್ನು ಹೊಗುವರು.

2. 'ಭೂಯ ಇವ' ಎಂಬ ಮೂಲವನ್ನು 'ಬಹುತರಮೇವ' ಎಂಬ ಭಾಷ್ಯದಂತೆ ಕನ್ನಡಿಸಿದೆ. 'ಇವ' ಎಂದೇ ಭಾಷ್ಯದಲ್ಲಿದೆ ಎಂದಿಟ್ಟುಕೊಂಡರೆ 'ಹೆಚ್ಚಾಗಿರುವಂತೆ ಇರುವ' ಎಂಬರ್ಥವಾಗುವದು; ಅದಕ್ಕಿಂತ :ಏವ' ಎಂಬ ಪಾಠವೇ ಉತ್ತಮ. ಕರ್ಮವನ್ನು ಮಾಡಿದ ಮೇಲೆ ಉಪಾಸನೆಗೆ ಅಧಿಕಾರವು ಬರುತ್ತದೆ. ಆದ್ದರಿಂದ ಕರ್ಮಕ್ಕೆ ಅಧಿಕಾರಿಗಳಾಗಿರುವವರು ಕರ್ಮವನ್ನು ಬಿಟ್ಟು ಉಪಾಸನೆಗೆ ಹೋಗಬಾರದೆಂಬುದನ್ನು ಇಲ್ಲಿ 'ಬಲವಾದ ಕತ್ತಲೆಯನ್ನು ಹೊಂದುವರು' ಎಂಬ ಮಾತುಗಳಿಂದ ನಿಂದಿಸಿದೆ. ಗೀತೆಯಲ್ಲಿ 'ಕರ್ಮಯೋಗೋ ವಿಶಿಷ್ಯತೇ', (5-2) 'ನ ನಿರಗ್ನಿಃ' (6-1) ಎಂಬ ವಾಕ್ಯಗಳಂತೆ ಇಲ್ಲಿಯೂ ವಾಕ್ಯಾರ್ಥವನ್ನು ಮಾಡಬೇಕು.

3. 'ಅಙ್ಗಾಙ್ಗಿತ್ವೈವ ಸ್ಯಾತ್' ಎಂಬ (ಆ॥) ಪಾಠಕ್ಕಿಂತ ಇದೇ ಉತ್ತಮವೆಂದು ತೋರುತ್ತದೆ. ಒಂದಕ್ಕೆ ಫಲ, ಮತ್ತೊಂದಕ್ಕೆ ಫಲವಿಲ್ಲದಿದ್ದರೆ ಕರ್ಮೋಪಾಸನೆಗಳಲ್ಲಿ ಫಲವಿಲ್ಲದ್ದು ಅಂಗ, ಫಲವಿರುವದು ಅಂಗಿ (ಪ್ರಧಾನ) - ಎಂದು ಅಂಗಾಂಗಿಭಾವವಾಗುತ್ತಿತ್ತು. ಆಗ ಅಂಗಾಂಗಿಗಳಿಗೆ ಸಮುಚ್ಚಯವು ತಾನೇ ಸಿದ್ಧವಾಗಿರುವದರಿಂದ ಮತ್ತೆ ಸಮುಚ್ಚಯವನ್ನು ವಿಧಾನ ಮಾಡುವದು ಪುನರುಕ್ತಿಯೆಂದಾಗುತ್ತಿತ್ತು. ಆದ್ದರಿಂದ ಎರಡಕ್ಕೂ ಬೇರೆಬೇರೆಯ ಫಲವಿರುವದರಿಂದ ಇಲ್ಲಿ ಸಮಪ್ರಧಾನವಾಗಿ ಎರಡನ್ನೂ ಕೂಡಿಸಿ ಅನುಷ್ಠಾನ ಮಾಡಬೇಕೆಂಬುದಕ್ಕೆ ಕಾರಣವನ್ನು ಹೇಳಿರುತ್ತದೆ - ಎಂದಭಿಪ್ರಾಯ.

ಅನ್ಯದೇವಾಹುರ್ವಿದ್ಯಯಾ
ಅನ್ಯದಾಹುರವಿದ್ಯಯಾ ।
ಇತಿ ಶುಶ್ರುಮ ಧೀರಾಣಾಂ
ಯೇನಸ್ತದ್ವಿಚಚಕ್ಷಿರೇ ॥೧೦॥

೧೦. ವಿದ್ಯೆಯಿಂದ ಬೇರೆಯೇ ಎನ್ನುವರು, ಅವಿದ್ಯೆಯಿಂದ ಬೇರೆಯೆನ್ನುವರು. ಹೀಗೆಂದು ಧೀರರಿಂದ ಕೇಳಿರುತ್ತೇವೆ ; ಅವರು ನಮಗೆ ವಿವರಿಸಿ ಹೇಳಿರುತ್ತಾರೆ.

(ಭಾಷ್ಯ)

೨೪. ಅನ್ಯತ್ ಪೃಥಗೇವ ವಿದ್ಯಯಾ ಕ್ರಿಯತೇ ಫಲಮಿತಿ ಆಹುಃ ವದನ್ತಿ । "ವಿದ್ಯಯಾ ದೇವಲೋಕಃ" (ಬೃ. 1-5-16), "ವಿದ್ಯಯಾ ತದಾರೋಹನ್ತಿ" (ಶತ. 10-5-4-16)[1] ಇತಿ ಶ್ರುತೇಃ । ಅನ್ಯತ್ ಆಹುಃ ಅವಿದ್ಯಯಾ ಕರ್ಮಣಾ ಕ್ರಿಯತೇ ಫಲಮಿತಿ। "ಕರ್ಮಣಾ ಪಿತೃಲೋಕಃ"(ಬೃ 1-5-16) ಇತಿ ಶ್ರುತೇಃ । ಇತಿ ಏವಂ ಶುಶ್ರುಮ ಶ್ರುತವನ್ತೋ ವಯಂ ಧೀರಾಣಾಂ ಧೀಮತಾಂ ವಚನಮ್ । ಯೇ ಆಚಾರ್ಯಾಃ ನಃ ಅಸ್ಮಭ್ಯಂ ತತ್ ಕರ್ಮ ಚ ಜ್ಞಾನಂ ಚ ವಿಚಚಕ್ಷಿರೇ ವ್ಯಾಖ್ಯಾತವನ್ತಃ, ತೇಷಾಮ್ । ಅಯಮಾಗಮಃ ಪಾರಮ್ಪರ್ಯಾಗತ ಇತ್ಯರ್ಥಃ ॥

(ಭಾಷ್ಯಾರ್ಥ)

ವಿದ್ಯೆಯಿಂದ ಬೇರೆ, ಮತ್ತೊಂದೇ, ಫಲವು ಉಂಟುಮಾಡಲ್ಪಡುವದು ಎಂದು ಎನ್ನುವರು, ಎಂದು ಹೇಳುವರು. "ವಿದ್ಯೆಯಿಂದ ದೇವಲೋಕವನ್ನು ಗೆಲ್ಲಬೇಕು". "ವಿದ್ಯೆಯಿಂದ ಅದನ್ನು ಏರುವರು" ಎಂಬ ಶ್ರುತಿಯು ಇದಕ್ಕೆ ಆಧಾರವು. ಅವಿದ್ಯೆಯಿಂದ ಎಂದರೆ ಕರ್ಮದಿಂದ ಬೇರೆಯ (ಫಲವೇ) ಉಂಟುಮಾಡಲ್ಪಡುವದು ಎಂದು ಹೇಳುತ್ತಾರೆ. "ಕರ್ಮದಿಂದ ಪಿತೃಲೋಕ (ವನ್ನು ಗೆಲ್ಲಬೇಕು)" ಎಂಬ ಶ್ರುತಿ ಇದಕ್ಕೆ ಆಧಾರವಾಗಿದೆ. ಹೀಗೆಂದು ನಾವು ಧೀರರ ಎಂದರೆ ಪಂಡಿತರ ವಚನವನ್ನು ಕೇಳಿರುತ್ತೇವೆ. ಆ ಆಚಾರ್ಯರು ನಮಗೆ ಆ ಕರ್ಮವನ್ನೂ ಜ್ಞಾನವನ್ನೂ ತಿಳಿಸಿರುತ್ತಾರೆ ಎಂದು ವಿವರಿಸಿ

---

1. (ವಾ॥) ಪಾಠದಲ್ಲಿ ಭಾಷ್ಯವು ಸ್ವಲ್ಪ ಬೇರೆಯಾಗಿದೆ ; ಆದರೆ ಅರ್ಥದಲ್ಲಿ ಯಾವ ಹೆಚ್ಚುಕಡಿಮೆಯೂ ಆಗಿರುವದಿಲ್ಲ.

ಹೇಳಿರುತ್ತಾರೆ. ಅವರ[1] ಈ ಆಗಮವು[2] ಪರಂಪರೆಯಿಂದ ಬಂದದ್ದು ಎಂದರ್ಥ. ॥೧೦॥

(ಭಾಷ್ಯ)

೨೫. ಯತ ಏವಮ್ ಅತಃ-

(ಭಾಷ್ಯಾರ್ಥ)

ಹೀಗಿರುವದರಿಂದ-

**ವಿದ್ಯಾಂ ಚಾವಿದ್ಯಾಂ ಚ**
**ಯಸ್ತದ್ವೇದೋಭಯಗ್ಂ ಸಹ ।**
**ಅವಿದ್ಯಯಾ ಮೃತ್ಯುಂ ತೀರ್ತ್ವಾ**
**ವಿದ್ಯಯಾಽಮೃತಮಶ್ನುತೇ ॥೧೧॥**

೧೧. ವಿದ್ಯೆಯನ್ನೂ ಅವಿದ್ಯೆಯನ್ನೂ ಯಾವಾತನು ಎರಡನ್ನೂ ಸೇರಿಸಿ ತಿಳಿಯುತ್ತಾನೋ (ಆತನು) ಅವಿದ್ಯೆಯಿಂದ ಮೃತ್ಯುವನ್ನು ದಾಟಿ ವಿದ್ಯೆಯಿಂದ ಅಮೃತವನ್ನು ಪಡೆಯುತ್ತಾನೆ.

(ಭಾಷ್ಯ)

೨೬. ವಿದ್ಯಾಂ ಚ ಅವಿದ್ಯಾಂ ಚ ದೇವತಾಜ್ಞಾನಂ ಕರ್ಮ ಚ ಇತ್ಯರ್ಥಃ । ಯಃ ತತ್ ಏತದುಭಯಂ ಸಹ ಏಕೇನ ಪುರುಷೇಣ ಅನುಷ್ಠೇಯಂ ವೇದ, ತಸ್ಯೈವಂ ಸಮುಚ್ಚಯಕಾರಿಣ ಏವ ಏಕಪುರುಷಾರ್ಥಸಮ್ಬನ್ಧಃ ಕ್ರಮೇಣ ಸ್ಯಾದಿತ್ಯುಚ್ಯತೇ । ಅವಿದ್ಯಯಾ ಕರ್ಮಣಾ ಅಗ್ನಿಹೋತ್ರಾದಿನಾ ಮೃತ್ಯುಂ ಸ್ವಾಭಾವಿಕಂ ಕರ್ಮ ಜ್ಞಾನಂ ಚ **ಮೃತ್ಯುಶಬ್ದವಾಚ್ಯಮ್** ಉಭಯಂ ತೀರ್ತ್ವಾ ಅತಿಕ್ರಮ್ಯ, ವಿದ್ಯಯಾ ದೇವತಾಜ್ಞಾನೇನ ಅಮೃತಂ ದೇವತಾತ್ಮಭಾವಮ್ ಅಶ್ನುತೇ ಪ್ರಾಪ್ನೋತಿ । ತದ್ ಹಿ ಅಮೃತತ್ವಮುಚ್ಯತೇ ಯದ್ದೇವತಾತ್ಮಗಮನಮ್ ॥

---

1. 'ತೇಷಾಮ್' ಎಂಬ ಮಾತನ್ನು ಹಿಂದಿನ ವಾಕ್ಯಕ್ಕೂ ಅನ್ವಯಿಸಬಹುದು ಆಗ ಕರ್ಮವನ್ನೂ ಉಪಾಸನೆಯನ್ನೂ ನಮಗೆ ತಿಳಿಯಹೇಳಿದ ಜ್ಞಾನಿಗಳ ಉಪದೇಶವಿದು-ಎಂದರ್ಥ. ಕರ್ಮಕ್ಕೂ ಉಪಾಸನೆಗೂ ಬೇರೆಬೇರೆಯ ಫಲಗಳುಂಟೆಂಬುದು ಹಿಂದಿನಿಂದಲೂ ನಡೆದು ಬಂದಿರುವ ವೈದಿಕಸಂಪ್ರದಾಯದಿಂದ ನಮಗೆ ತಿಳಿದುಬಂದದ್ದು, ನಾವೇ ಊಹಿಸಿದ್ದಲ್ಲ-ಎಂಬುದು ವಾಕ್ಯಾರ್ಥವು.

2. ಗುರುಪರಂಪರೆಯಿಂದ ಬಂದ ಉಪದೇಶವು.

(ಭಾಷ್ಯಾರ್ಥ)

ವಿದ್ಯೆಯನ್ನೂ ಅವಿದ್ಯೆಯನ್ನೂ ಅಂದರೆ ದೇವತಾಜ್ಞಾನವನ್ನೂ[1] ಮತ್ತು ಕರ್ಮವನ್ನೂ ಎಂದರ್ಥ. ಇವೆರಡನ್ನೂ ಸೇರಿಸಿ ಒಬ್ಬ ಪುರುಷನೇ ಅನುಷ್ಠಾನ ಮಾಡತಕ್ಕದ್ದು ಎಂದು ಯಾವಾತನು ತಿಳಿಯುತ್ತಾನೋ ಆತನಿಗೇ ಎಂದರೆ ಹೀಗೆ (ಎರಡನ್ನೂ) ಸೇರಿಸಿಕೊಂಡು ಅನುಷ್ಠಾನಮಾಡುತ್ತಿರುವವನಿಗೇ ಒಂದೇ[2] ಪುರುಷಾರ್ಥದ ಸಂಬಂಧವು ಕ್ರಮವಾಗಿ[3] ಆಗುತ್ತದೆ ಎಂದು (ಈಗ) ಹೇಳಲಾಗುತ್ತದೆ :

ಅವಿದ್ಯೆಯಿಂದ ಎಂದರೆ ಅಗ್ನಿಹೋತ್ರವೇ ಮುಂತಾದ ಕರ್ಮದಿಂದ ಮೃತ್ಯುವನ್ನು-ಸ್ವಭಾವದಿಂದ[4] ಇದ್ದುಕೊಂಡಿರುವ ಕರ್ಮವೂ ತಿಳಿವಳಿಕೆಯೂ **ಮೃತ್ಯುವೆನಿಸುವದು**; ಇವೆರಡನ್ನೂ-ದಾಟಿ, ವಿದ್ಯೆಯಿಂದ ಎಂದರೆ ದೇವತಾಜ್ಞಾನದಿಂದ **ಅಮೃತವನ್ನು**[5] ಎಂದರೆ ದೇವತಾತ್ಮಭಾವವನ್ನು[6] ಪಡೆಯುತ್ತಾನೆ. ಈ ದೇವತಾಸ್ವರೂಪವನ್ನು ಪಡೆಯುವದನ್ನಲ್ಲವೆ, ಅಮೃತವೆನ್ನುವರು ?[7] ||೧೧||

## ವ್ಯಾಕೃತಾವ್ಯಾಕೃತೋಪಾಸನೆಗಳ ಸಮುಚ್ಚಯ

(ಭಾಷ್ಯ)

೨೭. ಅಧುನಾ ವ್ಯಾಕೃತಾವ್ಯಾಕೃತೋಪಾಸನಯೋಃ ಸಮುಚ್ಚಿಚೀಷಯಾ ಪ್ರತ್ಯೇಕಂ ನಿನ್ದಾ ಉಚ್ಯತೇ-

---

1. ದೇವತಾಜ್ಞಾನವೆಂದರೆ ದೇವತೆಯ ಉಪಾಸನೆಯು. ಇದರಲ್ಲಿ ಕಾರ್ಯಬ್ರಹ್ಮೋಪಾಸನೆಯೂ ಸೇರಿರುತ್ತದೆ.

2. ''ಏಕೈಕಪುರುಷಾರ್ಥಸಂಬನ್ಧಃ'' ಎಂಬ (ವಾ||) ಪಾಠಕ್ಕಿಂತ ''ಏಕಪುರುಷಾರ್ಥಃಸಮ್ಬನ್ಧಃ'' ಎಂಬ (ಆ||) ಪಾಠವೇ ಉತ್ತಮ. ಉಪಾಸನೆಯಿಂದ ಆಯಾ ದೇವತೆಯ ಸ್ವರೂಪವನ್ನು ಪಡೆಯುತ್ತಾರೆ ಎಂಬುದು ಶ್ರುತಿವಾದ. ಬೃ. 4-1-2ನ್ನು ನೋಡಿರಿ.

3. ಮೊದಲು ಅಡ್ಡಿಯನ್ನು ಕಳೆದುಕೊಳ್ಳುವದು, ಬಳಿಕ ಉಪಾಸನೆಯನ್ನು ಮಾಡಿ ಫಲವನ್ನು ಪಡೆಯುವದು-ಎಂಬ ಕ್ರಮದಿಂದ.

4. ಅವಿಚಾರಸ್ವಭಾವದಿಂದ. ಜನರಲ್ಲಿ ಸಹಜವಾಗಿರುವ ಇದು ಅವರನ್ನು ಮರ್ತ್ಯರನ್ನಾಗಿ ಮಾಡಿರುವದು. ಆದ್ದರಿಂದ ಇದಕ್ಕೆ ಮೃತ್ಯುವೆಂದು ಹೆಸರು.

5. ಮರಣವಿಲ್ಲದಿರುವಿಕೆಯನ್ನು.

6. ದೇವತೆಯ ಸ್ವರೂಪವನ್ನು ಸತ್ತಬಳಿಕ ಪಡೆಯುವದು. ಉಪಾಸನೆಯಿಂದ ಸಾಕ್ಷಾತ್ಕಾರವನ್ನು ಹೊಂದಿರುವವರಿಗೆ ಈ ಫಲವಾಗುವದು.

7. ಕಲ್ಪವು ಮುಗಿದು ಪ್ರಲಯವಾಗುವವರೆಗೂ ಇರುವ ಸ್ಥಾನವನ್ನು ''ಅಮೃತ'' ಎನ್ನುತ್ತಾರೆ. ಮುಕ್ತಿಯು ಆತ್ಯಂತಿಕವಾದ ಅಮೃತ, ಇದು ಆಪೇಕ್ಷಿಕವಾದ ಅಮೃತ. ಕ. 2-3-16, ಛಾಂ. 5-10-1,2ರ ಭಾಷ್ಯವನ್ನು ನೋಡಿರಿ. ಅದ್ವೈತಪ್ರಕರಣ 25, ಐತರೇಯ ಸಂಬಂಧಭಾಷ್ಯ, ತೈತ್ತಿರೀಯಭಾಷ್ಯ 1-11-ಇವುಗಳಲ್ಲಿ ಈ ವಾಕ್ಯದ ಅರ್ಥವನ್ನು ಬೇರೆಯಾಗಿಯೇ ಕೊಟ್ಟಿರುತ್ತದೆ.

(ಭಾಷ್ಯಾರ್ಥ)

ಈಗ ವ್ಯಾಕೃತ ಅವ್ಯಾಕೃತ- (ಈ ಎರಡು) ಉಪಾಸನೆಗಳನ್ನೂ ಸೇರಿಸಬೇಕೆಂಬ ಇಚ್ಛೆಯಿಂದ ಒಂದೊಂದರ ನಿಂದೆಯನ್ನು ಮಾಡಲಾಗುತ್ತದೆ :-

**ಅನ್ಧಂ ತಮಃ ಪ್ರವಿಶನ್ತಿ**
**ಯೇಽಸಮ್ಭೂತಿಮುಪಾಸತೇ ।**
**ತತೋ ಭೂಯ ಇವ ತೇ**
**ತಮೋ ಯ ಉ ಸಮ್ಭೂತ್ಯಾಗ್ಂ ರತಾಃ ॥೧೨॥**

೧೨. ಯಾರು ಅಸಂಭೂತಿಯನ್ನು ಉಪಾಸನೆಮಾಡುತ್ತಾರೋ ಅವರು ಕುರುಡುಗತ್ತಲೆಯನ್ನು ಪ್ರವೇಶಿಸುವರು. ಯಾರು ಸಂಭೂತಿಯಲ್ಲಿ ರತರಾಗಿರುತ್ತಾರೋ ಅವರು ಅದಕ್ಕಿಂತಲೂ ಹೆಚ್ಚಿನ ಕತ್ತಲೆಯನ್ನು ಪ್ರವೇಶಿಸುವರು.

(ಭಾಷ್ಯ)

೨೮. ಅನ್ಧಂ ತಮಃ ಪ್ರವಿಶನ್ತಿ ಯೇ ಅಸಮ್ಭೂತಿಮ್ - ಸಮ್ಭವನಂ ಸಮ್ಭೂತಿಃ । ಸಾ ಯಸ್ಯ ಕಾರ್ಯಸ್ಯ ಸಾ ಸಮ್ಭೂತಿಃ, ತಸ್ಯಾ ಅನ್ಯಾ ಅಸಮ್ಭೂತಿಃ **ಪ್ರಕೃತಿಃ ಕಾರಣಮ್ ಅವಿದ್ಯಾ ಅವ್ಯಾಕೃತಾಖ್ಯಾ;** ತಾಮ್ ಅಸಮ್ಭೂತಿಮ್-ಅವ್ಯಾಕೃತಾಖ್ಯಾಂ ಪ್ರಕೃತಿಂ ಕಾರಣಮ್ ಅವಿದ್ಯಾಂ ಕಾಮಕರ್ಮಬೀಜಭೂತಾಮ್ ಅದರ್ಶನಾತ್ಮಿಕಾಮ್ ಉಪಾಸತೇ ಯೇ, ತೇ ತದನುರೂಪಮೇವ ಅನ್ಧಂ ತಮಃ ಅದರ್ಶನಾತ್ಮಕಂ ಪ್ರವಿಶನ್ತಿ । ತತಃ ತಸ್ಮಾದಪಿ ಭೂಯಃ ಬಹುತರಮಿವ ತಮಃ ಪ್ರವಿಶನ್ತಿ ಯೇ ಉ ಸಮ್ಭೂತ್ಯಾಂ **ಕಾರ್ಯಬ್ರಹ್ಮಣಿ ಹಿರಣ್ಯಗರ್ಭಾಖ್ಯೇ ರತಾಃ ॥**

(ಭಾಷ್ಯಾರ್ಥ)

ಯಾರು ಅಸಂಭೂತಿಯನ್ನು - ಸಂಭೂತಿಯೆಂದರೆ ಹುಟ್ಟುವದು, ಅದು ಕಾರ್ಯಕ್ಕೆ ಇರುವ (ಧರ್ಮವಾದ್ದರಿಂದ) ಅದಕ್ಕೆ "ಸಂಭೂತಿ" ಎಂದು ಹೆಸರು. ಅದಕ್ಕಿಂತ ಬೇರೆಯಾದದ್ದು **ಅಸಂಭೂತಿಯು. (ಇದೇ) ಪ್ರಕೃತಿ, ಕಾರಣ, ಅವ್ಯಾಕೃತವೆಂಬ ಹೆಸರಿನ ಅವಿದ್ಯೆ.**[1] ಆ **ಅಸಂಭೂತಿಯನ್ನು** ಎಂದರೆ ಅವ್ಯಾಕೃತವೆಂಬ ಹೆಸರಿನ ಪ್ರಕೃತಿಯನ್ನು,

---

1. ವ್ಯಾಕೃತ ಎಂದರೆ ಸಾಧ್ಯಸಾಧನರೂಪದಲ್ಲಿ ಬಿಂಗಡವಾಗಿರುವ ನಾಮರೂಪಕರ್ಮಗಳ ಸಮೂಹವಾದ ಜಗತ್ತು; ಅವ್ಯಾಕೃತ ಎಂದರೆ ಹೀಗೆ ಬಿಡಿಯಾಗುವವಕ್ಕೆ ಮೊದಲು ಇದ್ದ ಸೂಕ್ಷ್ಮವಾದ ಜಗದ್ರೂಪ. ಈ ಅವ್ಯಾಕೃತವು ಅವಿದ್ಯೆಯಿಂದ ಕಲ್ಪಿತವಾಗಿದ್ದುಕೊಂಡು ಅವಿದ್ಯೆಯಿರುವವರೆಗೂ ನಿಜವಾಗಿ ತೋರುವದು; ಅವಿದ್ಯೆಯಿಂದ ಕಲ್ಪಿತವಾಗಿರುವದರಿಂದಲೇ ಇದನ್ನು ಅವಿದ್ಯೆಯೆಂದು ಕರೆದಿದೆ. ಹೀಗೆ ಅವ್ಯಾಕೃತವನ್ನು ಅವಿದ್ಯೆ ಎಂದು ಕರೆದಿರುವದು ಮತ್ತೆ ಯಾವ ಭಾಷ್ಯದಲ್ಲಿಯೂ ಕಾಣುವದಿಲ್ಲ. ಇದನ್ನು ಮಾಯೆ, ಶಕ್ತಿ, ಬೀಜ-ಮುಂತಾದ ಹೆಸರುಗಳಿಂದಲೂ ಕರೆಯುವದುಂಟು. ಸೂ. ಭಾ. ೨-೧-೧೪, ೧-೪-೩, ೧-೨-೨೨ ನೋಡಿರಿ.

ಕಾರಣವನ್ನು, ಕಾಮಕರ್ಮಗಳಿಗೆ ಬೀಜವಾಗಿರುವ[1] (ತತ್ತ್ವವನ್ನು) ಅರಿಯದೆ ಇರುವದೆಂಬ ಅವಿದ್ಯೆಯನ್ನು ಯಾರು ಉಪಾಸನೆಮಾಡುತ್ತಾರೋ, ಅವರು ಅದಕ್ಕನುರೂಪವಾಗಿಯೇ ಇರುವ ಕುರುಡುಗತ್ತಲೆಯನ್ನು ಎಂದರೆ ಏನೂ ಕಾಣದಿರುವ ಸ್ಥಿತಿಯನ್ನು ಪ್ರವೇಶಿಸುವರು. ಅದಕ್ಕಿಂತಲೂ ಆ (ಕತ್ತಲೆಗಿಂತಲೂ) ಹೆಚ್ಚಿನ ಹೆಚ್ಚಾಗಿಯೇ[2] ಇರುವ ಕತ್ತಲೆಯನ್ನು ಯಾರಾದರೆ ಸಂಭೂತಿಯಲ್ಲಿ ಎಂದರೆ **ಹಿರಣ್ಯಗರ್ಭನೆಂಬ[3] ಕಾರ್ಯಬ್ರಹ್ಮದಲ್ಲಿ** ರತರಾಗಿರುತ್ತಾರೋ ಆಸಕ್ತರಾಗಿರುತ್ತಾರೋ (ಅವರು) ಪ್ರವೇಶಿಸುವರು. ॥೧೨॥

(ಭಾಷ್ಯ)

೨೯. ಅಧುನಾ ಉಭಯೋರುಪಾಸನಯೋಃ ಸಮುಚ್ಚಯಕಾರಣಮ್ ಅವಯವಫಲಭೇದಮಾಹ-

(ಭಾಷ್ಯಾರ್ಥ)

ಈಗ (ಈ) ಎರಡು ಉಪಾಸನೆಗಳನ್ನೂ ಸೇರಿಸಿಕೊಂಡು (ಅನುಷ್ಠಾನಮಾಡಬೇಕೆಂಬುದಕ್ಕೆ) ಕಾರಣವಾಗಿ (ಒಟ್ಟಿನ) ಅವಯವಗಳಿಗೆ[4] ಬೇರೆ ಬೇರೆಯ ಫಲವನ್ನು (ಮಂತ್ರವು) ಹೇಳುತ್ತಿದೆ :-

**ಅನ್ಯದೇವಾಹುಃ ಸಮ್ಭವಾ-**
**ದನ್ಯದಾಹುರಸಮ್ಭವಾತ್ ।**
**ಇತಿ ಶುಶ್ರುಮ ಧೀರಾಣಾಂ**
**ಯೇ ನಸ್ತದ್ವಿಚಚಕ್ಷಿರೇ** ॥೧೩॥

1. ತಪ್ಪು ತಿಳಿವಳಿಕೆಯೇ ಇದು ಬೇಕೆಂಬ ಕಾಮಕ್ಕೂ ಇದನ್ನು ಮಾಡಬೇಕೆಂಬ ಕರ್ಮಕ್ಕೂ ಮೂಲವು. ತಪ್ಪುತಿಳಿವಳಿಕೆಯಿಂದಾಗಿರುವ ಅವ್ಯಾಕೃತವಿಲ್ಲದಿದ್ದರೆ ವ್ಯಾಕೃತ ಜಗತ್ತಿಲ್ಲ, ಜಗತ್ತಿಲ್ಲದಿದ್ದರೆ ಕಾಮಕರ್ಮಗಳಿಲ್ಲ. ಆದ್ದರಿಂದ ಅವ್ಯಾಕೃತವು ಕಾಮಕರ್ಮಗಳಿಗೆ ಬೀಜವಾಗಿರುತ್ತದೆ. ಬೃ. 1-4-7ನ್ನು ನೋಡಿರಿ.

2. ಹಿಂದೆ (೯) ನೆಯ ಮಂತ್ರದ ಭಾಷ್ಯದಂತೆಯೇ ಇಲ್ಲಿ 'ಇವ' ಎಂಬ ಶಬ್ದವನ್ನು 'ಏವ' ಎಂಬರ್ಥದಲ್ಲಿಟ್ಟುಕೊಂಡು ಕನ್ನಡಿಸಿರುತ್ತದೆ.

3. ವ್ಯಾಕೃತೋಪಾಸನೆ ಎಂದರೆ ಬರಿಯ ಜಗದ್ರೂಪದಲ್ಲಿ ತೋರಿಕೊಂಡಿರುವ ಬ್ರಹ್ಮದ ಉಪಾಸನೆ. ಇದಕ್ಕೆ **ಕಾರ್ಯಬ್ರಹ್ಮ, ಹಿರಣ್ಯಗರ್ಭ**-ಎಂದೂ ಹೆಸರು. (ಆಯಾ ಕಲ್ಪದ ಜಗತ್ತಿನ ಅಭಿಮಾನಿಯನ್ನು ಹಿರಣ್ಯಗರ್ಭನೆಂದು ಕರೆಯುವರು. ಆ ಹಿರಣ್ಯಗರ್ಭನು ಸತ್ಯಲೋಕವೆಂಬ ಕಾರ್ಯಬ್ರಹ್ಮಲೋಕದಲ್ಲಿ ಇರುವನೆಂದು ವರ್ಣಿಸುವದುಂಟು.) ಹೀಗೆಯೇ ಅವ್ಯಾಕೃತೋಪಾಸನೆ ಎಂದರೆ ಜಗತ್ತಿನ ಬೀಜರೂಪದಲ್ಲಿರುವ ಬ್ರಹ್ಮದ ಉಪಾಸನೆ. ವ್ಯಾಕೃತಾವ್ಯಾಕೃತರೂಪಗಳೆರಡೂ ಅವಿದ್ಯಾಕಲ್ಪಿತವೆಂದು ತಿಳಿದಾಗ ಗೊತ್ತಾಗುವ ಬ್ರಹ್ಮಕ್ಕೆ **ಶುದ್ಧಬ್ರಹ್ಮವೆಂದು** ಹೆಸರು. ಅದು ಕಾರಣವೂ ಅಲ್ಲ, ಕಾರ್ಯವೂ ಅಲ್ಲ; ಅದೇ ನಮ್ಮ ಆತ್ಮನು. ಸೂ. ಭಾ. 2-1-27ನ್ನು ನೋಡಿ.

4. ಒಟ್ಟಿನಲ್ಲಿ ಸೇರಿರುವ ಬೇರೆಬೇರೆಯ ಉಪಾಸನೆಗಳಿಗೆ.

೧೩. ಸಂಭವದಿಂದ ಬೇರೆಯೆನ್ನುವರು, ಅಸಂಭವದಿಂದ ಬೇರೆಯೆನ್ನುವರು; ಹೀಗೆಂದು ಧೀರರಿಂದ ಕೇಳಿರುತ್ತೇವೆ, ಅವರು ನಮಗೆ ವಿವರಿಸಿ ಹೇಳಿರುತ್ತಾರೆ.

(ಭಾಷ್ಯ)

೩೦. ಅನ್ಯದೇವ ಪೃಥಗೇವ ಆಹುಃ ಫಲಂ ಸಂಭವಾತ್ ಸಮ್ಭೂತೇಃ ಕಾರ್ಯಬ್ರಹ್ಮೋಪಾಸನಾತ್ ಅಣಿಮಾದ್ಯೈಶ್ವರ್ಯಲಕ್ಷಣಂ ವ್ಯಾಖ್ಯಾತವನ್ತ ಇತ್ಯರ್ಥಃ । ತಥಾ ಚ ಅನ್ಯತ್ ಆಹುಃ ಅಸಮ್ಭವಾತ್ ಅಸಮ್ಭೂತೇಃ ಅವ್ಯಾಕೃತಾತ್ ಅವ್ಯಾಕೃತೋಪಾಸನಾತ್ । ಯದುಕ್ತಮ್ ''ಅನ್ಧಂ ತಮಃ ಪ್ರವಿಶನ್ತಿ'' (೯) ಇತಿ । **ಪ್ರಕೃತಿಲಯ** ಇತಿ ಚ **ಪೌರಾಣಿಕೈ**ರುಚ್ಯತೇ । ಇತಿ ಏವಂ ಶುಶ್ರುಮ ಧೀರಾಣಾಂ ವಚನಮ್, ಯೇ ನಃ ತತ್ ವಿಚಚಕ್ಷಿರೇ ವ್ಯಾಕೃತಾವ್ಯಾಕೃತೋಪಾಸನಫಲಂ ವ್ಯಾಖ್ಯಾತವನ್ತ ಇತ್ಯರ್ಥಃ ॥

(ಭಾಷ್ಯಾರ್ಥ)

ಬೇರೆಯೇ ಮತ್ತೊಂದು ಫಲವೇ ಸಂಭವದಿಂದ ಅಂದರೆ ಸಂಭೂತಿಯಿಂದ, **ಕಾರ್ಯಬ್ರಹ್ಮದ ಉಪಾಸನೆಯಿಂದ, ಅಣಿಮಾ**[1] ಮುಂತಾದ ಐಶ್ವರ್ಯರೂಪವಾದ (ಫಲವೇ ಆಗುವದೆಂದು) ಎನ್ನುವರು ಎಂದು ಹೇಳಿರುತ್ತಾರೆಂದರ್ಥ. ಮತ್ತು ಇದರಂತೆ ಅಸಂಭವದಿಂದ ಎಂದರೆ ಅಸಂಭೂತಿಯಿಂದ, ಅವ್ಯಾಕೃತದಿಂದ, ಅವ್ಯಾಕೃತದ ಉಪಾಸನೆಯಿಂದ ಬೇರೆಯ (ಫಲವೇ ಆಗುವದೆಂದು) ಹೇಳಿರುತ್ತಾರೆ. ಇದನ್ನೇ ''ಕುರುಡುಗತ್ತಲೆಯನ್ನು ಪ್ರವೇಶಿಸುತ್ತಾರೆ'' ಎಂದು (ಹಿಂದಿನ ಮಂತ್ರದಲ್ಲಿ) ಹೇಳಿರುತ್ತದೆ. **ಪೌರಾಣಿಕರು** (ಇದನ್ನು) **ಪ್ರಕೃತಿಲಯ**[2] ವೆಂದು ಕರೆಯುತ್ತಾರೆ. ಹೀಗೆ ತಿಳಿದವರ ವಚನವನ್ನು ಕೇಳಿರುತ್ತೇವೆ; ಅವರು ನಮಗೆ ಅದನ್ನು ಎಂದರೆ ವ್ಯಾಕೃತಾವ್ಯಾಕೃತೋಪಾಸನೆಗಳ ಫಲವನ್ನು ವಿವರಿಸಿ ಹೇಳಿರುತ್ತಾರೆ-ಎಂದರ್ಥ. ॥೧೩॥

(ಭಾಷ್ಯ)

೩೧. ಯತ ಏವಮ್, ಅತಃ ಸಮುಚ್ಚಯಃ ಸಮ್ಭೂತ್ಯಸಮ್ಭೂತ್ಯುಪಾಸನಯೋರ್ಯುಕ್ತ ಏವ । ಏಕಪುರುಷಾರ್ಥತ್ವಾಚ್ಚೇತ್ಯಾಹ-

---

1. ಅಣಿಮಾ (ತೀರ ಸಣ್ಣವನಾಗುವದು), ಮಹಿಮಾ (ತೀರ ದೊಡ್ಡವನಾಗುವದು), ಗರಿಮಾ (ತೀರ ತೂಕವಾಗುವದು), ಲಘಿಮಾ (ತೀರ ಹಗುರವಾಗುವದು), ಪ್ರಾಪ್ತಿ (ಎಷ್ಟು ದೂರದಲ್ಲಿದ್ದ ವಸ್ತುವನ್ನಾದರೂ ಮುಟ್ಟುವದು), ಪ್ರಾಕಾಮ್ಯ (ಕೋರಿದ್ದನ್ನು ಹೊಂದುವದು), ಈಶಿತ್ವಮ್ (ಯಾವದನ್ನು ಬೇಕಾದರೂ ಸ್ವಾಧೀನಪಡಿಸಿಕೊಳ್ಳುವದು), ವಶಿತ್ವಮ್ (ಶರೀರೇಂದ್ರಿಯಾದಿಗಳನ್ನು ಅಧೀನದಲ್ಲಿಟ್ಟುಕೊಂಡಿರುವದು)- ಇವು ಎಂಟು ಐಶ್ವರ್ಯಗಳೆಂದು ಯೋಗಶಾಸ್ತ್ರದ ಪ್ರಸಿದ್ಧಿ.

2. ಪ್ರಕೃತಿಲಯವೆಂದರೆ ಅವ್ಯಾಕೃತವೆಂಬ ಅವ್ಯಕ್ತದಲ್ಲಿ ಸೇರಿಹೋಗುವದು; ನಿದ್ರೆಯಲ್ಲಿರುವಂತೆ ದುಃಖವಿಲ್ಲದೆ ಸುಖದಿಂದ ಬಹುಕಾಲವಿರುವಂಥ ಸ್ಥಿತಿ. ವಿ. ಪು. ೧-೭-೪೧.

(ಭಾಷ್ಯಾರ್ಥ)

ಹೀಗಿರುವದರಿಂದ ಸಂಭೂತಿ, ಅಸಂಭೂತಿ-ಇವುಗಳನ್ನು ಸೇರಿಸಿ (ಉಪಾಸನೆ ಮಾಡುವದು) ಯುಕ್ತವೇ (ಆಗಿದೆ). ಇವುಗಳಿಗೆ ಒಂದೇ ಪುರುಷಾರ್ಥವಾಗಬೇಕಾಗಿರುವದರಿಂದಲೂ (ಸೇರಿಸಿಕೊಂಡು ಉಪಾಸನೆಮಾಡುವದು ಯುಕ್ತವಾಗಿದೆ)- ಎಂದು (ಮುಂದಿನ ಮಂತ್ರವು) ಹೇಳುತ್ತಿದೆ :

**ಸಮ್ಭೂತಿಂ ಚ ವಿನಾಶಂ ಚ**
**ಯಸ್ತದ್ವೇದೋಭಯಗ್‍ಂ ಸಹ ।**
**ವಿನಾಶೇನ ಮೃತ್ಯುಂ ತೀರ್ತ್ವಾ**
**ಸಮ್ಭೂತ್ಯಾಮೃತಮಶ್ನುತೇ ॥೧೪॥**

೧೪. ಸಮ್ಭೂತಿಯನ್ನೂ ವಿನಾಶವನ್ನೂ ಯಾವಾತನು ಆ ಎರಡನ್ನೂ ಸೇರಿಸಿಕೊಂಡು ಅರಿಯುತ್ತಾನೋ (ಆತನು) ವಿನಾಶದಿಂದ ಮೃತ್ಯುವನ್ನು ದಾಟಿ ಸಂಭೂತಿಯಿಂದ ಅಮೃತವನ್ನು ಪಡೆಯುವನು.

(ಭಾಷ್ಯ)

೩೨. ಸಮ್ಭೂತಿಂ ಚ ವಿನಾಶಂ ಚ ಯಃ, ತದ್ ವೇದ ಉಭಯಂ ಸಹ, ವಿನಾಶೇನ ವಿನಾಶೋ ಧರ್ಮೋ ಯಸ್ಯ ಕಾರ್ಯಸ್ಯ ಸ ತೇನ ಧರ್ಮಿಣಾ ಅಭೇದೇನ ಉಚ್ಯತೇ 'ವಿನಾಶ' ಇತಿ । ತೇನ ತದುಪಾಸನೇನ ಅನೈಶ್ವರ್ಯಮ್ ಅಧರ್ಮ ಕಾಮಾದಿದೋಷ-ಜಾತಂ ಚ ಮೃತ್ಯುಂ ತೀರ್ತ್ವಾ। ಹಿರಣ್ಯಗರ್ಭೋಪಾಸನೇನ ಹಿ ಅಣಿಮಾದಿಪ್ರಾಪ್ತಿಃ ಫಲಮ್। ತೇನ ಅನೈಶ್ವರ್ಯಾದಿಮೃತ್ಯುಮ್ ಅತೀತ್ಯ। ಅಸಮ್ಭೂತ್ಯಾ ಅವ್ಯಾಕೃತೋ-ಪಾಸನಯಾ ಅಮೃತಂ ಪ್ರಕೃತಿಲಯಲಕ್ಷಣಮ್ ಅಶ್ನುತೇ। "ಸಮ್ಭೂತಿಂ ಚ ವಿನಾಶಂ ಚ" ಇತ್ಯತ್ರ ಅವರ್ಣಲೋಪೇನ ನಿರ್ದೇಶೋ ದ್ರಷ್ಟವ್ಯಃ । ಪ್ರಕೃತಿಲಯಫಲಶ್ರುತ್ಯನು-ರೋಧಾತ್ ॥

(ಭಾಷ್ಯಾರ್ಥ)

ಸಂಭೂತಿಯನ್ನೂ ವಿನಾಶವನ್ನೂ ಯಾವಾತನು ಎರಡನ್ನೂ ಸೇರಿಸಿ ಅರಿಯುತ್ತಾನೋ (ಆತನು) ವಿನಾಶದಿಂದ-ವಿನಾಶವು[1] ಕಾರ್ಯದ ಧರ್ಮವಷ್ಟೆ, ಆ ಧರ್ಮಿಗೂ ತನಗೂ ಭೇದವಿಲ್ಲವೆಂದಿಟ್ಟುಕೊಂಡು (ಕಾರ್ಯವನ್ನು) ವಿನಾಶವೆಂದೇ (ಇಲ್ಲಿ) ಕರೆದಿರುತ್ತದೆ. ಆ (ವಿನಾಶದಿಂದ)[2] ಎಂದರೆ ಅದರ ಉಪಾಸನೆಯಿಂದ

1. ಕಾರ್ಯಕ್ಕೆ ವಿನಾಶವೆಂಬುದು ಧರ್ಮವು; ವ್ಯಾಕೃತವು ಕಾರ್ಯವಾದ್ದರಿಂದ ವಿನಾಶಿಯಾಗಿರುತ್ತದೆ. ವಿನಾಶಿಯಾದ ವ್ಯಾಕೃತವನ್ನು ವಿನಾಶವೆಂದು ಕರೆದಿರುವದು ಧರ್ಮ ಧರ್ಮಿಗಳ ಅಭೇದೋಪಚಾರದಿಂದ. 'ವಿದ್ಯಾವಂತರಿಗೆ ಗೌರವ' ಎಂಬರ್ಥದಲ್ಲಿ 'ವಿದ್ಯೆಗೆ ಗೌರವ' ಎಂಬ ಪ್ರಯೋಗದಂತೆಯೇ ಇದು.

2. ವಿನಾಶದಿಂದ ಎಂಬ ಮಾತು ಭಾಷ್ಯದಲ್ಲಿ ಬಿಟ್ಟುಹೋಗಿರಬೇಕೆಂದು ತೋರುವದು.

ಐಶ್ವರ್ಯವಿಲ್ಲದಿರುವದು, ಅಧರ್ಮ, ಕಾಮ- ಮುಂತಾದ ದೋಷಸಮೂಹವೆಂಬ **ಮೃತ್ಯುವನ್ನು** ದಾಟಿ- ಹಿರಣ್ಯಗರ್ಭನ ಉಪಾಸನೆಯಿಂದಲ್ಲವೆ[1], ಅಣಿಮಾದಿಗಳ ಪ್ರಾಪ್ತಿಯಾಗುವದು ? ಅದರಿಂದ ಐಶ್ವರ್ಯವಿಲ್ಲದಿರುವದೇ ಮುಂತಾದ ಮೃತ್ಯುವನ್ನು ಮೀರಿಹೋಗಿ-ಅಸಂಭೂತಿಯಿಂದ[2] ಎಂದರೆ ಅವ್ಯಾಕೃತೋಪಾಸನೆಯಿಂದ **ಅಮೃತವನ್ನು** ಎಂದರೆ ಪ್ರಕೃತಿಲಯರೂಪವಾದ (ಅಮೃತವನ್ನು) ಪಡೆದುಕೊಳ್ಳುವನು.

'ಸಮ್ಭೂತಿಂ ಚ ವಿನಾಶಂ ಚ' (ಸಂಭೂತಿಯನ್ನೂ ವಿನಾಶವನ್ನೂ) ಎಂಬಲ್ಲಿ ಅಕಾರವನ್ನು ಲೋಪಿಸಿ (ಸಮ್ಭೂತಿಮ್ ಎಂದು) ಪ್ರಯೋಗವನ್ನು ಮಾಡಿರುತ್ತದೆ ಎಂದು ತಿಳಿಯಬೇಕು; ಏಕೆಂದರೆ (ಮುಂದೆ ಇರುವ) ಪ್ರಕೃತಿಲಯವೆಂಬ ಫಲಶ್ರುತಿಗೆ[3] ಇದು ಅನುಗುಣವಾಗುತ್ತದೆ. ॥೧೪॥

## ಸಮುಚ್ಚಯೋಪಾಸಕನು ಮಾಡುವ ಮರಣಕಾಲದ ಪ್ರಾರ್ಥನೆ

(ಭಾಷ್ಯ)

೩೩. ಮಾನುಷದೈವವಿತ್ತಸಾಧ್ಯಂ ಫಲಂ ಶಾಸ್ತ್ರಲಕ್ಷಣಂ ಪ್ರಕೃತಿಲಯಾನ್ತಮ್ । ಏತಾವತೀ ಸಂಸಾರಗತಿಃ । ಅತಃ ಪರಂ ಪೂರ್ವೋಕ್ತಂ ''ಆತ್ಮೈವಾಭೂದ್ವಿಜಾನತಃ ॥ (೭) ಇತಿ ಸರ್ವಾತ್ಮಭಾವ ಏವ ಸರ್ವೈಷಣಾಸಂನ್ಯಾಸಜ್ಞಾನನಿಷ್ಠಾಫಲಮ್ । ಏವಂ ದ್ವಿಪ್ರಕಾರಃ ಪ್ರವೃತ್ತಿನಿವೃತ್ತಿಲಕ್ಷಣೋ ವೇದಾರ್ಥೋಽತ್ರ ಪ್ರಕಾಶಿತಃ । ತತ್ರ ಪ್ರವೃತ್ತಿಲಕ್ಷಣಸ್ಯ ವೇದಾರ್ಥಸ್ಯ ವಿಧಿಪ್ರತಿಷೇಧಲಕ್ಷಣಸ್ಯ ಕೃತ್ಸ್ನಸ್ಯ ಪ್ರಕಾಶನೇ **ಪ್ರವರ್ಗ್ಯಾನ್ತಂ ಬ್ರಾಹ್ಮಣಮ್** ಉಪಯುಕ್ತಮ್ । ನಿವೃತ್ತಿಲಕ್ಷಣಸ್ಯ ವೇದಾರ್ಥಸ್ಯ ಪ್ರಕಾಶನೇ ಅತ ಊರ್ಧ್ವಂ **ಬೃಹದಾರಣ್ಯಕಮ್** ಉಪಯುಕ್ತಮ್ । ತತ್ರ ನಿಷೇಕಾದಿಶ್ಮಶಾನಾನ್ತಂ ಕರ್ಮ ಕುರ್ವನ್

1. ಹಿರಣ್ಯಗರ್ಭನು ಸಮಗ್ರವಾದ ಐಶ್ವರ್ಯ, ಧರ್ಮ, ವೈರಾಗ್ಯ- ಮುಂತಾದ ಧರ್ಮಗಳಿಂದ ಕೂಡಿರುವವನು; ಅವನ ಉಪಾಸನೆಯಿಂದ ಅನೈಶ್ವರ್ಯ (ಪಾರತಂತ್ರ್ಯ)ವೇ ಮುಂತಾದ ದೋಷಗಳು ತೊಲಗುವವು. ಏಕೆಂದರೆ ಉಪಾಸಕನಿಗೆ ಉಪಾಸ್ಯದ ಸ್ವರೂಪವೇ ಬರುವದು.

2. 'ತೀರ್ತ್ವಾಽಸಮ್ಭೂತ್ಯಾ' ಎಂಬಲ್ಲಿ ತೀರ್ತ್ವಾ ಅಸಮ್ಭೂತ್ಯಾ ಎಂದು ಪದಚ್ಛೇದವನ್ನು ಮಾಡಿಕೊಳ್ಳಬೇಕೆಂದು ಭಾವ.

3. ಅಸಂಭೂತಿಯಿಂದ ಪ್ರಕೃತಿಲಯಫಲವಾಗುತ್ತದೆ ಎಂದು ಫಲವಾಕ್ಯದಲ್ಲಿದೆ; ಆದ್ದರಿಂದ ಅಲ್ಲಿ ವಿನಾಶವೆಂದರೆ ಸಂಭೂತಿಯೇ ಆಯಿತು. ಇದಕ್ಕನುಗುಣವಾಗಿ ಅರ್ಥಮಾಡಿದರೆ ಮೊದಲಿನ ವಾಕ್ಯದಲ್ಲಿ ವಿನಾಶವೆಂದರೆ ಸಂಭೂತಿಯೆಂದೂ 'ಸಂಭೂತಿ' ಎಂಬುದು ಅಸಂಭೂತಿಯೆಂಬರ್ಥದಲ್ಲಿ ಬಂದಿದೆಯೆಂದೂ ನಿರ್ಣಯವಾಗುತ್ತದೆ.

ಜಿಜೀವಿಷೇದ್ ಯೋ ವಿದ್ಯಯಾ ಸಹ **ಅಪರಬ್ರಹ್ಮವಿಷಯಯಾ** ತದುಕ್ತಂ[1] ''ವಿದ್ಯಾಂ ಚಾವಿದ್ಯಾಂ ಚ ಯಸ್ತದ್ವೇದೋಭಯಗ್ಂ ಸಹ । ಅವಿದ್ಯಯಾ ಮೃತ್ಯುಂ ತೀರ್ತ್ವಾ ವಿದ್ಯಯಾಽಮೃತಮಶ್ನುತೇ'' (೧೧) ಇತಿ । ತತ್ರ ಕೇನ ಮಾರ್ಗೇಣ ಅಮೃತತ್ವಮಶ್ನುತ ಇತಿ ? ಉಚ್ಯತೇ ॥

(ಭಾಷ್ಯಾರ್ಥ)

ಮಾನುಷದೈವವಿತ್ತಗಳಿಗೆ[2] ಶಾಸ್ತ್ರಪ್ರಮಾಣದಿಂದ ಸಿಕ್ಕುವ ಫಲಕ್ಕೆ ಪ್ರಕೃತಿಲಯವೇ ಕೊನೆ. ಇಲ್ಲಿಯವರೆಗೇ ಸಂಸಾರಗತಿ[3]ಯಿರುವದು. ಇನ್ನುಮುಂದಕ್ಕೆ ''ತಿಳಿದವನಿಗೆ ಆತ್ಮನೇ ಆಯಿತೋ'' (೭) ಎಂದು (ಈ) ಮೊದಲೇ ಹೇಳಿರುವ ಏಷಣೆಗಳನ್ನೆಲ್ಲ ಬಿಟ್ಟು ಜ್ಞಾನನಿಷ್ಠೆಯಿಂದ ಸಿಕ್ಕುವ ಸರ್ವಾತ್ಮಭಾವವೆಂಬ ಫಲವು.[4] ಹೀಗೆ ಪ್ರವೃತ್ತಿ, ನಿವೃತ್ತಿ-ಎಂಬ ಎರಡು ಬಗೆಯ ವೇದಾರ್ಥವನ್ನು ಇಲ್ಲಿ[5] ತಿಳಿಸಿಕೊಟ್ಟಿರುತ್ತದೆ. ಇವೆರಡರಲ್ಲಿ ವಿಧಿ, ಪ್ರತಿಷೇಧ-ಎಂಬ ರೂಪದಲ್ಲಿರುವ **ಪ್ರವೃತ್ತಿರೂಪವಾದ** ವೇದಾರ್ಥವೆಲ್ಲವನ್ನೂ ವಿವರಿಸುವದಕ್ಕೆ **ಪ್ರವರ್ಗ್ಯದವರೆಗಿನ ಬ್ರಾಹ್ಮಣವು** ಬೇಕಾಗುತ್ತದೆ. ನಿವೃತ್ತಿರೂಪವಾದ (ವೇದಾರ್ಥವನ್ನು) ವಿವರಿಸುವದಕ್ಕೆ ಇಲ್ಲಿಂದ ಮುಂದಕ್ಕಿರುವ **ಬೃಹದಾರಣ್ಯಕವು**[6] ಉಪಯೋಗವಾಗುವದು. ಹೀಗಿರುವಲ್ಲಿ ನಿಷೇಕವು ಮೊದಲಾಗಿ ಶ್ಮಶಾನದವರೆಗಿನ[7] ಕರ್ಮವನ್ನು ಮಾಡುತ್ತಾ ಬಾಳಬೇಕೆಂದೂ **ಅಪರಬ್ರಹ್ಮ ವಿಷಯವಾದ**

---

1. ಈ ವಾಕ್ಯವು ಅಚ್ಚಿನ ಪುಸ್ತಕಗಳಲ್ಲಿ ಹೀಗೆಯೇ ಇದೆ. ಸರಿಯಾಗಿ ಅನ್ವಯವೇನೋ ಆಗುತ್ತಿಲ್ಲ.

2. ಮಾನುಷವಿತ್ತವೆಂದರೆ ಕರ್ಮ, ದೈವವಿತ್ತವೆಂದರೆ ಉಪಾಸನೆ. ಬೃ. ಭಾ. ೧-೪-೧೭ ನೋಡಿರಿ.

3. ಮನು. ೧೨-೫೦ರಲ್ಲಿ ಉತ್ತಮಸಾತ್ವಿಕಗತಿಯನ್ನು ಹೇಳುವ ಪ್ರಸಂಗದಲ್ಲಿ 'ಅವ್ಯಕ್ತ'ವೆಂಬ ಹೆಸರಿನಿಂದ ಪ್ರಕೃತಿಲಯವನ್ನು ಹೇಳಿರುತ್ತದೆ. ಸಂಸಾರಗತಿಯ ಕೊನೆಯನ್ನು ವಿವರಿಸುವ ಮುಂ. ೧-೨-೧೨, ಬೃ. ೩-೨-೧೩ ೩-೩-೧ ಭಾಷ್ಯವಾಕ್ಯಗಳನ್ನು ನೋಡಿರಿ.

4. ಸರ್ವಾತ್ಮಭಾವವು ನಿತ್ಯಸಿದ್ಧವಾಗಿದೆಯಾದರೂ ಜ್ಞಾನನಿಷ್ಠೆಯ ಹೊರತು ಅದರ ಅಪರೋಕ್ಷವಾದ ಅರಿವಾಗುವದಿಲ್ಲವಾದ್ದರಿಂದ ಅದನ್ನು ಫಲವೆಂದು ಉಪಚಾರಕ್ಕೆ ಕರೆದಿರುತ್ತದೆ.

5. ಇದುವರೆಗಿನ ಅಧ್ಯಾಯಗಳಲ್ಲಿ ಕರ್ಮವನ್ನೇ ಹೇಳಿರುತ್ತದೆಯಾದರೂ ಈ ನಲವತ್ತನೆಯ ಅಧ್ಯಾಯದಲ್ಲಿ ಕರ್ಮ, ಉಪಾಸನೆ, ಜ್ಞಾನ- ಎಲ್ಲವನ್ನೂ ಹೇಳಿರುತ್ತದೆ. ಕರ್ಮೋಪಾಸನೆಗಳೆರಡೂ ಪ್ರವೃತ್ತಿಧರ್ಮದಲ್ಲಿ ಸೇರಿರುತ್ತವೆ. ಜ್ಞಾನವು ನಿವೃತ್ತಿಧರ್ಮವು.

6. ಈ ವೇದಕ್ಕೆ ಸೇರಿದ ಶತಪಥಬ್ರಾಹ್ಮಣದಲ್ಲಿ 'ಏಕಪಾತ್' ಮುಂತಾಗಿ 'ಪ್ರವರ್ಗ್ಯ'ವೆಂಬವರೆಗೆ ಹದಿನಾರು ಕಾಂಡಗಳಿವೆ. ಪ್ರವರ್ಗ್ಯದ ಎರಡು ಅಧ್ಯಾಯಗಳು ಮುಗಿಯುವವರೆಗೆ ವಿಧಿಪ್ರತಿಷೇಧರೂಪವಾದ ಧರ್ಮವನ್ನೇ ಹೇಳಿರುತ್ತದೆ. ಪ್ರವರ್ಗ್ಯದ ಮೂರನೆಯ ಅಧ್ಯಾಯವು ಬೃಹದಾರಣ್ಯಕೋಪನಿಷತ್ತಿನ ಮೊದಲನೆಯ ಅಧ್ಯಾಯವು; ಆ ಉಪನಿಷತ್ತಿನಲ್ಲಿ ನಿವೃತ್ತಿಧರ್ಮವನ್ನು ಹೇಳಿರುತ್ತದೆ.

7. ಗರ್ಭಾಧಾನದಿಂದ ಅಂತ್ಯೇಷ್ಟಿಯವರೆಗಿನ. ಮನು. ೨-೧೬

ವಿದ್ಯೆಯೊಡನೆ[1] (ಆ ಕರ್ಮವನ್ನು ಮಾಡಿಕೊಂಡಿರಬೇಕೆಂದೂ) ಯಾವನು ಬಯಸುವನೋ ಅವನ ವಿಷಯದಲ್ಲಿ[2] ''ವಿದ್ಯೆಯನ್ನೂ ಅವಿದ್ಯೆಯನ್ನೂ ಆ ಎರಡನ್ನೂ ಸೇರಿಸಿ ಯಾವಾತನು ಅರಿಯುತ್ತಾನೋ (ಆತನು) ಅವಿದ್ಯೆಯಿಂದ ಮೃತ್ಯುವನ್ನು ದಾಟಿ ವಿದ್ಯೆಯಿಂದ ಅಮೃತವನ್ನು ಪಡೆಯುವನು'' ಎಂದು ಹೇಳಿದ್ದಾಯಿತು. ಅಲ್ಲಿ ಯಾವ ಮಾರ್ಗದಿಂದ[3] ಅಮೃತತ್ವವನ್ನು ಪಡೆಯುವನು ? - ಎಂಬುದನ್ನು ಈಗ ಹೇಳುತ್ತಾರೆ.

(ಭಾಷ್ಯ)

೩೪. ''ತದ್ಯತ್ ತತ್ ಸತ್ಯಮಸೌ ಸ ಆದಿತ್ಯೋ ಯ ಏಷ ಏತಸ್ಮಿನ್ ಮಣ್ಡಲೇ ಪುರುಷೋ ಯಶ್ಚಾಯಂ ದಕ್ಷಿಣೇಽಕ್ಷನ್ ಪುರುಷಃ'' (ಬೃ. ೫-೫-೨) ಏತದುಭಯಂ ಸತ್ಯಂ ಬ್ರಹ್ಮ ಉಪಾಸೀನೋ ಯಥೋಕ್ತಕರ್ಮಕೃಚ್ಚ ಯಃ, ಸೋಽನ್ತಕಾಲೇ ಪ್ರಾಪ್ತೇ ಸತ್ಯಾತ್ಮಾನಮ್ ಆತ್ಮನಃ ಪ್ರಾಪ್ತಿದ್ವಾರಂ ಯಾಚತೇ-

(ಭಾಷ್ಯಾರ್ಥ)

''ಆ ಸತ್ಯವೆಂಬುದು ಈ ಮಂಡಲದಲ್ಲಿರುವ ಪುರುಷನಿದ್ದಾನಲ್ಲ, ಆ ಆದಿತ್ಯನೇ; ಮತ್ತು ಈ ಬಲಗಣ್ಣಿನಲ್ಲಿರುವ ಪುರುಷನಿದ್ದಾನಲ್ಲ (ಅವನೇ)'' ಈ ಎರಡು (ಬಗೆಯಾದ) ಸತ್ಯವೆಂಬ[4] ಬ್ರಹ್ಮವನ್ನು ಉಪಾಸನೆಮಾಡುತ್ತಾ (ಶಾಸ್ತ್ರದಲ್ಲಿ) ಹೇಳಿರುವಂತೆ ಕರ್ಮವನ್ನು ಮಾಡುತ್ತಾ ಇರುವವನು ಯಾರೋ ಆತನು ಮರಣಕಾಲವು ಒದಗಲಾಗಿ ಆತ್ಮನನ್ನು ಪಡೆಯುವದಕ್ಕೆ ದ್ವಾರವನ್ನು (ಕೊಡಬೇಕೆಂದು) ಸತ್ಯಾತ್ಮನನ್ನು (ಈ ರೀತಿಯಲ್ಲಿ) ಪ್ರಾರ್ಥಿಸುತ್ತಾನೆ :-

**ಹಿರಣ್ಮಯೇನ ಪಾತ್ರೇಣ**
**ಸತ್ಯಸ್ಯಾಪಿಹಿತಂ ಮುಖಮ್ ।**
**ತತ್ ತ್ವಂ ಪೂಷನ್ನಪಾವೃಣು**
**ಸತ್ಯಧರ್ಮಾಯ ದೃಷ್ಟಯೇ ॥೧೫॥**

೧೫. ಹಿರಣ್ಮಯವಾದ ಪಾತ್ರೆಯಿಂದ ಸತ್ಯದ ಮುಖವು ಮುಚ್ಚಿರುತ್ತದೆ. ಅದನ್ನು ಎಲೈ ಪೂಷನೆ, ಸತ್ಯಧರ್ಮನಾದ ನನಗೆ (ಸತ್ಯವು) ಕಾಣುವದಕ್ಕಾಗಿ ತೆರೆಯುವವನಾಗು.

---

1. ಹಿರಣ್ಯಗರ್ಭನ ಉಪಾಸನೆಯೊಡನೆ 2. ತತ್ ತಸ್ಮಿನ್ ವಿಷಯೇ

3. ಉಪಾಸನೆಯಲ್ಲಿ ಧ್ಯೇಯವಾದ ದೇವತೆಯನ್ನೇ ಅಲ್ಲದೆ ಆ ದೇವತೆಯನ್ನು ಪಡೆಯುವದಕ್ಕೆ ಸತ್ತಬಳಿಕ ಅನುಸರಿಸಬೇಕಾದ ಮಾರ್ಗವನ್ನೂ ಧ್ಯಾನಿಸಬೇಕಾಗುವದು.

4. ಸಮಷ್ಟಿಹೃದಯ (ಬುದ್ಧಿ)ವನ್ನು ಸತ್ಯಬ್ರಹ್ಮವೆಂದು ಉಪಾಸನೆಮಾಡಬೇಕೆಂದು ಹೇಳುವದಕ್ಕೆ ಪ್ರಾರಂಭಿಸಿ ಸತ್ಯಬ್ರಹ್ಮವು ಸೂರ್ಯಮಂಡಲದಲ್ಲಿಯೂ ಪುರುಷನ ಬಲಗಣ್ಣಿನಲ್ಲಿಯೂ ಇದೆ ಎಂದು ಉಪಾಸನೆಮಾಡಬೇಕೆಂದು ಬೃಹದಾರಣ್ಯಕದಲ್ಲಿ ವಿಧಿಸಿದೆ. ಅಧ್ಯಾತ್ಮ, ಅಧಿದೈವತ-ಹೀಗೆ ಎರಡು ರೂಪದಿಂದಿರುವ ಈ ಸತ್ಯಬ್ರಹ್ಮವನ್ನು.

(ಭಾಷ್ಯ)

೩೫. ಹಿರಣ್ಮಯೇನ ಪಾತ್ರೇಣ । ಹಿರಣ್ಮಯಮಿವ ಹಿರಣ್ಮಯಮ್, ಜ್ಯೋತಿರ್ಮಯಮ್ ಇತ್ಯೇತತ್ । ತೇನ ಪಾತ್ರೇಣೇವ ಅಪಿಧಾನಭೂತೇನ ಸತ್ಯಸ್ಯ ಆದಿತ್ಯಮಣ್ಡಲಸ್ಥಸ್ಯ ಬ್ರಹ್ಮಣಃ ಅಪಿಹಿತಮ್ ಆಚ್ಛಾದಿತಂ ಮುಖಂ ದ್ವಾರಮ್ । ತತ್ ತ್ವಂ ಹೇ ಪೂಷನ್, ಅಪಾವೃಣು ಅಪಸಾರಯ । ಸತ್ಯಧರ್ಮಾಯ । ತವ ಸತ್ಯಸ್ಯ ಉಪಾಸನಾತ್ ಸತ್ಯಂ ಧರ್ಮೋ ಯಸ್ಯ ಮಮ ಸೋಽಹಂ ಸತ್ಯಧರ್ಮಾ, ತಸ್ಮೈ ಮಹ್ಯಮ್ । ಅಥವಾ ಯಥಾಭೂತಸ್ಯ ಧರ್ಮಸ್ಯ ಅನುಷ್ಠಾತ್ರೇ ದೃಷ್ಟಯೇ ತವ ಸತ್ಯಾತ್ಮನ ಉಪಲಬ್ಧಯೇ ॥

(ಭಾಷ್ಯಾರ್ಥ)

ಹಿರಣ್ಮಯವಾದ ಪಾತ್ರೆಯಿಂದ; ಹಿರಣ್ಮಯವೆಂದರೆ ''ಚಿನ್ನದಿಂದಾಗಿರುವಂತೆ ಇರುವದು, ಪ್ರಕಾಶಮಯವಾದದ್ದು[1] ಎಂದರ್ಥ. ಪಾತ್ರೆಯಂತೆ ಮರೆಯಾಗಿರುವ ಅದರಿಂದ ಆದಿತ್ಯಮಂಡಲದಲ್ಲಿರುವ ಸತ್ಯಬ್ರಹ್ಮದ ಮುಖವು ಎಂದರೆ ದ್ವಾರವು ಮುಚ್ಚಿರುತ್ತದೆ, ಹೊದಿಸಲ್ಪಟ್ಟಿರುತ್ತದೆ.[2] ಅದನ್ನು ನೀನು ಎಲೈ ಪೂಷನೆ, ತೆರೆಯುವವನಾಗು, (ತೆಗೆದು) ಅತ್ತ ಸರಿಯಿಸುವವನಾಗು. ಸತ್ಯಧರ್ಮನಾದ (ನನಗೆ) ಸತ್ಯನಾಗಿರುವ ನಿನ್ನನ್ನು ಉಪಾಸನೆಮಾಡುತ್ತಿರುವದರಿಂದ ಸತ್ಯವೇ ಧರ್ಮವಾಗುಳ್ಳವನು ನಾನು; ಅಂಥ ನನಗೆ ಅಥವಾ ಸತ್ಯವಾಗಿರುವ[3] ಧರ್ಮವನ್ನು ಅನುಷ್ಠಾನಮಾಡುತ್ತಿರುವ ನನಗೆ. ಕಾಣುವದಕ್ಕೋಸ್ಕರ, ಎಂದರೆ (ನಾನು) ಸತ್ಯಾತ್ಮನಾದ ನಿನ್ನನ್ನು ಕಾಣುವದಕ್ಕೋಸ್ಕರ (ಮುಚ್ಚಳವನ್ನು ತೆರೆಯುವವನಾಗು). ॥೧೫॥

**ಪೂಷನ್ನೇಕರ್ಷೇ ಯಮ ಸೂರ್ಯ ಪ್ರಾಜಾಪತ್ಯ**
**ವ್ಯೂಹ ರಶ್ಮೀನ್ । ಸಮೂಹ ತೇಜೋ ಯತ್ತೇ**
**ರೂಪಂ ಕಲ್ಯಾಣತಮಂ ತತ್ತೇ ಪಶ್ಯಾಮಿ ।**
**ಯೋಽಸಾವಸೌ ಪುರುಷಃ ಸೋಽಹಮಸ್ಮಿ ॥೧೬॥**

---

1. ಸೂರ್ಯಮಂಡಲವು ಚಿನ್ನದಿಂದಾಗಿರುವಂತೆ ಥಳಥಳಿಸುತ್ತಿರುವದು.

2. ಸೂರ್ಯಮಂಡಲದ ಕಿರಣಗಳು ಅದರಲ್ಲಿರುವ ಸತ್ಯಬ್ರಹ್ಮವನ್ನು ಕಾಣದಂತೆ ಮುಚ್ಚಿರುತ್ತವೆ. ಇಲ್ಲಿ ಮಂಡಲವೇ ಮುಚ್ಚಳವಾದ ಪಾತ್ರೆ; ಸತ್ಯಬ್ರಹ್ಮವೇ ಅದರೊಳಗೆ ಅಡಗಿರುವ ನಮಗೆ ಇಷ್ಟವಾದ ವಸ್ತು.

3. ಸತ್ಯಬ್ರಹ್ಮದಲ್ಲಿ ವ್ರತದಿಂದ ಉಪಾಸನೆಮಾಡುವವನು ಸತ್ಯಧರ್ಮನು ಎಂದು ಮೊದಲನೆಯ ಅರ್ಥ; ಸತ್ಯವಾದ ಎಂದರೆ ಅವಶ್ಯವಾಗಿ ಫಲವನ್ನು ಕೊಡುವ ಕರ್ಮೋಪಾಸನೆಗಳನ್ನು ಅನುಷ್ಠಾನಮಾಡುತ್ತಿರುವವನು ಎಂದು ಈಗಿನ ಅರ್ಥ. ಇಲ್ಲಿ ಸೂರ್ಯದ್ವಾರವೆಂಬುದು ಉತ್ತರಾಯಣ ಅಥವಾ ದೇವಯಾನಮಾರ್ಗಕ್ಕೆ ಉಪಲಕ್ಷಣ. ಮುಂ. ಭಾ. ೧-೨-೧೧ ನೋಡಿ.

೧೬. ಪೂಷನೆ, ಏಕರ್ಷಿಯೆ, ಯಮನೆ, ಸೂರ್ಯನೆ. ಪ್ರಾಜಾಪತ್ಯನೆ, ಕಿರಣಗಳನ್ನು ಹೋಗಲಾಡಿಸು; ತೇಜಸ್ಸನ್ನು ಕೂಡಿಸು; ನಿನ್ನ ಕಲ್ಯಾಣತಮವಾದ ರೂಪವು ಯಾವದುಂಟೋ ಆ ನಿನ್ನ (ರೂಪವನ್ನು) ನೋಡುವೆನು. ಆ ಪುರುಷನು ಯಾವನೋ ಅವನೇ ನಾನಾಗಿರುವೆನು.

(ಭಾಷ್ಯ)

೩೬. ಹೇ ಪೂಷನ್ ಜಗತಃ ಪೋಷಣಾತ್ ಪೂಷಾ ರವಿಃ । ತಥಾ ಏಕ ಏವ ಋಷತಿ ಗಚ್ಛತೀತಿ ಏಕರ್ಷಿಃ; ಹೇ ಏಕರ್ಷೇ । ತಥಾ ಸರ್ವಸ್ಯ ಸಂಯಮನಾತ್ ಯಮಃ; ಹೇ ಯಮ । ತಥಾ ರಶ್ಮೀನಾಂ ಪ್ರಾಣಾನಾಂ ರಸಾನಾಂ ಚ ಸ್ವೀಕರಣಾತ್ ಸೂರ್ಯಃ; ಹೇ ಸೂರ್ಯ । ಪ್ರಜಾಪತೇರಪತ್ಯಂ ಪ್ರಾಜಾಪತ್ಯಃ; ಹೇ ಪ್ರಾಜಾಪತ್ಯ । ವ್ಯೂಹ ವಿಗಮಯ ರಶ್ಮೀನ್ ಸ್ವಾನ್ । ಸಮೂಹ ಏಕೀಕುರು । ಉಪಸಂಹರ ತೇಜಃ ತಾಪಕಂ ಜ್ಯೋತಿಃ । ಯತ್ ತೇ ತವ ರೂಪಂ ಕಲ್ಯಾಣತಮಮ್ ಅತ್ಯನ್ತಶೋಭನಂ ತತ್ ತೇ ತವಾತ್ಮನಃ ಪ್ರಸಾದಾತ್ ಪಶ್ಯಾಮಿ । ಕಿಂ ಚ ಅಹಂ ನ ತು ತ್ವಾಂ ಭೃತ್ಯವತ್ ಯಾಚೇ । ಯೋಽಸೌ ಆದಿತ್ಯ ಮಣ್ಡಲಸ್ಥಃ ವ್ಯಾಹೃತ್ಯವಯವಃ ಪ್ರ[illegible]ಷಃ ಪುರುಷಾಕಾರತ್ವಾತ್ । ಪೂರ್ಣಂ ವಾ ಅನೇನ ಪ್ರಾಣಬುದ್ಧ್ಯಾತ್ಮನಾ ಜಗತ್ ಸಮಸ್ತಮಿತಿ ಪುರುಷಃ । ಪುರಿ ಶಯನಾದ್ವಾ ಪುರುಷಃ । ಸಃ ಅಹಮ್ ಅಸ್ಮಿ ಭವಾಮಿ ॥

(ಭಾಷ್ಯಾರ್ಥ)

'ಎಲೈ ಪೂಷನೆ', ಜಗತ್ತನ್ನು ಪೋಷಿಸುವದರಿಂದ ಸೂರ್ಯನಿಗೆ **ಪೂಷನೆಂದು** ಹೆಸರು ಮತ್ತು ಒಬ್ಬನೇ ಋಷತಿ ನಡೆಯುತ್ತಾನೆ. ಆದ್ದರಿಂದ (ಅವನು) **ಏಕರ್ಷಿಯು;** ಆದ್ದರಿಂದ ಎಲೈ **ಏಕರ್ಷಿಯೆ** (ಎಂದು ಕರೆದಿದೆ). ಹಾಗೂ ಎಲ್ಲವನ್ನೂ ತಡೆಯಲ್ಲಿಟ್ಟುಕೊಂಡಿರುವದರಿಂದ **ಯಮನು;** (ಆದ್ದರಿಂದ) ಎಲೈ ಯಮನೆ, (ಎಂದು ಕರೆದಿದೆ). ರಶ್ಮಿಗಳನ್ನೂ ಪ್ರಾಣಗಳನ್ನೂ ರಸಗಳನ್ನೂ ಸ್ವೀಕರಿಸುವದರಿಂದ ಅವನು **ಸೂರ್ಯನು;** (ಆದ್ದರಿಂದ) ಎಲೈ ಸೂರ್ಯನೆ (ಎಂದು ಕರೆದಿದೆ). ಪ್ರಜಾಪತಿಯ ಮಗನಾದ್ದರಿಂದ ಇವನು **ಪ್ರಾಜಾಪತ್ಯನು;** (ಆದ್ದರಿಂದ) ಎಲೈ ಪ್ರಾಜಾಪತ್ಯನೆ, (ಎಂದು ಕರೆದಿದೆ). ನಿನ್ನ ಕಿರಣಗಳನ್ನು ಹೋಗಲಾಡಿಸು, ಅತ್ತ ತೊಲಗಿಸು. ತೇಜಸ್ಸನ್ನು ಎಂದರೆ ಸುಡುವ ನಿನ್ನ ಬೆಳಕನ್ನು ಕೂಡಿಸು, ಒಕ್ಕಡೆಗೆ ತರುವವನಾಗು, ಹಿಂದಕ್ಕೆಳೆದುಕೊ. ನಿನ್ನ ಕಲ್ಯಾಣತಮವಾದ ಎಂದರೆ ಅತ್ಯಂತ ಸುಂದರವಾದ ನಿನ್ನ ರೂಪವು ಯಾವದುಂಟೋ ಅದನ್ನು ಆತ್ಮನಾದ ನಿನ್ನ ಪ್ರಸಾದದಿಂದ ನೋಡುವೆನು. ಮತ್ತು ನಾನು ನಿನ್ನನ್ನು ಸೇವಕನಂತೆ ಯಾಚಿಸುತ್ತಿರುವದಿಲ್ಲ. ಆದಿತ್ಯಮಂಡಲದಲ್ಲಿರುವ ಆ (ಪುರುಷನುಂಟಲ್ಲ),

ಆ ವ್ಯಾಹೃತಿಗಳೆಂಬ ಅವಯವಗಳುಳ್ಳ[1] ಪುರುಷನುಂಟಲ್ಲ - ಪುರುಷನ ಆಕಾರದಿಂದಿರು-ವದರಿಂದಲೋ[2] ಜಗತ್ತೆಲ್ಲವೂ ಪ್ರಾಣಬುದ್ಧಿಗಳ ರೂಪದಿಂದ[3] ಈತನಿಂದ ಪೂರ್ಣವಾಗಿರುವದರಿಂದಲೋ ಇವನು ಪುರುಷನೆನಿಸಿರುವನು. ಪುರದಲ್ಲಿದ್ದು[4] ಕೊಂಡಿರುವವರಿಂದಲಾದರೂ (ಇವನು) ಪುರುಷನು. (ಇಂಥ ಪುರುಷನುಂಟಲ್ಲ) - ಅವನು ನಾನಾಗಿರುವೆನು. ॥೧೬॥

ವಾಯುರನಿಲಮಮೃತ-
ಮಥೇದಂ ಭಸ್ಮಾನ್ತಗ್ಂ ಶರೀರಮ್ ।
ಓಂ ಕ್ರತೋ ಸ್ಮರ ಕೃತಗ್ಂ ಸ್ಮರ
ಕ್ರತೋ ಸ್ಮರ ಕೃತಗ್ಂ ಸ್ಮರ ॥೧೭॥

೧೭. ವಾಯುವು ಸಾವಿಲ್ಲದ ಅನಿಲನನ್ನು (ಸೇರಲಿ); ಆಮೇಲೆ ಈ ಶರೀರವು ಭಸ್ಮಾಂತ (ವಾಗಲಿ) ! ಓಂ ಕ್ರತುವೆ ಸ್ಮರಿಸು, ಮಾಡಿರುವದನ್ನು ಸ್ಮರಿಸು. ಕ್ರತುವೆ ಸ್ಮರಿಸು, ಮಾಡಿರುವದನ್ನು ಸ್ಮರಿಸು

## (ಭಾಷ್ಯ)

೩೭. ಅಥ ಇದಾನೀಂ ಮಮ ಮರಿಷ್ಯತೋ ವಾಯುಃ ಪ್ರಾಣಃ ಅಧ್ಯಾತ್ಮ ಪರಿಚ್ಛೇದಂ ಹಿತ್ವಾ ಅಧಿದೈವತಾತ್ಮಾನಂ ಸರ್ವಾತ್ಮಕಮ್ ಅನಿಲಮ್ ಅಮೃತಂ ಸೂತ್ರಾತ್ಮಾನಂ 'ಪ್ರತಿಪದ್ಯತಾಮ್' ಇತಿ ವಾಕ್ಯಶೇಷಃ । 'ಲಿಙ್ಗಂ ಚೇದಂ ಜ್ಞಾನ-ಕರ್ಮಸಂಸ್ಕೃತಮ್ ಉತ್ಕ್ರಾಮತು' ಇತಿ ದ್ರಷ್ಟವ್ಯಮ್ । ಮಾರ್ಗಯಾಚನಸಾಮರ್ಥ್ಯಾತ್ । ಅಥ ಇದಂ ಶರೀರಮ್ ಅಗ್ನೌ ಹುತಂ ಭಸ್ಮಾನ್ತಂ ಭಸ್ಮಾವಶೇಷಂ ಭೂಯಾತ್ । 'ಓಂ' ಇತಿ ಯಥೋಪಾಸನಮ್ ಓಂಪ್ರತೀಕಾತ್ಮಕತ್ವಾತ್ ಸತ್ಯಾತ್ಮಕಮ್ ಅಗ್ನ್ಯಾಖ್ಯಂ ಬ್ರಹ್ಮ

---

1. ಮೊದಲನೆಯ ಅಸೌ (ಆ) ಎಂಬ ಮಾತಿಗೆ ಆದಿತ್ಯಮಂಡಲದಲ್ಲಿರುವ ಎಂದರ್ಥ. ಎರಡನೆಯ ಅಸೌ ಎಂಬುದಕ್ಕೆ ವ್ಯಾಹೃತಿಗಳೆಂಬ ಅವಯವಗಳುಳ್ಳವನೆಂದು ಪ್ರಸಿದ್ಧನಾದ ಎಂದರ್ಥ. ಭೂಃ ಎಂಬುದು ಶಿರಸ್ಸು, ಭುವಃ ಎಂಬುದು ಬಾಹುಗಳು, ಸ್ವಃ ಎಂಬುದು ಪಾದಗಳು. ಬೃ. ೫-೫-೨, ೪ ನೋಡಿರಿ.

2. ಬಾಹ್ಯಪುರುಷನು ಯಾವ ಆಕಾರವೋ ಅದರಿಂದ ಪರಿಚ್ಛಿನ್ನವಾದ ಲಿಂಗ ಶರೀರವೂ ಅದೇ ಆಕಾರವೇ.

3. ಕ್ರಿಯಾಶಕ್ತಿ, ಜ್ಞಾನಶಕ್ತಿ-ಇವೆರಡೂ ಹಿರಣ್ಯಗರ್ಭನಿಗೆ ಸೇರಿದವು. ಮುಂ. ಭಾ. ೧-೧-೮ ನೋಡಿ.

4. ಶರೀರವೆಂಬ ಪುರದಲ್ಲಿ ಹೃದಯದಲ್ಲಿರುವಾತನು ಬೃ. ೫-೬-೧. ಈ ಮಂತ್ರವನ್ನೂ ಮುಂದಿನ ಎರಡು ಮಂತ್ರಗಳನ್ನೂ ಬೃ. ೫-೧೫-೧ ರಲ್ಲಿ ವಿವರಿಸಿರುವ ರೀತಿಗೆ ಹೋಲಿಸಿ ನೋಡಿರಿ.

ಅಭೇದೇನೋಚ್ಯತೇ । ಹೇ ಕ್ರತೋ ಸಙ್ಕಲ್ಪಾತ್ಮಕ ಸ್ಮರ ಯನ್ಮಮ ಸ್ಮರ್ತವ್ಯಮ್ । ತಸ್ಯ ಕಾಲೋಽಯಂ ಪ್ರತ್ಯುಪಸ್ಥಿತಃ। ಅತಃ ಸ್ಮರ ಏತಾವನ್ತಂ ಕಾಲಂ ಭಾವಿತಮ್ । ಕೃತಮ್ ಅಗ್ನೇ ಸ್ಮರ ಯನ್ಮಯಾ ಬಾಲ್ಯಪ್ರಭೃತ್ಯನುಷ್ಠಿತಂ ಕರ್ಮ ತಚ್ಚ ಸ್ಮರ । 'ಕ್ರತೋ ಸ್ಮರ ಕೃತಂ ಸ್ಮರ' ಇತಿ ಪುನರ್ವಚನಮಾದರಾರ್ಥಮ್ ॥

(ಭಾಷ್ಯಾರ್ಥ)

ಇನ್ನು ಸಾಯುತ್ತಿರುವ ನನ್ನ ವಾಯುವು ಎಂದರೆ ಪ್ರಾಣವು ಈಗ ಅಧ್ಯಾತ್ಮದ ಕಟ್ಟಳತೆಯನ್ನು[1] ಬಿಟ್ಟು ಅಧಿದೈವತವಾಗಿರುವ ಸರ್ವಾತ್ಮನಾಗಿರುವ ಸಾವಿಲ್ಲದ ಅನಿಲನನ್ನು ಎಂದರೆ ಸೂತ್ರಾತ್ಮನನ್ನು[2] 'ಸೇರಿಕೊಳ್ಳಲಿ' ಎಂದು ವಾಕ್ಯಕ್ಕೆ ಸೇರಿಸಿ ಪೂರ್ತಿಮಾಡಿಕೊಳ್ಳಬೇಕು. ಈ ಲಿಂಗ (ಶರೀರವೂ) ಜ್ಞಾನಕರ್ಮಗಳಿಂದ[3] ಸಂಸ್ಕಾರವನ್ನು ಹೊಂದಿ (ದೇಹವನ್ನು ಬಿಟ್ಟು) ಮೇಲಕ್ಕೆ ಹೋಗಲಿ ಎಂದು ಅಧ್ಯಾಹಾರಮಾಡಿಕೊಳ್ಳಬೇಕು; (ಇಲ್ಲಿ) ಮಾರ್ಗವನ್ನು ಬೇಡಿಕೊಂಡಿರುವದರ ಸಾಮರ್ಥ್ಯದಿಂದ (ಹೀಗೆಂದು ಏರ್ಪಡುತ್ತದೆ).[4] ಇನ್ನು ಈ ಸ್ಥೂಲಶರೀರವು ಅಗ್ನಿಯಲ್ಲಿ ಹೋಮವಾಗಿ[5] ಭಸ್ಮಾಂತವಾಗಲಿ, ಬೂದಿ ಮಾತ್ರವೇ ಉಳಿಯುವದಾಗಲಿ ! ಉಪಾಸನೆಗನುಗುಣವಾಗಿ ಓಂ ಎಂಬುದೇ (ಬ್ರಹ್ಮಕ್ಕೆ ಪ್ರತೀಕವಾಗಿರುವದರಿಂದ[6] ಸತ್ಯಸ್ವರೂಪವಾಗಿರುವ ಅಗ್ನಿ ಎಂಬ ಹೆಸರಿನ ಬ್ರಹ್ಮವನ್ನು (ಓಂಕಾರವೂ ಅದೂ) ಒಂದೇ ಎಂದೆಣಿಸಿ[7] (ಓಂ ಎಂದು) ಕರೆದಿರುತ್ತದೆ. 'ಎಲೈ ಕ್ರತುವೆ,

---

1. ಶರೀರಕ್ಕೆ ಮಾತ್ರ ಕಟ್ಟುಬಿದ್ದಿರುವದನ್ನು ಬಿಟ್ಟು. ನಿಜವಾಗಿ ಇದು ಅಧಿದೈವತಕ್ಕೆ ಸೇರಿದ್ದೇ ಆದರೂ ಅಭಿಮಾನದಿಂದ ಶರೀರಕ್ಕೆ ಕಟ್ಟುಬಿದ್ದಿರುತ್ತದೆ.

2. ಹಿಂದೆ (೪ನೆಯ ಮಂತ್ರದಲ್ಲಿ) ಮಾತರಿಶ್ವನೆಂದು ಹೇಳಿದ ಕ್ರಿಯಾಪ್ರಧಾನವಾದ ಪ್ರಾಣನನ್ನು.

3. ಕರ್ಮೋಪಾಸನೆಗಳಿಂದ.

4. ಜ್ಞಾನಿಗೆ ಇಲ್ಲಿಯೇ ಬ್ರಹ್ಮಪ್ರಾಪ್ತಿಯಾಗುವದರಿಂದ ಅವನ ಪ್ರಾಣವು ಶರೀರವನ್ನು ಬಿಟ್ಟುಹೋಗುವದಿಲ್ಲ, ಆತ್ಮನಲ್ಲಿಯೇ ಅಡಗುತ್ತದೆ; ಆದರೆ ಉಪಾಸಕನು ದೇವಯಾನ ಮಾರ್ಗದ ಮೂಲಕವಾಗಿ ಬ್ರಹ್ಮಲೋಕಕ್ಕೆ ಹೋಗಿ ಫಲವನ್ನು ಪಡೆಯಬೇಕಾಗಿರುತ್ತದೆ.

5. ಸತ್ತವನ ಶರೀರವನ್ನು ಅಗ್ನಿಯಲ್ಲಿ ಹಾಕುವದೂ ಒಂದು ಬಗೆಯ ಹೋಮವು; ಅದರಿಂದಲೂ ಒಂದು ಸಂಸ್ಕಾರವಾಗುವದು. ಬೃ. 6-2-14.

6. ಓಂಕಾರವನ್ನೇ ಸತ್ಯವೆಂಬ ಹೆಸರಿನ ಬ್ರಹ್ಮವೆಂದು ಉಪಾಸನೆಮಾಡುವದರಿಂದ ಓಂಕಾರವು ಬ್ರಹ್ಮಕ್ಕೆ ಸಾಲಗ್ರಾಮವು ವಿಷ್ಣುವಿಗೆ ಗುರುತಾದಂತೆ ಗುರುತಾಗಿರುತ್ತದೆ. ಹೀಗೆ ಧ್ಯಾನಕ್ಕೆ ಸಹಾಯವಾಗಿ ಉಪಾಸ್ಯಕ್ಕೆ ಬದಲಾಗಿಟ್ಟುಕೊಂಡ ಗುರುತಿಗೆ ಪ್ರತೀಕವೆಂದು ಹೆಸರು.

7. ಪ್ರತೀಕಕ್ಕೂ ಬ್ರಹ್ಮಕ್ಕೂ ಭೇದವಿಲ್ಲವೆಂದಿಟ್ಟುಕೊಂಡು ಬ್ರಹ್ಮವನ್ನು ಓಂ; ಎಂದು ಕರೆದಿದೆ.

ಸಂಕಲ್ಪಸ್ವರೂಪನಾದ (ಅಗ್ನಿಯೆ), ನಾನು ಯಾವದನ್ನು ಸ್ಮರಿಸಬೇಕೋ ಅದನ್ನು ಸ್ಮರಿಸು.[1] ಅದಕ್ಕೆ ಈಗ ಕಾಲವು ಬಂದೊದಗಿರುತ್ತದೆ; ಆದ್ದರಿಂದ ಇಷ್ಟು ಕಾಲವೂ (ನಾನು) ಭಾವನೆಮಾಡಿರುವದನ್ನು[2] ನೆನಪಿಗೆ ತಂದುಕೊಳ್ಳುವನಾಗು. ಅಗ್ನಿಯೆ, ಬಾಲ್ಯದಿಂದಲೂ ನಾನು ಮಾಡಿದ ಕರ್ಮವು[3] ಯಾವದುಂಟೋ ಅದನ್ನೂ ನೆನಪಿಗೆ ತಂದುಕೊಳ್ಳುವನಾಗು. ಕ್ರತುವೇ ಸ್ಮರಿಸು, ಮಾಡಿದ್ದನ್ನು ಸ್ಮರಿಸು' ಎಂದು ಮತ್ತೆ ಹೇಳಿರುವದು ಆದರಕ್ಕೋಸ್ಕರ. ॥೧೭॥

(ಭಾಷ್ಯ)

೩೮. ಪುನರನ್ಯೇನ ಮನ್ತ್ರೇಣ ಮಾರ್ಗಂ ಯಾಚತೇ-

(ಭಾಷ್ಯಾರ್ಥ)

ಇನ್ನೂ ಒಂದು ಮಂತ್ರದಿಂದ ಮಾರ್ಗವನ್ನು ಕೇಳಿಕೊಳ್ಳುತ್ತಾನೆ :

**ಅಗ್ನೇ ನಯ ಸುಪಥಾ ರಾಯೇ ಅಸ್ಮಾನ್**
**ವಿಶ್ವಾನಿ ದೇವ ವಯುನಾನಿ ವಿದ್ವಾನ್ ।**
**ಯುಯೋಧ್ಯಸ್ಮಜ್ಜುಹುರಾಣಮೇನೋ**
**ಭೂಯಿಷ್ಠಾಂ ತೇ ನಮಉಕ್ತಿಂ ವಿಧೇಮ ॥೧೮॥**

೧೮. ಅಗ್ನಿಯೆ, ಧನವು ಸಿಕ್ಕುವಂತೆ ನಮ್ಮನ್ನು ಒಳ್ಳೆಯ ಮಾರ್ಗದಿಂದ ಕರೆದುಕೊಂಡು ಹೋಗುವವನಾಗು. ದೇವನೆ, (ನೀನು) ಎಲ್ಲಾ ಕರ್ಮಗಳನ್ನೂ ಬಲ್ಲವನು. ನಮ್ಮ ವಕ್ರವಾದ ಪಾಪವನ್ನು ಬಿಡಿಸು. ನಿನಗೆ ಬಹಳ ನಮಸ್ಕಾರೋಕ್ತಿಯನ್ನು ಹೇಳುತ್ತಿದ್ದೇವೆ.

(ಭಾಷ್ಯ)

೩೯. ಹೇ ಅಗ್ನೇ ನಯ ಗಮಯ ಸುಪಥಾ ಶೋಭನೇನ ಮಾರ್ಗೇಣ । ಸುಪಥಾ ಇತಿ ವಿಶೇಷಣಂ **ದಕ್ಷಿಣಮಾರ್ಗನಿವೃತ್ತ್ಯರ್ಥಮ್** । ನಿರ್ವಿಣ್ಣೋಽಹಂ ದಕ್ಷಿಣೇನ ಮಾರ್ಗೇಣ ಗತಾಗತಲಕ್ಷಣೇನ; ಅತೋ ಯಾಚೇ ತ್ವಾಂ ಪುನಃ ಪುನರ್ಗಮನಾಗಮನವರ್ಜಿತೇನ ಶೋಭನೇನ ಪಥಾ ನಯ । ರಾಯೇ ಧನಾಯ, ಕರ್ಮಫಲಭೋಗಾಯೇತ್ಯರ್ಥಃ । ಅಸ್ಮಾನ್ ಯಥೋಕ್ತಧರ್ಮಫಲವಿಶಿಷ್ಟಾನ್ । ವಿಶ್ವಾನಿ ಸರ್ವಾಣಿ ಹೇ ದೇವ ವಯುನಾನಿ

---

1. ಸಂಕಲ್ಪರೂಪನಾದ ಅಗ್ನಿಯನ್ನು ಇಲ್ಲಿ ಪ್ರಾರ್ಥಿಸಿದೆ. ಅಗ್ನಿ ಎಂಬುದೂ ಸತ್ಯಬ್ರಹ್ಮದ ಹೆಸರೇ. ಉಪಾಸಕನಿಗೆ ಮರಣಕಾಲದಲ್ಲಿಯೂ ಉಪಾಸ್ಯದ ಸ್ಮರಣೆ ಇರುವದು ಅವಶ್ಯ. ಏಕೆಂದರೆ ಕೊನೆಯ ಪ್ರತ್ಯಯದಿಂದಲೇ ಫಲಪ್ರಾಪ್ತಿಯಾಗುವದು. ಸೂ. ಭಾ. 4-1-12ನ್ನು ನೋಡಿ.

2. ಉಪಾಸನೆ ಮಾಡಿರುವದನ್ನು.

3. ಕರ್ಮಗಳಿಗೂ ಮುಂದೆ ಆಗುವ ಫಲಕ್ಕನುಗುಣವಾಗಿ ಸ್ಮರಣೆಯಾಗತಕ್ಕದ್ದು ಅವಶ್ಯ. ಸೂ. ಭಾ. 4-1-12. ಇಲ್ಲಿ ಉಪಾಸನೆಯ ಫಲವೇ ಕರ್ಮಕ್ಕೂ ಫಲ. ಸೂ. ಭಾ. 4-1-16 ನೋಡಿರಿ.

ಕರ್ಮಾಣಿ ಪ್ರಜ್ಞಾನಾನಿ ವಾ ವಿದ್ವಾನ್ ಜಾನನ್ । ಕಿಂ ಚ ಯುಯೋಧಿ ವಿಯೋಜಯ ವಿನಾಶಯ ಅಸ್ಮತ್ ಅಸ್ಮತ್ತಃ ಜುಹುರಾಣಂ ಕುಟಿಲಂ ವಞ್ಚನಾತ್ಮಕಮ್ ಏನಃ ಪಾಪಮ್ । ತತೋ ವಯಂ ವಿಶುದ್ಧಾಃ ಸನ್ತಃ ಇಷ್ಟಂ ಪ್ರಾಪ್ಸ್ಯಾಮ ಇತ್ಯಭಿಪ್ರಾಯಃ । ಕಿಂ ತು ವಯಮಿದಾನೀಂ ತೇ ನ ಶಕ್ನುಮಃ ಪರಿಚರ್ಯಾಂ ಕರ್ತುಮ್ । ಭೂಯಿಷ್ಠಾಂ ಬಹುತರಾಮ್ ತೇ ತುಭ್ಯಂ ನಮಉಕ್ತಿಂ ನಮಸ್ಕಾರವಚನಂ ವಿಧೇಮ । ನಮಸ್ಕಾರೇಣ ಪರಿಚರೇಮ ಇತ್ಯರ್ಥಃ ॥

(ಭಾಷ್ಯಾರ್ಥ)

ಎಲೈ ಅಗ್ನಿಯೆ, (ನಮ್ಮನ್ನು) ಸುಪಥಾ ಎಂದರೆ ಒಳ್ಳೆಯ ಮಾರ್ಗದಿಂದ ಕರೆದುಕೊಂಡು ಹೋಗು. (ಇಲ್ಲಿ) 'ಒಳ್ಳೆಯ ಮಾರ್ಗದಿಂದ' ಎಂಬ ವಿಶೇಷಣವನ್ನು (ಕೊಟ್ಟಿರುವದು) ದಕ್ಷಿಣಮಾರ್ಗ(ದಿಂದ) ಅಲ್ಲವೆಂದು ತಿಳಿಸುವದಕ್ಕೆ. (ಮತ್ತೆ ಮತ್ತೆ) ಹೋಗುತ್ತಲೂ ಬರುತ್ತಲೂ ಇರುವ ದಕ್ಷಿಣಮಾರ್ಗದಲ್ಲಿ[1] ನಾನು ಬೇಸತ್ತಿರುವೆನು. ಆದ್ದರಿಂದ ನಿನ್ನನ್ನು ಬೇಡಿಕೊಳ್ಳುತ್ತಿದ್ದೇನೆ, ಮತ್ತೆ ಮತ್ತೆ ಹೋಗಿಬರುವದಿಲ್ಲದ ಒಳ್ಳೆಯ ಮಾರ್ಗದಿಂದ[2] ಕರೆದುಕೊಂಡುಹೋಗು. (ಮೂಲದಲ್ಲಿರುವ) ರಾಯೇ ಎಂಬ ಮಾತಿಗೆ ಧನಕ್ಕೆ (ಎಂದರ್ಥ); ಕರ್ಮಗಳ ಫಲವನ್ನು ಅನುಭವಿಸುವದಕ್ಕಾಗಿ ಎಂದರ್ಥ. ನಮ್ಮನ್ನು ಎಂದರೆ ಹಿಂದೆ ಹೇಳಿದ ಧರ್ಮಫಲದಿಂದ[3] ಕೂಡಿರುವ (ನಮ್ಮನ್ನು ಕರೆದುಕೊಂಡು ಹೋಗು). ಎಲೈ ದೇವನೆ, (ನೀನು) ಎಲ್ಲಾ ಕರ್ಮಗಳನ್ನೂ ಅಥವಾ ಜ್ಞಾನಗಳನ್ನೂ ತಿಳಿದಿರುವವನು. ಮತ್ತು ವಕ್ರವಾದ ಎಂದರೆ ಡೊಂಕಾಗಿರುವ ಮೋಸಗಾರಿಕೆಯ ಏನಃ ಎಂದರೆ ಪಾಪವನ್ನು[4] ನಮ್ಮಿಂದ ಎಂದರೆ ನಮ್ಮನ್ನು ಬಿಟ್ಟುಹೋಗುವಂತೆ 'ಯುಯೋಧಿ' ಎಂದರೆ ಬಿಡಿಸು, ನಾಶಮಾಡು. ಆಮೇಲೆ ನಾವು ವಿಶುದ್ಧರಾಗಿ ಇಷ್ಟವಾದ (ಗತಿಯನ್ನು) ಪಡೆಯುವೆವು ಎಂದಭಿಪ್ರಾಯ. ಆದರೆ ನಾವು ಈಗ ನಿನಗೆ ಸೇವೆಯನ್ನು ಮಾಡಲು ಶಕ್ತರಾಗಿರುವದಿಲ್ಲ; (ಆದ್ದರಿಂದ) ಬಹಳವಾಗಿ ಎಂದರೆ ಬಲು ಹೆಚ್ಚಾಗಿ ನಿನಗೆ ನಮಉಕ್ತಿಯನ್ನು ಎಂದರೆ ನಮಸ್ಕಾರೋಕ್ತಿಯನ್ನು ಹೇಳುತ್ತಿದ್ದೇವೆ. ನಮಸ್ಕಾರದಿಂದಲೇ ಸೇವೆಯನ್ನು ಮಾಡುತ್ತೇವೆ ಎಂದರ್ಥ. ॥೧೮॥

1. ಬರಿಯ ಕರ್ಮವನ್ನು ಮಾಡಿದವರು ಹೋಗುವ ಮಾರ್ಗಕ್ಕೆ ದಕ್ಷಿಣಮಾರ್ಗ ಅಥವಾ ಧೂಮಮಾರ್ಗವೆಂದು ಹೆಸರು. ಇದನ್ನು ಛಾಂ. 5-10-3, ಬೃ. 6-2-16ರಲ್ಲಿ ವರ್ಣಿಸಿದೆ.

2. ಉಪಾಸಕನು ಹೋಗುವ ಉತ್ತರಮಾರ್ಗ ಛಾ. 5-10-1,2; ಬೃ 6-2-15.

3. ಸತ್ಯಧರ್ಮದಿಂದ, ಸತ್ಯವೆಂಬ ಬ್ರಹ್ಮದ ಉಪಾಸನೆಯಿಂದ.

4. ಉಪಾಸನೆಯಿಂದ ಪಾಪವೂ ಕಾಮ್ಯಕರ್ಮದ ಪುಣ್ಯವೂ ಎರಡೂ ನಾಶವಾಗುತ್ತವೆ. ಎರಡನ್ನೂ ಇಲ್ಲಿ ಪಾಪವೆಂದೇ ಕರೆದಿದೆ. ಸೂ. ಭಾ. ೪-೧-೧೩, ೧೪

## ಸಮುಚ್ಚಯವಿಷಯದಲ್ಲಿ ಚರ್ಚೆ

(ಭಾಷ್ಯ)

೪೦. "ಅವಿದ್ಯಯಾ ಮೃತ್ಯುಂ ತೀರ್ತ್ವಾ ವಿದ್ಯಯಾಽಮೃತಮಶ್ನುತೇ" (೧೧), "ವಿನಾಶೇನ ಮೃತ್ಯುಂ ತೀರ್ತ್ವಾ ಅಸಮ್ಭೂತ್ಯಾಽಮೃತಮಶ್ನುತೇ" (೧೪)- ಇತಿ ಶ್ರುತ್ವಾ ಕೇಚಿತ್ ಸಂಶಯಂ ಕುರ್ವನ್ತಿ । ಅತಸ್ತನ್ನಿರಾಕರಣಾರ್ಥಂ ಸಂಕ್ಷೇಪತೋ ವಿಚಾರಣಾಂ ಕರಿಷ್ಯಾಮಃ ॥

(ಭಾಷ್ಯಾರ್ಥ)

"ಅವಿದ್ಯೆಯಿಂದ ಮೃತ್ಯುವನ್ನು ದಾಟಿ ವಿದ್ಯೆಯಿಂದ ಅಮೃತವನ್ನು ಪಡೆಯುವನು", 'ವಿನಾಶದಿಂದ ಮೃತ್ಯುವನ್ನು ದಾಟಿ ಅಸಂಭೂತಿಯಿಂದ ಅಮೃತವನ್ನು ಪಡೆಯುವನು" ಎಂಬ ಶ್ರುತಿಯನ್ನು ಕೇಳಿ ಕೆಲವರಿಗೆ ಸಂಶಯವಾಗುತ್ತದೆ. ಆದ್ದರಿಂದ ಅದನ್ನು ಹೋಗಲಾಡಿಸುವದಕ್ಕಾಗಿ ಸಂಕ್ಷೇಪವಾಗಿ ವಿಚಾರವನ್ನು ಮಾಡುವೆವು.

(ಭಾಷ್ಯ)

೪೧. ತತ್ರ ತಾವತ್ ಕಿಂನಿಮಿತ್ತಃ ಸಂಶಯ ಇತಿ ? ಉಚ್ಯತೇ । ವಿದ್ಯಾಶಬ್ದೇನ ಮುಖ್ಯಾ ಪರಮಾತ್ಮವಿದ್ಯೈವ ಕಸ್ಮಾನ್ನ ಗೃಹ್ಯತೇ ? ಅಮೃತತ್ವಂ ಚ ? ನನು ಉಕ್ತಾಯಾಃ ಪರಮಾತ್ಮವಿದ್ಯಾಯಾಃ ಕರ್ಮಣಶ್ಚ ವಿರೋಧಾತ್ ಸಮುಚ್ಚಯಾನುಪಪತ್ತಿಃ । ಸತ್ಯಮ್, ವಿರೋಧಸ್ತು ನಾವಗಮ್ಯತೇ, ವಿರೋಧಾವಿರೋಧಯೋಃ ಶಾಸ್ತ್ರಪ್ರಮಾಣಕತ್ವಾತ್ । ಯಥಾ ಅವಿದ್ಯಾನುಷ್ಠಾನಂ ವಿದ್ಯೋಪಾಸನಂ ಚ ಶಾಸ್ತ್ರಪ್ರಮಾಣಕಮ್, ತಥಾ ತದ್ವಿರೋಧಾವಿರೋಧಾವಪಿ । ಯಥಾ ಚ "ನ ಹಿಂಸ್ಯಾತ್ ಸರ್ವಾ ಭೂತಾನಿ" (?) ಇತಿ ಶಾಸ್ತ್ರಾವಗತಂ ಪುನಃ ಶಾಸ್ತ್ರೇಣೈವ ಬಾಧ್ಯತೇ "ಅಧ್ವರೇ ಪಶುಂ ಹಿಂಸ್ಯಾತ್" (?) ಇತಿ, ಏವಂ ವಿದ್ಯಾವಿದ್ಯಯೋರಪಿ ಸ್ಯಾತ್ । ವಿದ್ಯಾಕರ್ಮಣೋಶ್ಚ ಸಮುಚ್ಚಯಃ ।

(ಭಾಷ್ಯಾರ್ಥ)

(ಪ್ರಶ್ನೆ) :- ಇಲ್ಲಿ ಮೊದಲು ಸಂಶಯವೆಂಬುದಾದರೂ ಏಕೆ ?

(ಉತ್ತರ) :- ಹೇಳುತ್ತೇವೆ (ಕೇಳಿ). ವಿದ್ಯೆಯೆಂಬ ಮಾತಿಗೆ ಮುಖ್ಯವಾದ ಪರಮಾತ್ಮವಿದ್ಯೆಯೆಂದೇ ಏತಕ್ಕೆ ಅರ್ಥವನ್ನು ಇಟ್ಟುಕೊಳ್ಳಬಾರದು ?[1] (ಹೀಗೆಯೇ)

1. ಕಾಣ್ವಪಾಠದಂತೆ ಇರುವ ಈ ಶ್ರುತಿಗೆ ಆಚಾರ್ಯರು "ಕರ್ಮದಿಂದ ಮೃತ್ಯುವನ್ನು ದಾಟಿ ಉಪಾಸನೆಯಿಂದ (ಆಪೇಕ್ಷಿಕವಾದ) ಅಮೃತತ್ವವನ್ನು ಪಡೆಯುವನು" ಎಂದು ಅರ್ಥಮಾಡಿರುತ್ತಾರೆ. ಇಲ್ಲಿಯೂ ಮುಖ್ಯವಾದ ವಿದ್ಯೆಯಿಂದ ಮುಖ್ಯವಾದ ಮುಕ್ತಿಯನ್ನು ಪಡೆಯುವನು ಎಂದೇ ಏಕೆ ಅರ್ಥವನ್ನು ಮಾಡಬಾರದು ? - ಎಂದು ಪ್ರಶ್ನೆ.

ಅಮೃತವೆಂದರೂ (ಮುಖ್ಯವಾದ ಅಮೃತತ್ವವು, ಎಂದರೆ ಮುಕ್ತಿಯು ಎಂದೇ ಏಕೆ ಇಟ್ಟು ಕೊಳ್ಳಬಾರದು ? ಇದೀಗ ಸಂಶಯವು).

(ಸಿದ್ಧಾಂತಿ) :- ಹಿಂದೆ ಹೇಳಿದ ಪರಮಾತ್ಮವಿದ್ಯೆಗೂ ಕರ್ಮಕ್ಕೂ ವಿರೋಧ-ವಿರುವದರಿಂದ (ಎರಡನ್ನೂ) ಸೇರಿಸಿಕೊಂಡು (ಅನುಷ್ಠಾನಮಾಡುವದೆಂಬುದು) ಹೊಂದುವದಿಲ್ಲವಲ್ಲ !

(ಆಕ್ಷೇಪಕಾರ) :- ನಿಜ. ಆದರೆ ವಿರೋಧ (ವೆಂಬುದು) ನಿರ್ಣಯ ವಾಗಿರುವದಿಲ್ಲ. ಏಕೆಂದರೆ ವಿರೋಧವಿದೆ, ವಿರೋಧವಿಲ್ಲ- ಎಂಬಿವೆರಡೂ ಶಾಸ್ತ್ರ ಪ್ರಮಾಣದಿಂದ ತಿಳಿಯಬರತಕ್ಕವಾಗಿರುತ್ತವೆ. ಅವಿದ್ಯೆಯನ್ನು ಅನುಷ್ಠಾನ ಮಾಡಬೇಕೆಂಬುದೂ ವಿದ್ಯೆಯನ್ನು ಉಪಾಸನೆಮಾಡಬೇಕೆಂಬುದೂ ಹೇಗೆ ಶಾಸ್ತ್ರ ಪ್ರಮಾಣದಿಂದಲೇ ಗೊತ್ತಾಗತಕ್ಕದ್ದೋ, ಅವೆರಡಕ್ಕೂ ವಿರೋಧವಿರುವದು, ಇಲ್ಲದ್ದು-ಎಂಬಿವೆರಡೂ ಹಾಗೆಯೇ (ಗೊತ್ತಾಗತಕ್ಕವಾಗಿವೆ). ಮತ್ತು ಹೇಗೆ ''ಯಾವ ಪ್ರಾಣಿಗಳನ್ನೂ ಕೊಲ್ಲಬಾರದು'' (?) ಎಂದು ಶಾಸ್ತ್ರದಿಂದ ಗೊತ್ತಾದದ್ದು ''ಯಜ್ಞದಲ್ಲಿ ಪಶುವನ್ನು ಕೊಲ್ಲಬೇಕು (?) ಎಂಬ ಶಾಸ್ತ್ರದಿಂದಲೇ[1] ಬಾಧಿತವಾಗುತ್ತದೆಯೋ ಇದರಂತೆ ವಿದ್ಯಾವಿದ್ಯೆಗಳ ವಿಷಯದಲ್ಲಿಯೂ ಆಗಬಹುದಾಗಿರುತ್ತದೆ. ಮತ್ತು ವಿದ್ಯೆ, ಕರ್ಮ-ಇವುಗಳೆರಡರ ಸಮುಚ್ಚಯವೂ (ಆಗಬಹುದಾಗಿದೆ).

(ಭಾಷ್ಯ)

೪೨. ನ । ''ದೂರಮೇತೇ ವಿಪರೀತೇ ವಿಷೂಚೀ ಅವಿದ್ಯಾ ಯಾ ಚ ವಿದ್ಯೇತಿ ಜ್ಞಾತಾ'' (ಕ. 1-2-4) ಇತಿ ಶ್ರುತೇಃ । ''ವಿದ್ಯಾಂ ಚಾವಿದ್ಯಾಂ ಚ'' ಇತಿ ವಚನಾದವಿರೋಧ ಇತಿ ಚೇತ್ । ನ । ಹೇತುಸ್ವರೂಪಫಲವಿರೋಧಾತ್ । ವಿದ್ಯಾಽವಿದ್ಯಾ ವಿರೋಧಾವಿರೋಧಯೋರ್ವಿಕಲ್ಪಾಸಂಭವಾತ್ ಸಮುಚ್ಚಯ ವಿಧಾನಾತ್ ಅವಿರೋಧ ಏವೇತಿ ಚೇತ್ । ನ । ಸಹಸಮ್ಭವಾನುಪಪತ್ತೇಃ । ಕ್ರಮೇಣ ಏಕಾಶ್ರಯೇ ಸ್ಯಾತಾಂ ವಿದ್ಯಾವಿದ್ಯೇ ಇತಿ ಚೇತ್ । ನ । ವಿದ್ಯೋತ್ಪತ್ತೌ ಅವಿದ್ಯಾಯಾ ಹ್ಯಸ್ತತ್ವಾತ್ ತದಾಶ್ರಯೇ ಅವಿದ್ಯಾನುಪಪತ್ತೇಃ । ನ ಹಿ ''ಅಗ್ನಿರುಷ್ಣಃ ಪ್ರಕಾಶಶ್ಚ'' ಇತಿ ವಿಜ್ಞಾನೋತ್ಪತ್ತೌ ಯಸ್ಮಿನ್ ಆಶ್ರಯೇ ತದುತ್ಪನ್ನಮ್, ತಸ್ಮಿನ್ನೇವಾಶ್ರಯೇ ''ಶೀತೋಽಗ್ನಿರಪ್ರಕಾಶೋ ವಾ''

---

1. ಶಾಸ್ತ್ರವು ನಿಷೇಧಿಸಿದ ಹಿಂಸೆಗೆ ವಿರುದ್ಧವಾಗಿ ಶಾಸ್ತ್ರವೇ ಯಜ್ಞದಲ್ಲಿ ಪಶುವನ್ನು ಕೊಲ್ಲಬೇಕೆಂದು ವಿಧಿಸಿರುವಂತೆ ಅವಿದ್ಯೆಯನ್ನೂ ವಿದ್ಯೆಯನ್ನೂ ಸಮುಚ್ಚಯಮಾಡಬೇಕೆಂದೂ ಶಾಸ್ತ್ರವೇ ವಿಧಿಸಿರುತ್ತದೆ. ಹಿಂಸಾವಿಧಿನಿಷೇಧಗಳಿಗೆ ವಿರೋಧವಿಲ್ಲವೆಂದು ಶಾಸ್ತ್ರವಿಧಿಯ ಸಾಮರ್ಥ್ಯದಿಂದ ನಿಶ್ಚಯಿಸುವಂತೆಯೇ ಸಮುಚ್ಚಯವಿಧಿಯ ಬಲದಿಂದ ವಿದ್ಯಾವಿದ್ಯೆಗಳಿಗೆ ವಿರೋಧವಿಲ್ಲವೆಂದು ನಿಶ್ಚಯಿಸಬೇಕು- ಎಂದು ಪೂರ್ವಪಕ್ಷಿಯ ಅಭಿಪ್ರಾಯ.

ಇತ್ಯವಿದ್ಯಾಯಾ ಉತ್ಪತ್ತಿಃ, ನಾಪಿ ಸಂಶಯಃ ಅಜ್ಞಾನಂ ವಾ । "ಯಸ್ಮಿನ್ ಸರ್ವಾಣಿ ಭೂತಾನಿ ಆತ್ಮೈವಾಭೂದ್ವಿಜಾನತಃ । ತತ್ರ ಕೋ ಮೋಹಃ ಕಃ ಶೋಕ ಏಕತ್ವ ಮನುಪಶ್ಯತಃ" (೭) ಇತಿ ಶೋಕಮೋಹಾದ್ಯಸಮ್ಭವಶ್ರುತೇಃ । ಅವಿದ್ಯಾಽಸಮ್ಭವಾತ್ ತದುಪಾದಾನಸ್ಯ ಕರ್ಮಣೋಽಪ್ಯನುಪಪತ್ತಿಮವೋಚಾಮ । "ಅಮೃತಮಶ್ನುತೇ" ಇತ್ಯಾಪೇಕ್ಷಿಕಮಮೃತಮ್ । ವಿದ್ಯಾಶಬ್ದೇನ ಪರಮಾತ್ಮವಿದ್ಯಾಗ್ರಹಣೇ "ಹಿರಣ್ಮಯೇನ" (೧೫) ಇತ್ಯಾದಿನಾ ದ್ವಾರಮಾರ್ಗಾದಿಯಾಚನಮ್ ಅನುಪಪನ್ನಂ ಸ್ಯಾತ್ । ತಸ್ಮಾತ್ ಉಪಾಸನಯಾ ಸಮುಚ್ಚಯಃ ನ ಪರಮಾತ್ಮ ವಿಜ್ಞಾನೇನ ಇತಿ ಯಥಾ ಅಸ್ಮಾಭಿಃ ವ್ಯಾಖ್ಯಾತ ಏವ ಮನ್ತ್ರಾಣಾಮರ್ಥ ಇತ್ಯುಪರಮ್ಯತೇ ॥

(ಭಾಷ್ಯಾರ್ಥ)

(ಸಿದ್ಧಾಂತಿ) :- ಹಾಗಲ್ಲ. ಏಕೆಂದರೆ "(ಯಾವದು) ಅವಿದ್ಯೆಯೆಂದೂ ಯಾವದು ವಿದ್ಯೆಯೆಂದೂ ಗೊತ್ತಾಗಿರುವದೋ - ಈ ಎರಡೂ ಒಂದಕ್ಕೊಂದು ದೂರವಾಗಿ ವಿರುದ್ಧವಾಗಿ ಬೇರೆಬೇರೆಯ ಕಡೆಗೆ ಹೋಗಿರುತ್ತವೆ" ಎಂದು ಶ್ರುತಿಯಿರುವದು.

(ಪೂರ್ವಪಕ್ಷಿ) :- "ವಿದ್ಯೆಯನ್ನೂ ಅವಿದ್ಯೆಯನ್ನೂ (ಯಾವಾತನು ಸೇರಿಸಿ ಅರಿಯುತ್ತಾನೋ" ಎಂದು (ಶ್ರುತಿ) ವಚನವಿರುವದರಿಂದ[1] (ಅವೆರಡಕ್ಕೂ) ವಿರೋಧವಿಲ್ಲ.

(ಸಿದ್ಧಾಂತಿ) :- ಹಾಗಲ್ಲ. ಏಕೆಂದರೆ (ಅವುಗಳ) ಹೇತು, ಸ್ವರೂಪ, ಫಲ- ಇವುಗಳು ಒಂದಕ್ಕೊಂದು ವಿರುದ್ಧವಾಗಿರುತ್ತವೆ. ವಿದ್ಯಾವಿದ್ಯೆಗಳಿಗೆ ವಿರೋಧವೂ ಇದೆ, ಅವಿರೋಧವೂ ಇದೆ - ಎಂದು (ಇವೆರಡಕ್ಕೂ) ವಿಕಲ್ಪವು[2] ಹೊಂದುವದಿಲ್ಲ.

(ಪೂರ್ವಪಕ್ಷಿ) :- ಸಮುಚ್ಚಯವನ್ನು (ಶಾಸ್ತ್ರದಲ್ಲಿ) ವಿಧಿಸಿರುವದರಿಂದ ವಿರೋಧವಿಲ್ಲವೇ ಇಲ್ಲ (ವೆಂದು ನಿಶ್ಚಯಿಸೋಣ).

(ಸಿದ್ಧಾಂತಿ) :- ಇದು ಸರಿಯಲ್ಲ. ಏಕೆಂದರೆ ಇವೆರಡೂ ಜೊತೆಯಲ್ಲಿರಲೇ ಆರವು.

---

1. ಅವಿದ್ಯೆ, ವಿದ್ಯೆ- ಇವೆರಡೂ ವಿರುದ್ಧವಾಗಿರುವವು ಎಂಬುದು ವಚನಸಿದ್ಧವಾದರೆ ಅವೆರಡೂ ಅವಿರುದ್ಧವಾಗಿರುವವೆನ್ನುವದೂ ಸಮುಚ್ಚಯವಚನಸಿದ್ಧವಾಗಿರುತ್ತದೆ ಎಂದು ಪೂರ್ವಪಕ್ಷಿಯ ಭಾವ.

2. ಅವಿದ್ಯೆಯಿಂದಾದ ಕಾಮವೇ ಕರ್ಮಕ್ಕೆ ಹೇತು, ವಸ್ತುವನ್ನು ತಿಳಿಸುವ ಪ್ರಮಾಣವೇ ಜ್ಞಾನಕ್ಕೆ ಹೇತು; ಕರ್ಮವು ಅನುಷ್ಠಾನರೂಪವಾದದ್ದು, ವಿದ್ಯೆಯು ವಸ್ತುವನ್ನು ತಿಳಿಸತಕ್ಕದ್ದು; ಕರ್ಮದ ಫಲವು ಸಾಧ್ಯವು, ಜ್ಞಾನದ ಫಲವು ಸಿದ್ಧವು. ಹೀಗೆ ಅವಿದ್ಯೆಯೆಂಬ ಕರ್ಮಕ್ಕೂ ಜ್ಞಾನಕ್ಕೂ ಹೇತುಸ್ವರೂಪಫಲಗಳು ವಿರುದ್ಧವಾಗಿರುತ್ತವೆ. ಆದ್ದರಿಂದ ನಾವು ಹೇಳಿದ ವಚನವು ಯುಕ್ತಿಯಿಂದ ಕೂಡಿರುತ್ತದೆ. ಆದ್ದರಿಂದ ಪ್ರಬಲ. ಒಂದು ವಸ್ತುವಿನ ವಿಷಯದಲ್ಲಿ ವಿರುದ್ಧ, ಅವಿರುದ್ಧ - ಎಂಬ ಎರಡೂ ಹೊಂದುವದಿಲ್ಲವಾದ್ದರಿಂದ ನಿಮ್ಮ ಶ್ರುತಿಯು ಅವಿರೋಧವನ್ನು ಹೇಳುವದಿಲ್ಲವೆನ್ನುವದೇ ಯುಕ್ತ.

(ಪೂರ್ವಪಕ್ಷಿ) :- ವಿದ್ಯೆ, ಅವಿದ್ಯೆ - ಇವೆರಡೂ ಒಂದಾಗುತ್ತಲೊಂಬು ಒಬ್ಬನನ್ನೇ ಆಶ್ರಯಿಸಿಕೊಂಡು ಇರಬಹುದಲ್ಲ !

(ಸಿದ್ಧಾಂತಿ) :- ಹಾಗಲ್ಲ. ಏಕೆಂದರೆ ವಿದ್ಯೆಯು ಉಂಟಾದರೆ ಅವಿದ್ಯೆಯು ಹೋಗಿಬಿಟ್ಟಿರುತ್ತದೆಯಾದ್ದರಿಂದ ಅದರ ಆಶ್ರಯನಾದವನಲ್ಲಿ ಅವಿದ್ಯೆಯಿರುವದೆಂಬುದು ಹೊಂದಲಾರದು. 'ಬೆಂಕಿಯು ಬಿಸಿಯಾಗಿಯೂ ಹೊಳೆಯುತ್ತಲೂ ಇರುವದು' ಎಂಬ ಅರಿವು ಉಂಟಾದರೆ ಯಾವನನ್ನು ಆಶ್ರಯಿಸಿಕೊಂಡು ಅದು ಉಂಟಾಗುವದೋ ಅವನನ್ನೇ ಆಶ್ರಯಿಸಿಕೊಂಡು 'ಬೆಂಕಿಯು ತಣ್ಣಗೆ ಹೊಳೆಯದೆ ಇರುವದು' ಎಂಬ ಅವಿದ್ಯೆ ಉಂಟಾಗಲಾರದು; ಸಂಶಯವೂ ಉಂಟಾಗಲಾರದು; ಜ್ಞಾನವಿಲ್ಲದೆಯೂ ಹೋಗಲಾರದು.[1] ''ಎಲ್ಲಿ ಎಲ್ಲಾ ಭೂತಗಳೂ ತಿಳಿದಾತನಿಗೆ ಆತ್ಮನೇ ಆಯಿತೋ ಅಲ್ಲಿ ಒಂದೇ ಎಂದು ತಿಳಿದಾತನಿಗೆ ಯಾವ ಮೋಹವು ? ಯಾವ ಶೋಕವು ?'' (೭) ಎಂದು ಶೋಕಮೋಹಾದಿಗಳು ಸಂಭವಿಸಲಾರವೆಂಬ ಶ್ರುತಿ ಇದಕ್ಕೆ ಪ್ರಮಾಣವು. ಅವಿದ್ಯೆಯು ಇರುವ ಸಂಭವವಿಲ್ಲದ್ದರಿಂದ[2] ಅದರಿಂದಾಗುವ ಕರ್ಮವೂ ಇರಲಾರದೆಂದು ಹಿಂದೆ[3] ಹೇಳಿರುತ್ತೇವೆ. ''ಅಮೃತವನ್ನು ಪಡೆಯುವನು'' ಎಂಬುದು **ಆಪೇಕ್ಷಿಕವಾದ ಅಮೃತವು.**[4] ವಿದ್ಯೆಯೆಂಬ ಮಾತಿಗೆ ಪರಮಾತ್ಮವಿದ್ಯೆಯೆಂಬರ್ಥವನ್ನು ಮಾಡಿಕೊಂಡರೆ ''ಹಿರಣ್ಮಯೇನ'' (೧೫) ಮುಂತಾದ ಮಂತ್ರಗಳಲ್ಲಿ ದ್ವಾರಮಾರ್ಗ ಮುಂತಾದದ್ದನ್ನು ಬೇಡಿಕೊಂಡಿರುವದು[5] ಹೊಂದುಗಡೆಯಾಗದೆ ಹೋಗುವದು. ಆದ್ದರಿಂದ ಉಪಾಸನೆ ಯೊಡನೆ (ಕರ್ಮವನ್ನು) ಸೇರಿಸಿಕೊಳ್ಳಬೇಕು, (ಎಂಬುದೇ ಶ್ರುತಿಯ ತಾತ್ಪರ್ಯವೇ ಹೊರತು) ಪರಮಾತ್ಮ ಜ್ಞಾನದೊಡನೆ (ಸೇರಿಸಿಕೊಳ್ಳಬೇಕೆಂಬುದಲ್ಲ). ಆದ್ದರಿಂದ ಮಂತ್ರಗಳಿಗೆ ನಾವು ಮಾಡಿದ ಅರ್ಥವೇ ಸರಿ. ಆದ್ದರಿಂದ (ಈ ವಿಚಾರವನ್ನು ಇಲ್ಲಿಗೆ) ನಿಲ್ಲಿಸುತ್ತೇವೆ.

ಇತಿ ಶ್ರೀಮತ್ಪರಮಹಂಸ ಪರಿವ್ರಾಜಕಾಚಾರ್ಯಸ್ಯ ಶ್ರೀಗೋವಿನ್ದಭಗವತ್ಪೂಜ್ಯಪಾದ
ಶಿಷ್ಯಸ್ಯ ಶ್ರೀಮಚ್ಛಙ್ಕರಭಗವತಃ ಕೃತೌ

**ಈಶಾವಾಸ್ಯೋಪನಿಷದ್ಭಾಷ್ಯಂ ಸಮ್ಪೂರ್ಣಮ್**

---

1. ತಪ್ಪುತಿಳುವಳಿಕೆ, ಸಂಶಯ, ಜ್ಞಾನಾಭಾವ- ಈ ಮೂರೂ ಅವಿದ್ಯೆಯ ರೂಪಗಳು.

2. ವಿದ್ಯೆಯೊಡನೆ ಅವಿದ್ಯೆಯಿರಲಾರದಾದ್ದರಿಂದ ವಿದ್ಯೆಯೊಡನೆ ಅವಿದ್ಯೆಯಿಂದ ಉಂಟಾಗುವ ಕರ್ಮವೂ ಇರಲಾರದು.

3. ಈ ಚರ್ಚೆಯ ಮೊದಲಿನ ಭಾಗದಲ್ಲಿ.

4. ಪ್ರಕೃತಿಲಯರೂಪವಾದ ಕಾರಣಬ್ರಹ್ಮಪ್ರಾಪ್ತಿ.

5. ಬ್ರಹ್ಮವನ್ನು ಪಡೆಯುವದಕ್ಕೆ ದ್ವಾರವನ್ನು ತೆರೆಯಬೇಕೆಂದು ಬೇಡಿಕೊಂಡಿರುವದು, ಸಂಕಲ್ಪಾತ್ಮಕನಾದ ಅಗ್ನಿಯನ್ನು ದೇವಯಾನಮಾರ್ಗದಿಂದ ಕರೆದುಕೊಂಡು ಹೋಗಬೇಕೆಂದು ಬೇಡಿಕೊಂಡಿರುವದು, ಕರ್ಮೋಪಾಸನೆಗಳನ್ನೆಲ್ಲ ಸ್ಮರಿಸಬೇಕೆಂದು ಬೇಡಿಕೊಂಡಿರುವದು- ಮುಂತಾದವು ಮುಖ್ಯಮುಕ್ತಿಗೆ ಹೊಂದುವದಿಲ್ಲ.

## ಈಶಾವಾಸ್ಯೋಪನಿಷತ್ತಿನ ಸಾರ

(ಮಂತ್ರ ೧-೩) ಈ ಜಗತ್ತಿನಲ್ಲಿ ತೋರಿಬರುತ್ತಿರುವ ಚರಾಚರವೆಲ್ಲವೂ ಆತ್ಮನೇ. ಆತ್ಮನ ನಿಜವನ್ನು ತಿಳಿದವನು ಏಷಣಾತ್ರಯವನ್ನು ತೊರೆದು ಆತ್ಮಜ್ಞಾನನಿಷ್ಠೆಯಲ್ಲಿರುವದಕ್ಕೆ ತಕ್ಕವನು. ಆತ್ಮನನ್ನು ಅರಿತುಕೊಳ್ಳುವದಕ್ಕೆ ಅಶಕ್ತನಾದವನಿಗೆ ವಿಧಿನಿಷೇಧರೂಪವಾದ ಕರ್ಮವನ್ನು ಮಾಡಿಕೊಂಡಿರುವ ಕರ್ಮನಿಷ್ಠೆಯಲ್ಲಿಯೇ ಅಧಿಕಾರವು. ಆದರೆ ನಿಜವಾದ ಆತ್ಮತತ್ತ್ವವನ್ನು ತಿಳಿಯದವರು ಅಸುರರಂತಿರುವರು. ಏಕೆಂದರೆ ಅವರು ಅಜ್ಞಾನದಿಂದ ಆವೃತರಾಗಿ ಆತ್ಮಹತ್ಯಾದೋಷದಿಂದ ಸತತವಾಗಿ ಸಂಸಾರದಲ್ಲಿ ತೊಳಲುತ್ತಿರುವರು.

(೪-೮) ಈ ಆತ್ಮತತ್ತ್ವವು ದೇಹ, ಇಂದ್ರಿಯ, ಮನಸ್ಸು- ಇವುಗಳ ಸಂಬಂಧವಿಲ್ಲದೆ ಶುದ್ಧಸ್ವರೂಪವಾಗಿರುವದಾದರೂ ಮೂಢರಿಗೆ ಇದು ಅನೇಕವಾಗಿರುವಂತೆಯೂ ಉಪಾಧಿಗಳಿಂದ ತೋರುವ ಸಂಸಾರವಿಕಾರಗಳನ್ನು ಅನುಭವಿಸುತ್ತಿರುವಂತೆಯೂ ಕಾಣುತ್ತಿರುವದು. ಆದರೆ ಯಾವ ಜ್ಞಾನಿಯು ಎಲ್ಲಾ ಭೂತಗಳಲ್ಲಿಯೂ ತನ್ನ ಆತ್ಮನೊಬ್ಬನೇ ಇರುವನೆಂದೂ ಆ ಆತ್ಮನು ಅಶರೀರನೆಂದೂ ಧರ್ಮಾದಿಗಳನ್ನು ಮೀರಿರುವನೆಂದೂ ಪರಮಾರ್ಥಸತ್ಯನೆಂದೂ ಅರಿತುಕೊಳ್ಳುವನೋ ಅವನಿಗೆ ಶೋಕ, ಮೋಹ- ಮುಂತಾದ ಅನರ್ಥಗಳುಂಟಾಗುವದಿಲ್ಲ.

(೯-೧೪) ಕರ್ಮ, ಉಪಾಸನೆ- ಇವೆರಡನ್ನೂ ಒಟ್ಟಿಗೆ ಅನುಷ್ಠಾನ ಮಾಡುವದರಿಂದ ಅವನ್ನು ಒಂದೊಂದನ್ನೇ ಮಾಡುವದರಿಂದಾಗುವ ಫಲಕ್ಕಿಂತ ಹೆಚ್ಚಿನ ಫಲವುಂಟಾಗುವದು. ಹೀಗೆ ಸೇರಿಸಿ ಅನುಷ್ಠಾನಮಾಡುವವರು ಕರ್ಮದಿಂದ ಸ್ವಾಭಾವಿಕವಾದ ಜ್ಞಾನಕರ್ಮಗಳೆಂಬ ಮೃತ್ಯುವನ್ನು ದಾಟಿ ಉಪಾಸನೆಯಿಂದ ಉಪಾಸ್ಯದೇವತೆಯ ಸ್ವರೂಪವನ್ನು ಪಡೆಯುವದೆಂಬ ಅಮೃತತ್ವವನ್ನು ಪಡೆದುಕೊಳ್ಳುವರು. ಉಪಾಸ್ಯದೇವತೆಯಾದ ಬ್ರಹ್ಮವು ವ್ಯಾಕೃತವೆಂದೂ ಅವ್ಯಾಕೃತವೆಂದೂ ಎರಡು ಬಗೆಯಾಗಿರುತ್ತದೆ. ವ್ಯಾಕೃತಾವ್ಯಾಕೃತೋಪಾಸನೆಗಳೆರಡನ್ನೂ ಸೇರಿಸಿ ಉಪಾಸನೆಮಾಡುವವರು ವ್ಯಾಕೃತೋಪಾಸನೆಯಿಂದ ಅನೈಶ್ವರ್ಯವೇ ಮುಂತಾದ ರೂಪವಾದ ಮೃತ್ಯುವನ್ನು ದಾಟಿ ಅವ್ಯಾಕೃತೋಪಾಸನೆಯಿಂದ ಪ್ರಕೃತಿಲಯವೆಂಬ ಸುಖದುಃಖಗಳನ್ನು ಮೀರಿದ ಅಮೃತತ್ವವನ್ನು ಪಡೆದುಕೊಳ್ಳುತ್ತಾರೆ. ಇಲ್ಲಿಯವರೆಗೇ ಸಂಸಾರದ ಗತಿಯಿರುವದು. ಇಲ್ಲಿಂದ ಮುಂದಕ್ಕೆ ಈ ಮೊದಲೇ ಹೇಳಿದ ಜ್ಞಾನವೇ ಆಗಿ ಮುಖ್ಯಮುಕ್ತಿಯಾಗಬೇಕು.

(೧೫-೧೮) ಮೇಲೆ ಹೇಳಿದಂತೆ ಕರ್ಮೋಪಾಸನೆಗಳನ್ನು ಮಾಡುವವರು ಮರಣಕಾಲದಲ್ಲಿ ಆದಿತ್ಯಮಂಡಲದಲ್ಲಿರುವ ಅಪರಬ್ರಹ್ಮದ ಅನುಜ್ಞೆಯಿಂದ ಉತ್ತರಾಯಣಮಾರ್ಗವಾಗಿ ಹೋಗಿ ಆಪೇಕ್ಷಿಕವಾದ ಅಮೃತತ್ವವನ್ನು ಪಡೆದುಕೊಳ್ಳುವರು. ಹೀಗೆ ಶೋಕಮೋಹಾದಿಗಳನ್ನು ಅತ್ಯಂತವಾಗಿ ತೊಲಗಿಸುವ ನಿವೃತ್ತಿಧರ್ಮವೆಂದೂ ಬಹುಕಾಲ ಅನುಭವಿಸುವ ಅಮೃತತ್ವವನ್ನು ಕೊಡುವ ಪ್ರವೃತ್ತಿಧರ್ಮವೆಂದೂ ವೇದೋಕ್ತಧರ್ಮವು ಎರಡು ಬಗೆಯಾಗಿರುವದು.

# ಪರಿಶಿಷ್ಟ

# ಈಶಾವಾಸ್ಯೋಪನಿಷತ್ತು

## (ಮಾಧ್ಯಂದಿನಪಾಠ)

ಆಚಾರ್ಯರು ಕಾಣ್ವಪಾಠದ ಉಪನಿಷತ್ತಿಗೆ ಭಾಷ್ಯವನ್ನು ಬರೆದಿರುತ್ತಾರಾದರೂ ಅದ್ವೈತಪ್ರಕರಣ, ಐತರೇಯದ ಸಂಬಂಧಭಾಷ್ಯ, ತೈತ್ತಿರೀಯ ಶೀಕ್ಷಾಧ್ಯಾಯದ 11ನೆಯ ಅನುವಾಕ- ಇವುಗಳಲ್ಲಿ ಮಾಧ್ಯಂದಿನಪಾಠಕ್ಕೆ ಹೊಂದುವಂತೆಯೇ ಈ ಉಪನಿಷತ್ತಿನ ೧೧ನೆಯ (ಮಾಧ್ಯಂದಿನಪಾಠದಲ್ಲಿ ೧೪ನೆಯ) ಮಂತ್ರಕ್ಕೆ ಅರ್ಥವನ್ನು ಬರೆದಿರುತ್ತಾರೆ. ''ಉವಟಾಚಾರ್ಯ'' ಮುಂತಾದವರು ಇದಕ್ಕೆ ಮಾಧ್ಯಂದಿನಪಾಠದಂತೆಯೇ ವ್ಯಾಖ್ಯಾನವನ್ನು ಮಾಡಿರುತ್ತಾರೆ. ಆದ್ದರಿಂದ ಆ ಪಾಠವನ್ನೂ ಇಲ್ಲಿ ಹೋಲಿಕೆಗಾಗಿ ಕೊಡುವೆವು. ಸಂಖ್ಯೆಯ ಅನುಕ್ರಮದಲ್ಲಿ ಹೆಚ್ಚುಕಡಿಮೆಯಿರುವದನ್ನು ವಾಚಕರು ತಾವೇ ಊಹಿಸಿಕೊಳ್ಳಬಹುದು. ಆದರೆ ಮಂತ್ರಗಳಲ್ಲಿ ಶಬ್ದಗಳ ಹೆಚ್ಚುಕಡಿಮೆ ಇರುವದನ್ನು ಕಪ್ಪಕ್ಷರದಿಂದ ತೋರಿಸಿರುತ್ತೇವೆ.

ಈಶಾ ವಾಸ್ಯಮಿದಗ್ಂ ಸರ್ವಂ ಯತ್ಕಿಂಚ ಜಗತ್ಯಾಂ ಜಗತ್ ।
ತೇನ ತ್ಯಕ್ತೇನ ಭುಞ್ಜೀಥಾ ಮಾ ಗೃಧಃ ಕಸ್ಯಸ್ವಿದ್ಧನಮ್ ॥೧॥

ಕುರ್ವನ್ನೇವೇಹ ಕರ್ಮಾಣಿ ಜಿಜೀವಿಷೇಚ್ಛತಗ್ಂ ಸಮಾಃ ।
ಏವಂ ತ್ವಯಿ ನಾನ್ಯಥೇತೋಽಸ್ತಿ ನ ಕರ್ಮ ಲಿಪ್ಯತೇ ನರೇ ॥೨॥

ಅಸುರ್ಯಾ ನಾಮ ತೇ ಲೋಕಾ ಅನ್ಧೇನ ತಮಸಾವೃತಾಃ ।
ತಾಗ್ಂಸ್ತೇ **ಪ್ರೇತ್ಯಾ**ಪಿಗಚ್ಛನ್ತಿ ಯೇ ಕೇ ಚಾತ್ಮಹನೋ ಜನಾಃ ॥೩॥

ಅನೇಜದೇಕಂ ಮನಸೋ ಜವೀಯೋ ನೈನದ್ದೇವಾ ಆಪ್ನುವನ್ಪೂರ್ವಮರ್ಷತ್ ।
ತದ್ಧಾವತೋಽನ್ಯಾನತ್ಯೇತಿ ತಿಷ್ಠತ್ತಸ್ಮಿನ್ನಪೋ ಮಾತರಿಶ್ವಾ ದಧಾತಿ ॥೪॥

ತದೇಜತಿ ತನ್ನೈಜತಿ ತದ್ದೂರೇ ತದ್ವನ್ತಿಕೇ ।
ತದನ್ತರಸ್ಯ ಸರ್ವಸ್ಯ ತದು ಸರ್ವಸ್ಯಾಸ್ಯ ಬಾಹ್ಯತಃ ॥೫॥

ಯಸ್ತು ಸರ್ವಾಣಿ ಭೂತಾನ್ಯಾತ್ಮನ್ನೇವಾನುಪಶ್ಯತಿ ।
ಸರ್ವಭೂತೇಷು ಚಾತ್ಮಾನಂ ತತೋ ನ **ವಿಚಿಕಿತ್ಸತಿ**[1] ॥೬॥

ಯಸ್ಮಿನ್ ಸರ್ವಾಣಿ ಭೂತಾನ್ಯಾತ್ಮೈವಾಭೂದ್ವಿಜಾನತಃ ।
ತತ್ರ ಕೋ ಮೋಹಃ ಕಃ ಶೋಕ ಏಕತ್ವಮನುಪಶ್ಯತಃ ॥೭॥

ಸ ಪರ್ಯಗಾಚ್ಛುಕ್ರಮಕಾಯಮವ್ರಣಮಸ್ನಾವಿರಗ್ಂ ಶುದ್ಧಮಪಾಪವಿದ್ಧಮ್ ।
ಕವಿರ್ಮನೀಷೀ ಪರಿಭೂಃ ಸ್ವಯಮ್ಭೂರ್ಯಾಥಾತಥ್ಯತೋಽರ್ಥಾನ್
ವ್ಯದಧಾಚ್ಛಾಶ್ವತೀಭ್ಯಃ ಸಮಾಭ್ಯಃ ॥೮॥

---

1. 'ನ ವಿಚಿಕಿತ್ಸತಿ' ಸಂಶಯಪಡುವದಿಲ್ಲ.

ಅನ್ಧಂ ತಮಃ ಪ್ರವಿಶನ್ತಿ ಯೇಽಸಮ್ಭೂತಿಮುಪಾಸತೇ ।
ತತೋ ಭೂಯ ಇವ ತೇ ತಮೋ ಯ ಉ ಸಮ್ಭೂತ್ಯಾಗ್ಂ ರತಾಃ ॥೯॥
ಅನ್ಯದೇವಾಹುಃ ಸಮ್ಭವಾದನ್ಯದಾಹುರಸಮ್ಭವಾತ್ ।
ಇತಿ ಶುಶ್ರುಮ ಧೀರಾಣಾಂ ಯೇ ನಸ್ತದ್ವಿಚಚಕ್ಷಿರೇ ॥೧೦॥
ಸಮ್ಭೂತಿಂ ಚ ವಿನಾಶಂ ಚ ಯತ್ತದ್ವೇದೋಭಯಗ್ಂ ಸಹ ।
ವಿನಾಶೇನ ಮೃತ್ಯುಂ ತೀರ್ತ್ವಾ ಸಮ್ಭೂತ್ಯಾಮೃತಮಶ್ನುತೇ ॥೧೧॥
ಅನ್ಧಂ ತಮಃ ಪ್ರವಿಶನ್ತಿ ಯೇಽವಿದ್ಯಾಮುಪಾಸತೇ ।
ತತೋ ಭೂಯ ಇವ ತೇ ತಮೋ ಯ ಉ ವಿದ್ಯಾಯಾಗ್ಂ ರತಾಃ ॥೧೨॥
ಅನ್ಯದೇವಾಹುರ್ವಿದ್ಯಾಯಾ ಅನ್ಯದಾಹುರವಿದ್ಯಾಯಾಃ ।
ಇತಿ ಶುಶ್ರುಮ ಧೀರಾಣಾಂ ಯೇನಸ್ತದ್ವಿಚಚಕ್ಷಿರೇ ॥೧೩॥
ವಿದ್ಯಾಂ ಚಾವಿದ್ಯಾಂ ಚ ಯಸ್ತದ್ವೇದೋಭಯಗ್ಂ ಸಹ ।
ಅವಿದ್ಯಯಾ ಮೃತ್ಯುಂ ತೀರ್ತ್ವಾ ವಿದ್ಯಯಾಮೃತಮಶ್ನುತೇ ॥೧೪॥
ವಾಯುರನಿಲಮಮೃತಮಥೇದಂ ಭಸ್ಮಾನ್ತಗ್ಂ ಶರೀರಮ್ ।
ಓಂ ಕ್ರತೋ ಸ್ಮರ ಕ್ಲಿಬೇ ಸ್ಮರ ಕೃತಗ್ಂ ಸ್ಮರ ॥೧೫॥
ಅಗ್ನೇ ನಯ ಸುಪಥಾ ರಾಯೇ ಅಸ್ಮಾನ್ ವಿಶ್ವಾನಿ ದೇವ ವಯುನಾನಿ ವಿದ್ವಾನ್ ।
ಯುಯೋಧ್ಯಸ್ಮಜ್ಜುಹುರಾಣಮೇನೋ ಭೂಯಿಷ್ಠಾಂ ತೇ ನಮಉಕ್ತಿಂ ವಿಧೇಮ॥೧೬॥

ಹಿರಣ್ಮಯೇನ ಪಾತ್ರೇಣ ಸತ್ಯಸ್ಯಾಪಿಹಿತಂ ಮುಖಮ್ ।
ಯೋಽಸಾವಾದಿತ್ಯೇ ಪುರುಷಃ ಸೋಽಸಾವಹಮ್ । ಓಂ ಖಂ ಬ್ರಹ್ಮ ॥

೧೪ನೆಯ ಮಂತ್ರದ ಅರ್ಥ—(1) (ಅದ್ವೈತಪ್ರಕರಣದ 25ನೆಯ ಕಾರಿಕಾಭಾಷ್ಯದಂತೆ): ಕರ್ಮಫಲದಲ್ಲಿ ಕಾಮದಿಂದ ಪ್ರವರ್ತಿಸುವದು ಮತ್ತು ಸಾಧ್ಯಸಾಧನಗಳನ್ನು ಬಯಸುವದು-ಎಂಬ ಎರಡು ವಿಧದ ಮೃತ್ಯುವನ್ನು ದೇವತೋಪಾಸನೆ, ಕರ್ಮ-ಇವುಗಳ ಸಮುಚ್ಚಯವೆಂಬ ಅವಿದ್ಯೆಯಿಂದ ದಾಟಿ ವಿಚಾರದಿಂದ ಹುಟ್ಟುವ ಪರಮಾತ್ಮವಿದ್ಯೆಯಿಂದ ಮೋಕ್ಷವನ್ನು ಪಡೆಯುವನು. ಅವಿದ್ಯೆಯೂ ವಿದ್ಯೆಯೂ ಒಬ್ಬ ಪುರುಷನಲ್ಲಿಯೇ (ಸಹ) ಸೇರುವದೇ ಸಮುಚ್ಚಯ. ಮಾಂಡೂಕ್ಯಭಾಷ್ಯ ಪುಟ 198ನ್ನು ನೋಡಿ.

(2) (ಐತರೇಯದಂತೆ) :- ಅವಿದ್ಯೆಯೆಂದರೆ ವಿದ್ಯೆಗೆ ಬೇಕಾದ ತಪಸ್ಸು, ಗುರುಶುಶ್ರೂಷೆ ಮುಂತಾದದ್ದು. ಇದರಿಂದ ವಿದ್ಯೆಯನ್ನುಂಟುಮಾಡಿಕೊಂಡು ಕಾಮರೂಪವಾದ ಮೃತ್ಯುವನ್ನು ದಾಟಿ ವಿದ್ಯೆಯಿಂದ ಮುಕ್ತಿಯನ್ನು ಪಡೆಯುತ್ತಾನೆ. ಐತರೇಯಭಾಷ್ಯ ಪುಟ 9ನ್ನು ನೋಡಿ.

(3) (ತೈತ್ತಿರೀಯ 11ನೆಯ ಅನುವಾಕದಂತೆ) :- ಪಾಪವನ್ನು ನಾಶಮಾಡಿಕೊಳ್ಳುವದಕ್ಕೆ ಕರ್ಮವೆಂಬ ಅವಿದ್ಯೆ, ಮುಕ್ತಿಗೆ ವಿದ್ಯೆ. ತೈತ್ತಿರೀಯಭಾಷ್ಯ ಪುಟ 102ನ್ನು ನೋಡಿ.

ಕ್ಲಿಬೇ- ಕ್ಲಿಪ್ತವಾದ ಲೋಕಕ್ಕಾಗಿ. ಓಂ ಖಂ ಬ್ರಹ್ಮ - ಎಂಬ ನಾಮದಿಂದ ಖಂ ಆಕಾಶದಂತೆ ಸರ್ವಗತರೂಪದಿಂದ ಬ್ರಹ್ಮವನ್ನು ಧ್ಯಾನಿಸಬೇಕು.

# ಮನ್ತ್ರಗಳ ಅನುಕ್ರಮಣಿಕೆ


| ಮನ್ತ್ರಪ್ರತೀಕ | ಮನ್ತ್ರಸಂಖ್ಯೆ | ಪುಟ |
|---|---|---|
| ಅಗ್ನೇ ನಯ ಸುಪಥಾ ರಾಯೇ | ೧೮ | ೪೭ |
| ಅನೇಜದೇಕಂ ಮನಸೋ ಜವೀಯೋ | ೪ | ೧೪ |
| ಅನ್ಧಂ ತಮಃ ಪ್ರವಿಶನ್ತಿ ಯೇಽವಿದ್ಯಾಮ್ | ೯ | ೩೧ |
| ಅನ್ಧಂ ತಮಃ ಪ್ರವಿಶನ್ತಿ ಯೇಽಸಮ್ಭೂತಿಮ್ | ೧೨ | ೩೬ |
| ಅನ್ಯದೇವಾಹುರ್ವಿದ್ಯಯಾ | ೧೦ | ೩೩ |
| ಅನ್ಯದೇವಾಹುಃ ಸಮ್ಭವಾತ್ | ೧೩ | ೩೭ |
| ಅಸುರ್ಯಾ ನಾಮ ತೇ ಲೋಕಾಃ | ೩ | ೧೧ |
| ಈಶಾವಾಸ್ಯಮಿದಗ್ಂ ಸರ್ವಮ್ | ೧ | ೪ |
| ಕುರ್ವನ್ನೇವೇಹ ಕರ್ಮಾಣಿ | ೨ | ೮ |
| ತದೇಜತಿ ತನ್ನೈಜತಿ | ೫ | ೧೯ |
| ಪೂಷನ್ನೇಕರ್ಷೇ ಯಮ ಸೂರ್ಯ | ೧೬ | ೪೩ |
| ಯಸ್ತು ಸರ್ವಾಣಿ ಭೂತಾನಿ | ೬ | ೨೦ |
| ಯಸ್ಮಿನ್ ಸರ್ವಾಣಿ ಭೂತಾನಿ | ೭ | ೨೨ |
| ವಾಯುರನಿಲಮಮೃತಮ್ | ೧೭ | ೪೫ |
| ವಿದ್ಯಾಂ ಚಾವಿದ್ಯಾಂ ಚ | ೧೧ | ೩೪ |
| ಸ ಪರ್ಯಗಾಚ್ಛುಕ್ರಮಕಾಯಮವ್ರಣಮ್ | ೮ | ೨೪ |
| ಸಮ್ಭೂತಿಂ ಚ ವಿನಾಶಂ ಚ | ೧೪ | ೩೯ |
| ಹಿರಣ್ಮಯೇನ ಪಾತ್ರೇಣ | ೧೫ | ೪೨ |

# ಶಬ್ದಾನುಕ್ರಮಣಿಕೆ

ಇಲ್ಲಿ ಕೊಟ್ಟಿರುವ ಸಂಖ್ಯೆಗಳು ಸಂಸ್ಕೃತಭಾಷ್ಯದಲ್ಲಿ ಶಬ್ದವು ಯಾವ ಭಾಗದಲ್ಲಿ ಬಂದಿದೆ ಎಂಬುದನ್ನು ಸೂಚಿಸುವವು.

1. **ಅಕರ್ಮಶೇಷಃ**
ಕರ್ಮಕ್ಕೆ ಅಂಗವಾಗದ, ಸ್ವತಂತ್ರವಾದ, ೧.

2. **ಅಙ್ಗಾಙ್ಗಿತಾ**
ಒಂದು ಅಧೀನವಾಗಿಯೂ ಒಂದು ಪ್ರಧಾನವಾಗಿಯೂ ಇರುವದು. (ಜ್ಞಾನಕರ್ಮಗಳೆರಡೂ ಅಂಗಾಂಗಿ ಭಾವದಿಂದ ಸಮುಚ್ಚಯ ವಾಗಲೆಂದಾಗಲಿ ವ್ಯಾಕೃತಾ ವ್ಯಾಕೃತೋಪಾಸನೆಗಳು ಅಂಗಾಗಿ ಭಾವದಿಂದ ಸಮುಚ್ಚಯವಾಗಲೆಂದಾಗಲಿ ಈ ಉಪನಿಷತ್ತಿನಲ್ಲಿ ಹೇಳಿಲ್ಲ), ೨೩.

3. **ಅಜ್ಞಾನಮ್**
1. ತಪ್ಪಾಗಿ ತಿಳಿಯುವದು; ೨. ತಿಳಿಯದೆ ಇರುವದು, ೨, ೬, ೪೨.

4. **ಅಣಿಮಾದ್ಯೈಶ್ವರ್ಯಮ್**
ಹಿರಣ್ಯಗರ್ಭನ ಉಪಾಸನೆಯಿಂದ ಬರುವ ಸಿದ್ಧಿಗಳು, ೩೦.

5. **ಅದೃಷ್ಟಂ (ಫಲಮ್)**
ಕರ್ಮಕ್ಕೆ ಸಿಕ್ಕುವ ಸ್ವರ್ಗವೇ ಮುಂತಾದ ಪರಲೋಕದಲ್ಲಾಗುವ ಫಲ, ೧.

6. **ಅಧಿಕಾರಃ**
ತಕ್ಕ ಯೋಗ್ಯತೆ; ಅಧಿಕಾರೀ ಯೋಗ್ಯತೆಯುಳ್ಳವನು, ೨, ೩.

7. **ಅಧಿಕಾರವಿದಃ**
ಕರ್ಮಕ್ಕೆ ಅಧಿಕಾರವು ಯಾವದೆಂಬುದನ್ನು ಬಲ್ಲ ಮೀಮಾಂಸಕರು, ೧.

8. **ಅಧಿದೈವತಾತ್ಮಾ**
ದೇವತಾಸ್ವರೂಪನಾದ, ೩೭.

9. **ಅಧ್ಯಸ್ತಮ್** ಹುಟ್ಟುಗಟ್ಟಿದ, ಭ್ರಾಂತಿಯಿಂದ ಕಲ್ಪಿಸಿದ ೩.

10. **ಅಧ್ಯಾತ್ಮಪರಿಚ್ಛೇದಃ** ಶರೀರದೊಳಗೆ ಕಟ್ಟು ಬಿದ್ದಿರುವದು, ೩೭.

11. **ಅನಧಿಕಾರಪ್ರಯೋಜಕಧರ್ಮಾಃ**
ಅಧಿಕಾರವಿಲ್ಲದಿರುವದಕ್ಕೆ ಕಾರಣವಾದ ಧರ್ಮಗಳು, ೧

12. **ಅನುವಾದಃ-**
ಗೊತ್ತಿರುವದನ್ನು ಅಥವಾಮತ್ತೊಂದು ಕಡೆ ಹೇಳಿರುವದನ್ನು ಹೇಳಿ ಕೊಂಡಿರುವದು. ೧೫.

13. **ಅನೃತಮ್**
ಹುಸಿತೋರಿಕೆಯು, ೩.

14. **ಅನ್ತಃಕರಣಮ್**
ಮನಸ್ಸು, ಬುದ್ಧಿ, ಚಿತ್ತ, ಅಹಂಕಾರ ಎಂಬ ವೃತ್ತಿಗಳುಳ್ಳ ಒಳಗಿನ ಕರಣ, ೧೧.

15. **ಅಪರಬ್ರಹ್ಮ-**
ಕಡಿಮೆಯ ಬ್ರಹ್ಮ, ಹಿರಣ್ಯಗರ್ಭ, ೩೩.

16. **ಅಭಿಧೇಯಮ್-**
ಹೇಳಬೇಕಾದ ವಿಷಯ, ೨.

17. **ಅಮೃತಮ್**
1. ನಾಶವಿಲ್ಲದ ಮೋಕ್ಷ, 2. ಬಹುಕಾಲ ನಾಶವಿಲ್ಲದ ಪ್ರಕೃತಿ ಲಯವೇ ಮುಂತಾದ ಆಪೇಕ್ಷಿಕ ಉತ್ತಮಗತಿ, ೨೬, ೩೩, ೪೨.

18. **ಅವಾನ್ತರಫಲಮ್-**
ಮುಖ್ಯವಲ್ಲದ ಒಳಫಲ, ೨೩.

19. **ಅವಿದ್ಯಾ-**

1. ತಪ್ಪುತಿಳಿವಳಿಕೆ, ೯, ೧೭, ೪೧.
2. ಆತ್ಮನನ್ನು ತಪ್ಪಾಗಿ ತಿಳಿದುಕೊಂಡದ್ದರಿಂದ ಮಾಡುವ ಕರ್ಮ, ೨೨, ೨೭.
3. ತಪ್ಪುತಿಳಿವಳಿಕೆಯಿಂದ ಕಾರಣವೆಂದು ಕಲ್ಪಿಸಿರುವ ಅವ್ಯಾಕೃತ, ೨೮.

**20. ಅವಿದ್ಯಾಕಾರ್ಯಮ್**
ಅವಿದ್ಯೆಯಿಂದಾಗಿರುವ ಶೋಕ, ಮೋಹ - ಮುಂತಾದದ್ದು, ೧೭.

**21. ಅವ್ಯಕ್ತಮ್**
ಜಗತ್ತಿನ ಸೂಕ್ಷ್ಮಸ್ಥಿತಿ, ಕಾರಣಬ್ರಹ್ಮ, ೧೫.

**22. ಅವ್ಯಕ್ತಾದಿಸ್ಥಾವರಾನ್ತಾನಿ**
ಬ್ರಹ್ಮದಿಂದ ಸ್ಥಾವರಪ್ರಾಣಿಗಳವರೆಗಿನ, ೧೫.

**23. ಅವ್ಯಾಕೃತಮ್**
ಬಿಡಿಬಿಡಿಯಾಗಿ ತೋರದ ಸೂಕ್ಷ್ಮಸ್ಥಿತಿ, ಅವ್ಯಕ್ತ, ೨೭, ೨೮, ೨೦, ೩೨.

**24. ಅಸುರಾಃ**
ಆತ್ಮಜ್ಞಾನವಿಲ್ಲದ ಕಾಮಿಗಳು, ೯.

**25. ಆಗಮಃ-**
ಪರಂಪರೆಯ ಉಪದೇಶ, ೨೪.

**26. ಆತ್ಮಾ-**
(1) ತಾನು, ೪, ೫, ೧೪, ೧೫.
(2) ನಿಜವಾಗಿ ನಮ್ಮೆಲ್ಲರ ಸ್ವರೂಪವಾಗಿರುವ ಪರಮಾತ್ಮ, ೧, ೩, ೪, ೧೫, ೧೭ ೧೮.

**27. ಆತ್ಮಚೈತನ್ಯಮ್**
ಆತ್ಮಸ್ವರೂಪವಾದ ಅರಿವು, ೧೧.

**28. ಆತ್ಮಜ್ಞಾನನಿಷ್ಠಾ-**
ಆತ್ಮನ ಅರಿವಿನಲ್ಲಿಯೇ ನೆಲೆನಿಲ್ಲುವದು, ೨೫

**೨೯. ಆತ್ಮತತ್ತ್ವಮ್**
'ಆತ್ಮನು ಇದ್ದಂತೆ ಇರುವ ಸ್ವರೂಪ, ೧೦, ೧೧, ೧೨, ೧೪.

**30. ಆತ್ಮಸ್ವರೂಪನಿಷ್ಠಾ, ಆತ್ಮಸ್ವರೂಪಾವಸ್ಥಾನಮ್-**
ಆತ್ಮನ ಸ್ವರೂಪದಲ್ಲಿಯೇ ನೆಲೆ ನಿಲ್ಲುವದು, ೨೦.

**31. ಆತ್ಮೈಕತ್ವವಿಜ್ಞಾನಮ್-**
ಆತ್ಮನು ಒಬ್ಬನೇ, ಎರಡನೆಯ- ದಿಲ್ಲದವನು ಎಂಬ ಅರಿವು, ೨, ೨೧.

**32. ಆದಿತ್ಯಮಣ್ಡಲಸ್ಥಂ ಬ್ರಹ್ಮ-**
ಸೂರ್ಯ ಮಂಡಲದಲ್ಲಿರುವ ಹಿರಣ್ಯಗರ್ಭ, ೩೫.

**33. ಆಪೇಕ್ಷಿಕಮ್ ಅಮೃತಮ್-**
ಹೋಲಿಕೆಯ ಮುಕ್ತಿ ; ಇತರ ಫಲಗಳಿಗೆ ಹೋಲಿಸಿದರೆ ಬಹುಕಾಲ ಇರುವ ಅಪರ ಬ್ರಹ್ಮಪ್ರಾಪ್ತಿ, ೪೨.

**34. ಆಪ್ಯಮ್ -**
ಪಡೆಯತಕ್ಕದ್ದು ; ಕರ್ಮಫಲದ ನಾಲ್ಕು ರೂಪಗಳಲ್ಲಿ ಒಂದು, ೧.

**35. ಆಭಾಸಃ -**
ಅದರಂತೆ ತೋರುವದು, ನೆರಳು, ಮನಸಿನಲ್ಲಿ ತೋರುವ ಆತ್ಮನ ಹೊಳಪು, ಇದನ್ನು ಚಿದಾಭಾಸವೆನ್ನುವರು, ೧೧.

**36. ಈಶ್ವರಃ -**
ಪರಮಾತ್ಮನು, ೧೯

**37. ಈಶ್ವರಭಾವನಾ,**
**ಈಶ್ವರಾತ್ಮಭಾವನಾ -**
ಇದೆಲ್ಲವೂ ಆತ್ಮನೇ ಎಂದು ಚಿಂತಿಸುವದು, ೩, ೪.

**38. ಉತ್ಪಾದ್ಯಮ್ -**
ಹುಟ್ಟಿಸತಕ್ಕದ್ದು ; ಕರ್ಮಫಲದ ನಾಲ್ಕು ರೂಪಗಳಲ್ಲಿ ಒಂದು, ೧.

**39. ಉಪಾಧಿಃ -**
ತಾನು ವಸ್ತುವಿನ ಭಾಗವಾಗಿರದೆ ಅದರಲ್ಲಿಲ್ಲದ ಧರ್ಮವನ್ನು ತೋರುವಂತೆ ಮಾಡುವ ವಸು. ಆತ್ಮನಿಗೆ ಅವನಲ್ಲಿಲ್ಲದ ಧರ್ಮವನ್ನು ಗೆಂಟುಹಾಕಿ ತೋರಿಸುವ ಶರೀರ, ಇಂದ್ರಿಯ, ಪ್ರಾಣ, ಮನಸು- ಇವುಗಳು ಅವನ ಉಪಾಧಿಯಾಗಿರುವವು, ೧೧.

**40. ಏಷಣಾತ್ರಯಮ್ -**
ಪುತ್ರ, ವಿತ್ತ, ಲೋಕ - ಇವುಗಳ ಬಯಕೆ, ೩, ೭, ೨೦, ೩೩.

**41. ಔಪಾಧಿಕಮ್ -**
ಉಪಾಧಿಯಿಂದಾಗಿರುವ ೩.

**42. ಕರ್ತೃತ್ವಭೋಕ್ತೃತ್ವಾದಿ -**
ಮಾಡುವವನು, ಅನುಭವಿಸುವವನು- ಎಂದು ಮುಂತಾಗಿ ಆತ್ಮನಲ್ಲಿ ಈಗ ಕಾಣುವ ಸಂಸಾರಧರ್ಮಗಳು, ೧.

**43. ಕರ್ಮ-**
(1) ಅಗ್ನಿಹೋತ್ರವೇ ಮುಂತಾದ ಕರ್ಮಗಳು, ೧, ೬, ೪೧.
(2) ಲೌಕಿಕವಾದ ಕೆಲಸ, ೨೬.

**44. ಕರ್ಮನಿಷ್ಠಾ-**
ಶಾಸ್ತ್ರೋಕ ಕರ್ಮಗಳಲ್ಲಿಯೇ ನೆಲೆ ನಿಲ್ಲುವದು, ೭, ೨೦.

**45. ಕರ್ಮಶೇಷತಾ**
ಕರ್ಮಕ್ಕೆ ಅಂಗವಾಗಿರುವದು, ೧

**46. ಕಾಮಕರ್ಮಬೀಜಮ್**
ಕಾಮ ಕರ್ಮಗಳಿಗೆ ಕಾರಣವಾಗಿರುವ ಶೋಕಮೋಹಗಳು ೧೩ ; ಕಾಮ ಕರ್ಮಗಳಿಗೆ ಬೀಜವಾಗಿರುವ ಅವಿದ್ಯಾ ಕಲ್ಪಿತವಾದ ಅವ್ಯಾಕೃತ, ೨೮.

**47. ಕಾರಣಮ್**
ಜಗತ್ತಿನ ಸೂಕ್ಷ್ಮಸ್ಥಿತಿ, ಅವ್ಯಾಕೃತ, ೨೮.

**48. ಕಾರಣಶರೀರಮ್**
ಜೀವನಿಗೆ ಸಂಸಾರವಿದೆಯೆಂಬ ಭಾವನೆಗೆ ಕಾರಣವಾಗಿರುವ ಅವಿದ್ಯೆ, ೧೯.

**49. ಕಾರ್ಯಬ್ರಹ್ಮ**
ಸತ್ಯಲೋಕದಲ್ಲಿರುವ ಹಿರಣ್ಯಗರ್ಭ ಅಪರ-ಬ್ರಹ್ಮ, ೨೮, ೩೦.

**50. ಕಾರ್ಯಕರಣಸಙ್ಘಾತಃ**
ಒಂದಕ್ಕೊಂದು ಸೇರಿಕೊಂಡು ಕೆಲಸ ಮಾಡುವ ಶರೀರೇಂದ್ರಿಯಗಳ ಒಟ್ಟು, ೧೫.

**51. ಕಾರ್ಯಕರಣವಿಕ್ರಿಯಾ-**
ಶರೀರೇಂದ್ರಿಯಗಳ ವ್ಯಾಪಾರ, ೧೨ ;

**52. ಕಾರ್ಯಕರಣಜಾತಾನಿ-**
ದೇಹರಾಶಿಗಳು, ೧೨,

**53. ಗೀತಾಃ-**
ಭಗವದ್ಗೀತೆಯ ಶ್ಲೋಕಗಳು, ೧.

**54. ಚೇತಯಿತಾ-**
ಅರಿಯುವ ಆತ್ಮ, ೧೫.

**55. ಚೈತನ್ಯಾಭಾಸಃ-**
ಅರಿವಿನ ತೋರಿಕೆ, ಚಿದಾಭಾಸ, ೧೧.

**56. ಜಾಮಿತಾ-**
ಮಾಡಿದ್ದನ್ನೇ ಮಾಡುವದು, ಪುನರುಕ್ತಿ, ೧೩, ೨೩.

**57. ಜಾಯಾದ್ಯೇಷಣಾತ್ರಯ-**
ಹೆಂಡತಿಯೇ ಮುಂತಾದ ಮೂರರ ಬಯಕೆ, ೨೦.

**58. ಜ್ಞಾನಮ್**
(1) ಉಪಾಸನೆ, ೨೨, ೨೪.
(2) ಅರಿವು, ಆತ್ಮನನ್ನು ಅರಿಯುವದು, ೫, ೭, ೨೦, ೨೧, ೩೩.

**59. ಜ್ಞಾನನಿಷ್ಠಾ**
ಜ್ಞಾನದಲ್ಲಿಯೇ ನೆಲೆ ನಿಲ್ಲುವದು, ೭, ೩೩.

**60. ತಮಃ**
ಕತ್ತಲೆ, ಅಜ್ಞಾನ, ೨೨, ೨೮.

**61. ತೈತ್ತಿರೀಯಕಮ್**
ಯಜುರ್ವೇದದ ತೈತ್ತಿರೀಯಶ್ರುತಿ, ೭.

**62. ತ್ಯಕ್ತೈಷಣಃ**
ಏಷಣಾತ್ರಯವನ್ನು ಬಿಟ್ಟ ಜ್ಞಾನಿ, ೪.

**63. ದಕ್ಷಿಣಮಾರ್ಗಃ**
ಕರ್ಮಿಗಳು ಪಿತೃಲೋಕವನ್ನು ಪಡೆಯುವದಕ್ಕೆ ಹೋಗಬೇಕಾದ ಮಾರ್ಗ, ೩೯.

**64. ದೃಷ್ಟಂ ಫಲಮ್**
ಕರ್ಮಕ್ಕೆ ಈ ಲೋಕದಲ್ಲಿಯೇ ಕಾಣಬರುವ ಬ್ರಹ್ಮವರ್ಚಸ್ಸೇ ಮುಂತಾದ ಫಲ, ೧.

**65. ದೇವತಾತ್ಮಗಮನಮ್**
ದೇವತೆಯ ಸ್ವರೂಪವನ್ನೇ ಪಡೆಯುವದು, ೨೬.

**66. ದೈವಂ ವಿತ್ತಮ್-**
ಉಪಾಸನೆ, ೨೦, ೩೩.

**67. ದ್ವೈತರೂಪಮ್-**
ಬಗೆಬಗೆಯಾಗಿ ಭಿನ್ನವಾಗಿರುವ ಜಗತ್ತು, ೩.

**68. ಧರ್ಮಾಧರ್ಮಾದಿಪಾಪಮ್-**
ಪುಣ್ಯಪಾಪಗಳೆಂಬ ಪಾಪ ; ಆತ್ಮಜ್ಞಾನದ ದೃಷ್ಟಿಯಿಂದ ಧರ್ಮವೂ ಪಾಪವೇ, ೧೯.

**69. ನಾಮರೂಪಕರ್ಮಾಖ್ಯಮ್-**
ಹೆಸರು, ಆಕಾರ, ಕೆಲಸ-ಎಂಬ ಮೂರು ರೂಪಗಳುಳ್ಳ, ೩.

**70. ನಾಮರೂಪಕ್ರಿಯಾತ್ಮಕಮ್-**
ನಾಮ, ರೂಪ, ಕರ್ಮ, - ಎಂಬ

ರೂಪದಲ್ಲಿ ಬೇರೆ ಬೇರೆಯಾಗಿ ತೋರು-ತ್ತಿರುವ ಜಗತ್ತು, ೧೪.

71. ನಿತ್ಯಚೈತನ್ಯಸ್ವರೂಪಮ್-
ಯಾವಾಗಲೂ ಇರುವ ಅರಿವಿನ ರೂಪವಾದ ಆತ್ಮತತ್ತ್ವ, ೧೨.

72. ನಿತ್ಯಮುಕ್ತಃ
ಎಂದೆಂದಿಗೂ ಮುಕ್ತನಾಗಿಯೇ ಇರುವ ಈಶ್ವರ, ೧೯.

73. ನಿರುಪಾಧಿಕಮ್-
ಉಪಾಧಿಯಿಲ್ಲದ (ಆತ್ಮ) ರೂಪ, ೧೧.

74. ನಿರ್ಗುಣಃ
ಯಾವ ಧರ್ಮವೂ ಇಲ್ಲದ (ಆತ್ಮ), ೧೫.

75. ನಿರ್ವಿಶೇಷಃ
ಇಂಥದ್ದೆಂಬ ವಿಶೇಷವಿಲ್ಲದ, ೧೫.

76. ನಿವೃತ್ತಿಮಾರ್ಗಃ-
ಎಲ್ಲವನ್ನೂ ಬಿಟ್ಟು ಆತ್ಮನ ಕಡೆಗೆ ಹಿಂತಿರುಗುವ ಮಾರ್ಗ, ೭, ೩೩.

77. ನಿಷೇಕಾದಿಶ್ಮಶಾನಾನ್ತಮ್-
ಗರ್ಭಾಧಾನದಿಂದ ಹಿಡಿದು ಅಂತ್ಯೇಷ್ಟಿ-ಯವರೆಗಿನ ಕರ್ಮ, ೩೩.

78. ಪರಮಾತ್ಮಾ-
ಎಲ್ಲಕ್ಕೂ ಹೆಚ್ಚಿನ ನಿಜವಾದ ಆತ್ಮನು, ೩.

79. ಪರಮಾತ್ಮಭಾವಃ
ಪರಮಾತ್ಮಸ್ವರೂಪ, ೯.

80. ಪರಮಾತ್ಮವಿದ್ಯಾ, ಪರಮಾತ್ಮ ಜ್ಞಾನಮ್....
ಪರಮಾತ್ಮನನ್ನು ಅರಿತು ಕೊಳ್ಳುವದು, ೨೧, ೪೧, ೪೨.

81. ಪರಮಾರ್ಥವಸ್ತು-
ನಿಜವಾದ ವಸ್ತು, ೧೭.

82. ಪರಮಾರ್ಥಸತ್ಯಮ್-
ನಿಜವಾಗಿಯೂ ಸತ್ಯವಾಗಿರುವ ಆತ್ಮ, ೩.

83. ಪರಮಾರ್ಥಾತ್ಮಾ-
ನಿಜವಾಗಿಯೂ ಆತ್ಮನಾಗಿರುವ ಆತ್ಮನು, ೧೭.

84. ಪರಮೇಶ್ವರಃ
ಹೆಚ್ಚಿನ ಈಶ್ವರನು, ಎಲ್ಲವನ್ನೂ ಆಳುವ ಆತ್ಮನು, ೩.

85. ಪರಿವ್ರಾಟ್-
ಸಂಚರಿಸುತ್ತಿರುವ ಪರಮಹಂಸಸಂನ್ಯಾಸಿ, ೧೫.

86. ಪುತ್ರಾದ್ಯೇಷಣಾತ್ರಯಮ್-
ಮಗನೇ ಮುಂತಾದ ಮೂರರ ಬಯಕೆ, ಜ್ಞಾನಕ್ಕೆ ಅಡ್ಡಿ, ೩, ೫.

87. ಪುರುಷಃ
(1) ಮನುಷ್ಯ, ೨೬.
(2) ಪ್ರಾಣಬುದ್ಧ್ಯಾತ್ಮನಾದಹಿರಣ್ಯಗರ್ಭ, ೩೬.

88. ಪುರುಷಾರ್ಥಃ
ಪುರುಷನು ಬಯಸುವ ಗತಿ, ೨೬, ೩೧.

89. ಪೌರಾಣಿಕಾಃ
ಪುರಾಣವನ್ನು ಬರೆದಿರುವವರು ಅಥವಾ ಬಲ್ಲವರು, ೩೧.

90. ಪ್ರಕೃತಿಃ
ಜಗತ್ತಿನ ಸೂಕ್ಷ್ಮಕಾರಣ, ಅವ್ಯಾಕೃತ, ಅವ್ಯಕ್ತ, ೨೮.

91. ಪ್ರಕೃತಿಲಯಃ-
ಅವ್ಯಕ್ತಾತ್ಮನು ಅಡಗುವ ಉತ್ತಮಸ್ಥಿತಿ ೩೦, ೩೨, ೩೩.

92. ಪ್ರಜಾಪತಯಃ-
ಜೀವರನ್ನು ಸೃಷ್ಟಿಸುವ ಬ್ರಹ್ಮರು, ೧೯.

93. ಪ್ರತೀಕಮ್-
ಉಪಾಸ್ಯ ದೇವತೆಗೆ ಬದಲಾಗಿಟ್ಟುಕೊಳ್ಳುವ ಓಂಕಾರವೇ ಮುಂತಾದ ಗುರುತು, ೩೭.

94. ಪ್ರತ್ಯಗಾತ್ಮಾ-
ಒಳಗಿರುವ ಆತ್ಮ, ೩.

95. ಪ್ರತ್ಯಯಃ-
ವಿಷಯವನ್ನು ತಿಳಿಸುವ ಮನಸ್ಸಿನ ವೃತ್ತಿ, ೧೫.

96. ಪ್ರಯೋಜನಮ್-
ಅಧಿಕಾರಿ, ಅಭಿಧೇಯ, ಪ್ರಯೋಜನ (ಫಲ), ಸಂಬಂಧ - ಎಂಬ ನಾಲ್ಕು ಅನುಬಂಧಗಳು ಗ್ರಂಥಕ್ಕೆ ಇರಬೇಕು,೨.

97. ಪ್ರವರ್ಗ್ಯಾನ್ತಂ ಬ್ರಾಹ್ಮಣಮ್-
ಶುಕ್ಲ ಯಜುರ್ವೇದದ ಕರ್ಮ ಭಾಗವನ್ನು

ವಿವರಿಸುವ ಭಾಗ, ೩೩.

**98. ಪ್ರವೃತ್ತಿಲಕ್ಷಣಧರ್ಮಃ-**
ವಿಧಿನಿಷೇಧಗಳನ್ನು ಪಾಲಿಸುವ ಧರ್ಮ, ೩೩.

**99. ಬೃಹದಾರಣ್ಯಕಮ್-**
ಶುಕ್ಲ ಯಜುರ್ವೇದದ ಸಂಹಿತೆಯೂ ಬ್ರಾಹ್ಮಣವೂ ಆದಬಳಿಕ ಜ್ಞಾನವನ್ನು ವಿವರಿಸುವದಕ್ಕೆ ಬಂದಿರುವ ಭಾಗ, ೩೩.

**100. ಬ್ರಹ್ಮಲೋಕಃ-**
ಹಿರಣ್ಯಗರ್ಭನಿರುವ ಸತ್ಯಲೋಕ, ೧೧.

**101. ಮನಃ-**
ಸಂಕಲ್ಪ ವಿಕಲ್ಪಾತ್ಮಕವಾದ ಅಂತಃಕರಣ, ೧೧.

**102. ಮಾನುಷವಿತ್ತಮ್-**
ಗೋವು ಮುಂತಾದವುಗಳು, ಅವುಗಳ ಸಹಾಯದಿಂದ ಮಾಡುವ ಕರ್ಮ, ೩೩.

**103. ಮಾರ್ಗಯಾಚನಮ್-**
ಉಪಾಸಕನು ಬ್ರಹ್ಮಲೋಕಕ್ಕೆ ಹೋಗುವ ಮಾರ್ಗವನ್ನು ಬೇಡಿಕೊಳ್ಳುವದು, ೩೮, ೪೨.

**104. ಮಿಥ್ಯಾ-**
ಹುಸಿತೋರಿಕೆಯು, ೪.

**105. ಮುಮುಕ್ಷುಃ-**
ಮೋಕ್ಷವನ್ನು ಬಯಸುವವನು, ೧೫.

**106. ಮೃತ್ಯುಃ-**
(1) ಲೌಕಿಕವಾದ ಜ್ಞಾನಕರ್ಮಗಳು, ೨೬.
(2) ಅನೈಶ್ವರ್ಯವು, ಅಧರ್ಮಾದಿ- ಗಳು, ೩೨.

**107. ಮೋಕ್ಷಧರ್ಮಾಃ-**
ಭಾರತದ ಶಾಂತಿಪರ್ವದಲ್ಲಿ ಮೋಕ್ಷ ವಿಚಾರವನ್ನು ತಿಳಿಸುವ ಭಾಗ, ೧.

**108. ಲಿಙ್ಗಮ್, ಲಿಙ್ಗಶರೀರಮ್-**
ಮನಸ್ಸು ಮುಂತಾದವುಗಳಿಂದಾಗಿರುವ ಸೂಕ್ಷ್ಮ ಶರೀರ, ೧೯, ೩೭.

**109. ಲೋಕಬುದ್ಧಿಸಿದ್ಧಮ್-**
ಸಾಮಾನ್ಯರ ತಿಳಿವಳಿಕೆಗೆ ಗೊತ್ತಿರುವ, ೧.

**110. ಲೋಕಾಃ-**
ಕರ್ಮಫಲವನ್ನು ಅನುಭವಿಸುವ ಸ್ಥಲ- ಗಳು, ೯.

**111. ವಿಕಲ್ಪಃ-**
(1) ವಿಧವಿಧವಾಗಿ ಕಲ್ಪಿಸುವ ಮನಸ್ಸು, ೧೧.
(2) ಹೀಗೂ ಇರಬಹುದು, ಹಾಗೂ ಇರಬಹುದು ಎಂದು ಕಲ್ಪಿಸುವದು, ೪೨.

**112. ವಿಕಾರ್ಯಮ್-**
ಮಾರ್ಪಾಡಾಗತಕ್ಕದ್ದು ; ಕರ್ಮದ ಫಲಕ್ಕಿರುವ ನಾಲ್ಕು ರೂಪಗಳಲ್ಲಿ ಒಂದು, ೧.

**113. ವಿಕಾರಜಾತಮ್-**
ಕಾರ್ಯಸಮೂಹವು, ೩.

**114. ವಿದ್ಯಾ-**
(1) ಉಪಾಸನೆ, ೨೨, ೨೪, ೨೬.
(2) ಪರಮಾತ್ಮನನ್ನು ಅರಿತುಕೊಳ್ಳು- ವದು, ೨೦, ೩೬.

**115. ವೇದಾಚಾರ್ಯಃ-**
ವೇದಗಳನ್ನು ವಿಂಗಡಿಸಿದ ವ್ಯಾಸರು, ೭.

**116. ವೇದಾರ್ಥಃ-**
ವೇದದಲ್ಲಿರುವ ಧರ್ಮ, ೫, ೨೦, ೩೩.

**117. ವ್ಯಾಕೃತಮ್-**
ನಾಮ, ರೂಪ, ಕರ್ಮ - ಎಂದು ವಿಂಗಡಿಸಿಕೊಂಡಿರುವ ಜಗತ್ತು, ೨೭.

**118. ವ್ಯಾಸಃ-**
ವೇದವನ್ನು ವಿಂಗಡಿಸಿರುವ ವ್ಯಾಸರು, ೭.

**119. ಶಾಸ್ತ್ರಮ್-**
ವೇದವು, ೬, ೨೧, ೩೩, ೪೧.

**120. ಶಾಸ್ತ್ರ ಪ್ರಮಾಣಕಮ್, ಶಾಸ್ತ್ರ ಲಕ್ಷಣಮ್-**
ವೇದವೆಂಬ ಪ್ರಮಾಣದಿಂದ ತಿಳಿಯ ಬರತಕ್ಕದ್ದು, ೩೩, ೪೧.

**121. ಶ್ವೇತಾಶ್ವತರಾಃ-**
ಕೃಷ್ಣ ಯಜುರ್ವೇದದ ಒಂದು ಶಾಖೆಯನ್ನು ಅಧ್ಯಯನಮಾಡುವವರು,

೨೦.

**122. ಸಂಶಯಃ-**
ಹೀಗೆ ಹಾಗೆ ಎಂದು ಒಂದು ಪದಾರ್ಥದಲ್ಲಿ ಎರಡು ಕಡೆಗೆ ತೂಗಾಡುವ ಮನಸ್ಸಿನ ವೃತ್ತಿ, ೪೨.

**123. ಸಂಸಾರಧರ್ಮಾಃ-**
ಶೋಕ ಮೋಹ ಮುಂತಾದ ಸಂಸಾರಕ್ಕೆ ಕಾರಣವಾದ ಧರ್ಮಗಳು, ೨, ೧೧.

**124. ಸಂಸ್ಕಾರ್ಯಮ್-**
ಅತಿಶಯವನ್ನು ಹೊಂದತಕ್ಕದ್ದು ; ಕರ್ಮಫಲದ ನಾಲ್ಕು ರೂಪಗಳಲ್ಲಿ ಒಂದು, ೧.

**125. ಸಂವತ್ಸರಾಃ-**
ಪ್ರಜಾಪತಿಬ್ರಹ್ಮರು, ೧೯.

**126. ಸಙ್ಕಲ್ಪಃ-**
ಹೀಗೆ ಮಾಡುವೆನೆಂದು ಕಲ್ಪಿಸುವ ಮನಸ್ಸಿನ ವೃತ್ತಿ, ೧೧.

**127. ಸತ್ಯಮ್-**
(1) ನಿಜವಾಗಿರುವದು, ೩.
(2) ಅವಶ್ಯವಾಗಿ ಫಲವನ್ನು ಕೊಡುವದು, ೩೫.
(3) ಹಿರಣ್ಯಗರ್ಭನ ಮತ್ತು ಲಿಂಗಾತ್ಮನ ಹೆಸರು, ೩೫.

**128. ಸತ್ಯಾತ್ಮಾ-**
ಸೂರ್ಯನಲ್ಲಿಯೂ ಪುರುಷನಲ್ಲಿಯೂ ಇರುವ ಸತ್ಯವೆಂಬ ಹೆಸರಿನ ಅಪರಬ್ರಹ್ಮ, ಹಿರಣ್ಯಗರ್ಭ, ೩೪, ೩೫.

**129. ಸಂನ್ಯಾಸಃ-**
ಕರ್ಮವನ್ನು ಬಿಡುವದು, ೩, ೩೩,

**130. ಸಂನ್ಯಾಸೀ-**
ಕರ್ಮವನ್ನು ಬಿಟ್ಟವನು, ೭, ೨೦.

**131. ಸಪ್ತಾನ್ನಸರ್ಗಃ-**
ಕರ್ಮದ ಫಲವಾಗಿ ಹುಟ್ಟುವ ಏಳು ಅನ್ನಗಳು, ೨೦.

**132. ಸಮುಚ್ಚಯಃ-**
ಕರ್ಮೋಪಾಸನೆಗಳನ್ನೂ ವ್ಯಾಕೃತಾ ವ್ಯಾಕೃತೋಪಾಸನೆಗಳನ್ನೂ ಕೂಡಿಸಿ ಅನುಷ್ಠಾನ ಮಾಡುವದು, ೨೩, ೨೯, ೩೧, ೪೧, ೪೨.

**133. ಸಂಬನ್ಧಃ-**
ಹಿಂದಿನ ಗ್ರಂಥಕ್ಕೂ ಈ ಗ್ರಂಥಭಾಗಕ್ಕೂ ಈ ಗ್ರಂಥದಲ್ಲಿರುವ ವಿಷಯಕ್ಕೂ ಪ್ರಯೋಜನಕ್ಕೂ ಇರುವ ಸಂಬಂಧವು, ೨.

**134. ಸರ್ವಜ್ಞಃ-**
ಎಲ್ಲವನ್ನೂ ಬಲ್ಲವನು, ಈಶ್ವರ, ೧೯.

**135. ಸರ್ವಪ್ರತ್ಯಯಸಾಕ್ಷೀ-**
ಎಲ್ಲಾ ಅಂತಃಕರಣದ ಅರಿವುಗಳನ್ನೂ ನೇರಾಗಿ ನೋಡುವ ಆತ್ಮನು, ೧೫.

**136. ಸರ್ವಭೂತಾನಿ-**
ಸ್ಥಾವರಜಂಗಮಪ್ರಾಣಿಗಳೆಲ್ಲವೂ, ೧೫.

**137. ಸರ್ವಾತ್ಮಭಾವಃ-**
ಎಲ್ಲಕ್ಕೂ ಆತ್ಮನಾಗುವಿಕೆ, ೩೩.

**138. ಸಾಕ್ಷೀ-**
ತನ್ನಲ್ಲಿ ಯಾವ ವಿಕಾರವೂ ಇಲ್ಲದೆಯೇ ನೇರಾಗಿ ನೋಡುವ ಆತ್ಮ, ೧೫.

**139. ಸಾಧ್ಯಸಾಧನಭೇದಃ-**
ಇದನ್ನು ಪಡೆಯುವದಕ್ಕೆ ಇದು ಸಾಧನವು ಎಂಬ ಭೇದ, ೨೧.

**140. ಸೂತ್ರಮ್, ಸೂತ್ರಾತ್ಮಾ-**
ಕ್ರಿಯಾಪ್ರಧಾನವಾಗಿರುವ ಅಪರಬ್ರಹ್ಮ, ವಾಯು, ೨೧.

**141. ಸೋಪಾಧಿಕಮ್-**
ಉಪಾಧಿಯಿಂದ ತೋರುವ ಆತ್ಮರೂಪ, ೧೧.

**142. ಸ್ಥೂಲಶರೀರಮ್-**
ಇಂದ್ರಿಯಗಳಿಗೆ ಗೋಚರವಾಗುವ ಪ್ರಸಿದ್ಧವಾದ ಶರೀರವು, ೧೯.

**143. ಸ್ವಾಭಾವಿಕಮ್-**
(1) ವಿಚಾರವಿಲ್ಲದ ಸ್ವಭಾವದ, ೨, ೩.
(2) ಸ್ವರೂಪವಾದ, ೧೨.

**144. ಹಿರಣ್ಯಗರ್ಭಃ-**
ಕಾರ್ಯಬ್ರಹ್ಮ, ಅಪರಬ್ರಹ್ಮ; ಉಪಾಸನೆ- ಯಿಂದ ಪಡೆಯ ಬೇಕಾಗಿರುವ ಉತ್ತಮಗತಿ, ೨೮, ೩೨.

## ಅಧ್ಯಾತ್ಮವಿದ್ಯೆಯ ಬೊಕ್ಕಸವಾಗಿರುವ ಶಾಂಕರಭಾಷ್ಯ ಸಮೇತ ಉಪನಿಷತ್ತುಗಳು

1. **ಈಶಾವಾಸ್ಯೋಪನಿಷತ್ತು :** ತಮ್ಮ ಕೈಯಲ್ಲಿದೆ. ಇದರಲ್ಲಿ ಕರ್ಮ, ಉಪಾಸನೆ, ಜ್ಞಾನ - ಇವುಗಳ ಸಂಬಂಧವನ್ನು ಸ್ಪಷ್ಟಪಡಿಸಿರುತ್ತದೆ. ಮಾಧ್ಯಂದಿನ ಪಾಠವನ್ನೂ ಕೊಡಲಾಗಿದೆ. ತಿದ್ದಿದ ನೂತನ ಸಂಸ್ಕರಣ. (ಪುಟಗಳು - ೬೪)
2. **ಕೇನೋಪನಿಷತ್ತು :** ಚೈತನ್ಯಸ್ವರೂಪವಾದ ಬ್ರಹ್ಮದ ಶಕ್ತಿಯಿಂದಲೇ ಎಲ್ಲವೂ ತಮ್ಮ ತಮ್ಮ ಕೆಲಸಗಳನ್ನು ಮಾಡುವವು - ಎಂಬುದನ್ನು ಸ್ಪಷ್ಟಪಡಿಸುತ್ತದೆ. ಹೊಸ ಸಂಸ್ಕರಣ. (ಪುಟಗಳು ೧೧೨)
3. **ಕಾಠಕೋಪನಿಷತ್ತು :** ಧರ್ಮಾಧರ್ಮಗಳಿಗೂ ಕಾಲತ್ರಯಕ್ಕೂ ಕಾರ್ಯಕಾರಣ ಭಾವಕ್ಕೂ ಕಟ್ಟುಬೀಳದ ಬ್ರಹ್ಮವೇ ನಮ್ಮ ಆತ್ಮನು - ಎಂದು ತಿಳಿಸುತ್ತದೆ. ಹೊಸ ಸಂಸ್ಕರಣ. (ಪುಟಗಳು ೨೦೮)
4. **ಮುಂಡಕೋಪನಿಷತ್ತು :** ವೇದೋಕ್ತವಾದ ವಿದ್ಯೆಯನ್ನು ಪರವಿದ್ಯೆ, ಅಪರವಿದ್ಯೆ - ಎಂದು ಎರಡು ವರ್ಗಗಳಾಗಿ ವಿಂಗಡಿಸಿ ಜಗತ್ಕಾರಣವಾದ ಅಕ್ಷರವೆಂಬ ಹೆಸರಿನ ಅದ್ವಿತೀಯಬ್ರಹ್ಮವನ್ನು ತಿಳಿಸುವ ವಿದ್ಯೆಯೇ ಪರವಿದ್ಯೆ ಎಂದು ಪ್ರತಿಪಾದಿಸಿದೆ. ಹೊಸ ಸಂಸ್ಕರಣ. (ಪುಟಗಳು ೧೬೦)
5. **ಪ್ರಶ್ನೋಪನಿಷತ್ತು :** ಮುಂಡಕೋಪನಿಷತ್ತಿನ ವಿಷಯವನ್ನು ಇಲ್ಲಿ ವಿವರಿಸಿದೆ. ಅಕ್ಷರಾಖ್ಯ ಪರಮಾತ್ಮನ ಜ್ಞಾನದಿಂದ ಸದ್ಯೋಮುಕ್ತಿಯೂ ಉಪಾಸನೆಯಿಂದ ಕ್ರಮಮುಕ್ತಿಯೂ ಆಗುವದೆಂದು ವರ್ಣಿಸಿದೆ. (ಪುಟಗಳು ೧೬೮)
6. **ಮಾಂಡೂಕ್ಯೋಪನಿಷತ್ತು :** ಎಚ್ಚರ, ಕನಸು, ತನಿನಿದ್ರೆ - ಎಂಬ ಮೂರವಸ್ಥೆಗಳ ಸೋಂಕೂ ಇಲ್ಲದೆ ನಿರ್ಮಲವಾಗಿರುವ ನಮ್ಮೆಲ್ಲರ ಆತ್ಮವಾದ ಬ್ರಹ್ಮದ ಸ್ವರೂಪವನ್ನು ಅನುಭವಾನುಸಾರವಾಗಿ ವರ್ಣಿಸಿರುತ್ತದೆ. ಶ್ರೀಗೌಡಪಾದರು ಬರೆದಿರುವ ನಾಲ್ಕು ಪ್ರಕರಣಗಳುಳ್ಳ ಕಾರಿಕೆಗಳೂ ಶಾಂಕರಭಾಷ್ಯಸಮೇತ ಈ ಉಪನಿಷತ್ತಿಗೆ ಇರುವುದೊಂದು ವಿಶೇಷ. (ಪುಟಗಳು ೩೬೦)
7. **ಐತರೇಯೋಪನಿಷತ್ತು :** ಈ ಉಪನಿಷತ್ತಿನಲ್ಲಿ ಮುಖ್ಯವಾಗಿ ಕರ್ಮಸಂಬಂಧ ವಿಲ್ಲದ ಆತ್ಮನ ವಿಚಾರವನ್ನೇ ಹೇಳಿದೆ ಎಂಬುದು ಒಂದು, ಆತ್ಮನು ಅದ್ವಿತೀಯ ನಿರ್ವಿಶೇಷ ಚಿನ್ಮಾತ್ರನು ಎಂಬುದು ಇನ್ನೊಂದು. ಹೀಗೆ ಈ ಎರಡು ವಿಚಾರಗಳು ಸಿದ್ಧಾಂತಕ್ಕೆ ಅಡಿಗಟ್ಟಾಗಿವೆ. ತಿದ್ದಿದ ಸಂಸ್ಕರಣ. (ಪುಟಗಳು ೧೨೮)

(ರಕ್ಷಾ ಪತ್ರದ 3 ನೆಯ ಪುಟವನ್ನು ನೋಡಿ)

8. **ತೈತ್ತಿರೀಯೋಪನಿಷತ್ತು** : ಇದರಲ್ಲಿ ಶಿಕ್ಷಾವಲ್ಲಿ, ಆನಂದವಲ್ಲಿ, ಭೃಗುವಲ್ಲಿ ಎಂಬ ಮೂರು ಭಾಗಗಳಿವೆ. ಕರ್ಮಗಳಿಗೂ ಜ್ಞಾನಕ್ಕೂ ಇರುವ ಸಂಬಂಧ, ಪರಬ್ರಹ್ಮ ಪ್ರಾಪ್ತಿಗೂ ಅಪರಬ್ರಹ್ಮ ಪ್ರಾಪ್ತಿಗೂ ಇರುವ ತಾರತಮ್ಯ, ನಿರ್ವಿಶೇಷವಾದ ಬ್ರಹ್ಮಾನಂದವನ್ನು ಇಲ್ಲಿಯೇ ಅನುಭವಕ್ಕೆ ತಂದುಕೊಂಡರೆ ಪರಮಮುಕ್ತಿಯು ಲಭಿಸುವುದು - ಎಂಬುದರ ರಹಸ್ಯ, ದ್ವೈತವೂ ಜೀವಸಂಸಾರಿತ್ವವೂ ಅವಿದ್ಯಕವೆಂಬುದು, ವಿದ್ಯಾವಿದ್ಯೆಗಳು ಆತ್ಮನ ಧರ್ಮವಲ್ಲ - ಎಂಬಿವೇ ಮುಂತಾದ ವಿಷಯಗಳನ್ನು ಇಲ್ಲಿ ಪ್ರತಿಪಾದಿಸಿದೆ. ಹೊಸ ಸಂಸ್ಕರಣ. (ಪುಟಗಳು ೩೩೬)

9. **ಛಾಂದೋಗ್ಯೋಪನಿಷತ್ತು** : ಈ ಉಪನಿಷತ್ತು ಸಾಮವೇದಕ್ಕೆ ಸೇರಿದ್ದು. ಇದರಲ್ಲಿ ಮೊದಲನೆಯ ಐದು ಅಧ್ಯಾಯಗಳಲ್ಲಿ ಕ್ರಮವಾಗಿ ಉಪಾಸನೆಗಳ ವಿವರಗಳನ್ನು ವಿಸ್ತಾರವಾಗಿ ತಿಳಿಸಿ ಅನಂತರ ಆರನೆಯ ಅಧ್ಯಾಯದಿಂದ ಮುಂದೆ ಆತ್ಮಜ್ಞಾನವನ್ನು ಪ್ರತಿಪಾದಿಸಿದೆ. ಈ ಉಪನಿಷತ್ತಿನಲ್ಲಿರುವ ವಿಷಯ ವಾಕ್ಯಗಳು ಬ್ರಹ್ಮಸೂತ್ರಭಾಷ್ಯದಲ್ಲಿ ವಿಚಾರಕ್ಕೆ ಬಹಳವಾಗಿ ತೆಗೆದುಕೊಳ್ಳಲ್ಪಟ್ಟಿವೆ. **ತತ್ತ್ವ**ಮಸಿಮಹಾವಾಕ್ಯದ ವಿಸ್ತಾರವಾದ ವಿವರವು ಇದರಲ್ಲಿಯೇ ಸೇರುವದು. ಭೂಮವಿದ್ಯೆ, ದಹರವಿದ್ಯೆ - ಮುಂತಾದ ಅನರ್ಘ್ಯವಿಷಯಗಳೂ ಇದರಲ್ಲಿ ಅಡಕವಾಗಿವೆ. ಶಾಂಕರವೇದಾಂತದ ಅಮೋಘ ವಿಚಾರಗಳ ಮನನಕ್ಕೆ ಅತ್ಯುತ್ತಮ ಗ್ರಂಥವಿದು. (ಪುಟಗಳು ೧೧೦೦)

10. **ಬೃಹದಾರಣ್ಯಕೋಪನಿಷತ್ತು (1-2ನೆಯ ಭಾಗಗಳು)** : ಹೆಸರಿಗೆ ತಕ್ಕಂತೆ ಉಪನಿಷತ್ತುಗಳಲ್ಲೆಲ್ಲ ದೊಡ್ಡದಾಗಿರುವ, ಶುಕ್ಲಯಜುರ್ವೇದಕ್ಕೆ ಸೇರಿರುವ ಈ ಉಪನಿಷತ್ತಿಗೆ ಆಚಾರ್ಯರು ವಿಸ್ತಾರವಾಗಿ ಭಾಷ್ಯವನ್ನು ಬರೆದಿರುತ್ತಾರೆ. ಮಧುಕಾಂಡವೆಂದು ಪ್ರಸಿದ್ಧವಾಗಿರುವ ಇದರ ಮೊದಲನೆಯ ಎರಡು ಅಧ್ಯಾಯಗಳಲ್ಲಿ ಆಗಮಪ್ರಧಾನವಾಗಿ ತತ್ತ್ವವನ್ನು ತಿಳಿಸಿರುತ್ತದೆ. ಮೂರು-ನಾಲ್ಕನೆಯ ಅಧ್ಯಾಯಗಳು ಮುನಿಕಾಂಡವೆಂಬ ಹೆಸರಿನಿಂದ ತರ್ಕಪ್ರಧಾನವಾಗಿದ್ದು ಆಗಮೋಪಪತ್ತಿಗಳಿಂದ ತತ್ತ್ವವನ್ನು ವಿವರಿಸುತ್ತವೆ. ಕೊನೆಯ ಎರಡು ಅಧ್ಯಾಯಗಳು ಖಿಲಕಾಂಡವೆಂದು ಪ್ರಸಿದ್ಧವಾಗಿದ್ದು ಉಪಾಸನಾಭಾಗವನ್ನು ಒಳಗೊಂಡಿವೆ. ಆತ್ಮಸ್ವರೂಪವನ್ನು ಅವಸ್ಥಾತ್ರಯಪರೀಕ್ಷೆಯಿಂದ ಗೊತ್ತುಪಡಿಸುವ ವಿಚಾರಸರಣಿಯು ಇದರಲ್ಲಿ ಬಹಳ ಸುಂದರವಾಗಿದೆ. ಯಾಜ್ಞವಲ್ಕ್ಯ-ಮೈತ್ರೇಯೀ ಸಂವಾದ-ಮುಂತಾದ ಕಥಾರೂಪಗಳಿಂದ ತತ್ತ್ವವನ್ನು ಹೃದಯಂಗಮವಾಗಿ ಪ್ರತಿಪಾದಿಸುವ ಉಪನಿಷತ್ತಿದು. ಆಚಾರ್ಯರು ಈ ಭಾಷ್ಯದಲ್ಲಿ ಅನೇಕ ವಿಷಯಗಳ ವಿಸ್ತಾರವಾದ ಚರ್ಚೆಯನ್ನು ಮಾಡಿ ಈ ಉಪನಿಷತ್ತಿನ ರಹಸ್ಯಗಳನ್ನೆಲ್ಲ ಹೊರಗೆಡಹಿರುತ್ತಾರೆ. ಜಿಜ್ಞಾಸುಗಳು ಅವಶ್ಯವಾಗಿ ಸಂಗ್ರಹಿಸಬೇಕಾದ ಉಪನಿಷತ್ತಿದು. (ಪುಟಗಳು ೧-೭೩೬ : ೨-೧೦೧೦)

# ಶ್ರೀಶ್ರೀ ಸಚ್ಚಿದಾನಂದೇಂದ್ರ ಸರಸ್ವತೀ ಸ್ವಾಮಿಗಳವರ

## ಉಪನ್ಯಾಸಗಳು

ಉಪನಿಷತ್ತುಗಳ ಅಭಿಪ್ರಾಯವನ್ನು ಸರಳವಾದ ತಿಳಿಗನ್ನಡದಲ್ಲಿ ವಿವರಿಸುವ ಮಂಜರಿಗಳು.

| | | |
|---|---|---|
| ಈಶಾವಾಸ್ಯೋಪನ್ಯಾಸಮಂಜರಿ | ಪುಟಗಳು | ೩೩ |
| ಕೇನೋಪನ್ಯಾಸಮಂಜರಿ | ಪುಟಗಳು | ೪೮ |
| ಕಾಠಕೋಪನ್ಯಾಸಮಂಜರಿ | ಪುಟಗಳು | ೨೫೮ |
| ಪ್ರಶ್ನೋಪನ್ಯಾಸಮಂಜರಿ | ಪುಟಗಳು | ೮೮ |
| ಮುಂಡಕೋಪನ್ಯಾಸಮಂಜರಿ | ಪುಟಗಳು | ೮೮ |
| ಮಾಂಡೂಕ್ಯೋಪನ್ಯಾಸಮಂಜರಿ | ಪುಟಗಳು | ೧೧೬ |

ಈ ಮಂಜರಿಗಳಲ್ಲಿ ಉಪನಿಷತ್ತಿನ ಭಾಷ್ಯಾಭಿಪ್ರಾಯವನ್ನು ಅನುಸರಿಸಿಯೇ ವಿವರಗಳನ್ನು ಕೊಟ್ಟಿದೆ. ಉಪನಿಷತ್ತಿನ ಒಟ್ಟರ್ಥವನ್ನು ತಿಳಿಯುವುದಕ್ಕೆ ತುಂಬ ಸಹಾಯಕವಾಗಿವೆ. ಮೊದಲು ಈ ಗ್ರಂಥಗಳನ್ನು ಓದಿ ಅನಂತರ ಉಪನಿಷತ್ತಿನ ಮೂಲ ಭಾಷ್ಯವನ್ನೋದಿದರೆ ಅನೇಕ ವಿಷಯಗಳು ಸುಲಭವಾಗಿ ತಿಳಿಯಲು ಅನುಕೂಲವಾಗುವುದು. ವಾಚಕರು ಉಪನಿಷತ್ತುಗಳನ್ನು ಭಾಷ್ಯಸಮೇತ ಅಧ್ಯಯನ ಮಾಡುವುದಕ್ಕೆ ಮುಂಚೆ ಮಂಜರಿಗಳನ್ನು ಅವಶ್ಯಕವಾಗಿ ಓದಬೇಕು.

ವಿಶೇಷ ವಿವರಗಳಿಗೆ ಮತ್ತು ಪುಸ್ತಕಗಳ ಪೂರ ಬೆಲೆ ಪಟ್ಟಿಗೆ ಬರೆದುಕೊಳ್ಳಿರಿ.

---

ಅಧ್ಯಾತ್ಮಪ್ರಕಾಶಕಾರ್ಯಾಲಯ
ಹೊಳೆನರಸೀಪುರ
ಹಾಸನಜಿಲ್ಲೆ 573211
08175-73820

ಅಧ್ಯಾತ್ಮಪ್ರಕಾಶಕಾರ್ಯಾಲಯ
ತ್ಯಾಗರಾಜನಗರ
ಬೆಂಗಳೂರು 560 028.
625548